ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 23 ಸೋಮವಾರ 2023

₹4

ಸಂಪುಟ: 44 | ಸಂಚಿಕೆ: 188 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನವರಾತ್ರಿಯಲ್ಲಿ ಜೀವ ತಳೆಯುವ ಬೊಂಬೆಗಳು



ಮೈಸೂರು, ಅ.22(ಎಂಕೆ)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ನವರಾತ್ರಿ ಆಚರಣೆಯಲ್ಲಿ ಬೊಂಬೆಗಳಿಗೂ ಜೀವ ಬರುತ್ತದೆ...!

ಹೌದು! ನವರಾತ್ರಿಯ ವೇಳೆ ಮನೆಗಳಲ್ಲಿ ಬೊಂಬೆಗಳನ್ನಿಟ್ಟು ಪೂಜಿಸುವುದು ನಾಡಿನ ಸಂಸ್ಕೃತಿ, ಸಂಸ್ಕಾರ ಹಾಗೂ ಕಲೆಯನ್ನು ಬಿಂಬಿಸುತ್ತದೆ. ಅಲ್ಲದೆ ಬೊಂಬೆಗಳನ್ನು ಕೂರಿಸುವುದು ಪ್ರತೀತಿಯಾಗಿ ಬೆಳೆದುಬಂದಿದ್ದು, ಹಲವಾರು ಬೊಂಬೆಗಳನ್ನು ಕೂರಿಸುವ ಮೂಲಕ ನವರಾತ್ರಿ ಸಂಭ್ರಮವನ್ನು ಇಮ್ಮಡಿಗೊಳಿಸುತ್ತಾರೆ.

ಆಶ್ವಿಜ ಮಾಸದಲ್ಲಿ ಬೊಂಬೆಗಳ ಪ್ರದರ್ಶನವನ್ನು ಪಾಡ್ಯದಿಂದ ವಿಜಯದಶಮಿವರೆಗೂ ಇಟ್ಟು ಪ್ರತಿ ದಿನ ನೈವೇದ್ಯ ಮಾಡಿ ಹಣ್ಣು ಕಾಯಿ ಇಟ್ಟು ಪೂಜಿಸುತ್ತಾರೆ. ಹಿರಿಯರು ಹೇಳಿರುವಂತೆ ನವರಾತ್ರಿಯಲ್ಲಿ ಬೊಂಬೆಗಳಿಗೂ ಜೀವ ಬಂದು ಎಲ್ಲರಿಗೂ ಆಶೀರ್ವಾದ ಮಾಡುತ್ತದೆ ಎಂಬ ಪ್ರತೀತಿ. ಅದರಂತೆ ಅನಾದಿಕಾಲದಿಂದಲೂ ಬೊಂಬೆಗಳನ್ನು ನಾಡಿನ ಜನ ಪೂಜೆ ಮಾಡುತ್ತಿರುವುದು ವಾಡಿಕೆಯಾಗಿದೆ.

ಕುದುರೆ ಸಾರೋಟು, ಪಟ್ಟದ ಆನೆ, ಗೋಪಿಕಾ ಸ್ತ್ರೀಯರು, ಮಂಗಳವಾದ್ಯ ನುಡಿಸುತ್ತಿರುವ ಗೊಂಬೆಗಳು, ಜೋಡಿ ಗೊಂಬೆ, ನಾಯಿ, ಹಸು, ಅರಮನೆಯ ಕಲಾಕೃತಿ, ಮಂಗಳ ಗೌರಿ, ನಾಲ್ಕು ಕುದುರೆಗಳ ಸಾರೋಟು, ಶ್ರೀ ಕೃಷ್ಣ ಸುಮಧ್ವ ತೊಟ್ಟ ಮಕ್ಕಳು, ಅರಿಶಿನ ಕುಂಕುಮ ಬಟ್ಟಲು, ಶ್ರೀ ಕೃಷ್ಣನ ಬಾಲಲೀಲೆ ಹೀಗೆ ಸಾಕಷ್ಟು ಬೊಂಬೆಗಳನ್ನು ಜೋಡಿಸಲಾಗುತ್ತದೆ.

ಬೊಂಬೆ ಕೂರಿಸುವ ಸ್ಪರ್ಧೆ: ಬೊಂಬೆಗಳನ್ನು ಕೂರಿಸುವ ಸಂಪ್ರದಾಯವನ್ನು ಇನ್ನಷ್ಟು ಮೆರುಗುಗೊಳಿಸುವ ನಿಟ್ಟಿನಲ್ಲಿ ಕೆಲ ಸಂಘ–ಸಂಸ್ಥೆಗಳು ಬೊಂಬೆ ಕೂರಿಸುವ ಸ್ಪರ್ಧೆಯನ್ನು ಆಯೋಜಿಸುವ ಮೂಲಕ ಉತ್ತೇಜನ ನೀಡುತ್ತಿವೆ. ಪ್ರತಿ ಮನೆಗಳಿಗೆ ಭೇಟಿ ನೀಡಿ ಬೊಂಬೆಗಳನ್ನು ಯಾವ ರೀತಿ ಕೂರಿಸಿದ್ದಾರೆ. ಅದರಲ್ಲಿ ವೈಶಿಷ್ಟ್ಯವೇನೆಂಬುದನ್ನು ತಿಳಿದು ಬೊಂಬೆ ಕೂರಿಸಿದವರಿಗೆ ಬಹುಮಾನಗಳನ್ನು ನೀಡಲಾಗುತ್ತಿದೆ. ಅದರಂತೆ ಈ ವರ್ಷ ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ ಅವರ ಮನೆಯಲ್ಲಿ ಎಸ್.ವಿ.ಜಯಶ್ರೀ ಮರಿಗೌಡ ಅವರು, ಬೊಂಬೆಗಳನ್ನು ಜೋಡಿಸಿದ್ದು, ಅತ್ಯಂತ ಆಕರ್ಷಣೀಯವಾಗಿ ಕಾಣುತ್ತಿವೆ.

ಆಯುಧ ಪೂಜೆಯಲ್ಲಿ ವಸ್ತುಗಳ ಬೆಲೆ ಅಗ್ಗ; ವ್ಯಾಪಾರಸ್ಥರಿಗೆ ಸಂಕಷ್ಟ, ಗ್ರಾಹಕರಿಗೆ ಸಂತಸ

ಮೈಸೂರು, ಅ.22 (ಜಿಎಲ್‌ಯು)– ಈ ವರ್ಷದ ಆಯುಧ ಪೂಜೆಗೆ ಹೂವು, ಹಣ್ಣು, ಬೂದುಕುಂಬಳ ಕಾಯಿ, ಬಾಳೆ ಕಂದು ಸೇರಿದಂತೆ ಬಹುತೇಕ ವಸ್ತುಗಳ ಭಾರಿ ಪ್ರಮಾಣದಲ್ಲಿ ಮಾರುಕಟ್ಟೆಗೆ ಬಂದಿದ್ದರಿಂದ ಬೆಲೆ ಅಗ್ಗವಾಗಿತ್ತು ಸಾಮಾನ್ಯವಾಗಿ ಪ್ರತಿ ವರ್ಷದ ಆಯುಧ ಪೂಜೆಯಲ್ಲಿ ಪ್ರಮುಖವಾಗಿ ಹೂವು, ಬೂದ ಕುಂಬಳ ಕಾಯಿ, ಬಾಳೆ ಕಂದು ಬೆಲೆ ದುಬಾರಿಯಾಗಿರುತ್ತಿತ್ತು. ಬೆಲೆ ಕೈ ಸುಡುತ್ತಿದ್ದ ಕಾರಣ ಜನರು ಅಸಮಾಧಾನ ವ್ಯಕ್ತಪಡಿಸುತ್ತಿದ್ದರು.

ಆದರೆ ಈ ಬಾರಿ ಆಯುಧ ಪೂಜೆಗಾಗಿಯೇ ಹೆಚ್ಚಿನ ಪ್ರಮಾಣದಲ್ಲಿ ಸೇವಂತಿಗೆ ಹೂವು, ಬೂದುಕುಂಬಳಕಾಯಿ ಬೆಳೆದು ಮಾರುಕಟ್ಟೆಗೆ ತರಲಾಗಿತ್ತು. ಬಹುತೇಕ ಕಡೆ ಸೇವಂತಿಗೆ ಹೂವು, ಬೂದುಕುಂಬಳಕಾಯಿ ಮಾರಾಟವಾಗದೆ ವ್ಯಾಪಾರಸ್ಥರು ಗ್ರಾಹಕರಿಗಾಗಿ ದಾರಿ ಕಾಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಒಳ್ಳೆಯ ವ್ಯಾಪಾರವಾಗುತ್ತದೆ, ಲಾಭ ಮಾಡಬಹುದು ಎಂದು ಲೆಕ್ಕಾಚಾರ ಹಾಕಿ ಬಂಡವಾಳ ಹೂಡಿದ್ದೇವೆ. ಆದರೆ ವ್ಯಾಪಾರ ಕಡಿಮೆಯಾಗಿದೆ. ಈಗ ಹೇಗಾದರೂ ಮಾಡಿ ತಂದಿರುವುದನ್ನೆಲ್ಲಾ ಮಾರಾಟ ಮಾಡಬೇಕೆಂದು ಬೆಲೆ ಕಡಿಮೆ ಮಾಡಿ ಮಾರಾಟ ಮಾಡುತ್ತಿದ್ದೇವೆ ಎಂದು ವ್ಯಾಪಾರಸ್ಥರು ಹೇಳಿದರು.

ಸೇಬಿನ ಬೆಲೆಯೂ ಕೂಡ ಕಡಿಮೆಯಾಗಿದ್ದು, 100 ರೂಪಾಯಿಯಿಂದ 120 ರೂಪಾಯಿಗೆ ಮಾರಾಟ ಮಾಡಲಾಗುತ್ತಿದೆ. ಬೆಲೆ ಅಗ್ಗವಾಗಿರುವುದು ವ್ಯಾಪಾರಸ್ಥರ ಚಿಂತೆಗೆ ಕಾರಣವಾಗಿದ್ದರೆ, ಗ್ರಾಹಕರಿಗೆ ಸಂತೋಷದ ಸಂಗತಿಯಾಗಿತ್ತು.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.10.2023 ಸೋಮವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ತ್ರಯಂಬ್ಯಾಸ್ ಶ್ರೀ ವಿದ್ಯಾ ಫೌಂಡೇಷನ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 5ಕ್ಕೆ ಶ್ರೀ ವಾಂಛಾಕಲ್ಪಲತಾ ಶ್ರೀ ವಿದ್ಯಾ ಗಣೇಶ ಪರ್ಯಾಯ ಹೋಮ, ಬೆಳಗ್ಗೆ 10ಕ್ಕೆ ಸಪ್ತ ಮುಖ ನವಚಂಡಿ ಯಾಗ, ಮಧ್ಯಾಹ್ನ 1 ಗಂಟೆಗೆ ಪೂರ್ಣಾಹುತಿ, ಬಲಿ ಹರಣ, ಕುಮಾರಿ, ಸುಹಾಸಿನಿ, ದಂಪತಿ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ತ್ರಯಂಬ್ಯಾಸ್, ಜಯಲಕ್ಷ್ಮೀಪುರಂ.
■ **ಶ್ರೀ ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ 7.30ರಿಂದ ಉಪಚರಿ ವಿಜಯದಶಮಿ, ಸ್ಥಳ: ದೇವಸ್ಥಾನದ ಆವರಣ, ದೇವರಾಜ ಮೊಹಲ್ಲಾ.
■ **ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ಬೆಳಗ್ಗೆ ಶ್ರೀ ಮುಕ್ಕಣ್ಣೇಶ್ವರ ಸ್ವಾಮಿಗೆ ಅಭಿಷೇಕ, ಅಲಂಕಾರ, ಆಯುಧ ಪೂಜೆ, ಶ್ರೀ ರವಿಕಾಂತನಂದ ಸ್ವಾಮಿ ಅವರಿಂದ, ಸಂಜೆ ದೇವಿಗೆ ಸಿಂಹವಾಹನಾಲಂಕಾರ, ಸ್ಥಳ: ದೇವಸ್ಥಾನದ ಆವರಣ, ಅಶೋಕ ರಸ್ತೆ.
■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀ ಶ್ರೀ ದುರ್ಗಾ ಪೂಜೆ, ಮಹಾನವಮಿ, ಬೆಳಗ್ಗೆ ಶ್ರೀ ದುರ್ಗಾ ಮಾತೆಗೆ ಪೂಜೆ, ಚಂಡೀ ಪಾರಾಯಣ, ಭಜನೆ, ಆರತಿ ಹಾಗೂ ಪುಷ್ಪಾಂಜಲಿ, ಸಂಜೆ 7 ಗಂಟೆಗೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.
■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವ, ಬೆಳಗ್ಗೆ 9ರಿಂದ ಶ್ರೀ ದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ಚಂಡಿ ಹೋಮ, ನವಾವರಣ ಪೂಜೆ, ಕರ್ನಾಟಕ ಸಂಗೀತ ಗಾಯನ–ವಿದ್ವಾನ್ ಮೂರ್ತಿ ಗೌರಿನಾಥ್ ಅವರಿಂದ ಮಧ್ಯಾಹ್ನ 12 ಗಂಟೆಗೆ, ಅನ್ನಾರ್ಚನೆ ಶಕ್ತಿ ದುರ್ಗಿ ಪೂಜೆ, ಆಯುಧ ಪೂಜೆ, ಸಂಜೆ 4ಕ್ಕೆ ಮಹಾಮಂಗಳಾರತಿ ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ, ಪ್ರವಚನ, ಸ್ಥಳ: ನಾದ ಮಂಟಪ, ಊಟಿ ರಸ್ತೆ.
■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ–2023, ಬೆಳಗ್ಗೆ 6.30 ಗಂಟೆಗೆ ಸುಮಂಗಲಿಯರಿಂದ ಕುಂಕುಮಾರ್ಚನೆ, ಚಂಡಿಕಾ ಹೋಮ, ದಂಪತಿ ಪೂಜೆ, ಮಹಾಲಕ್ಷ್ಮಿ ಅಲಂಕಾರ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಸ್ಥಳ: ದೇವಸ್ಥಾನದ ಆವರಣ, ದೇವಸ್ಥಾನದ ರಸ್ತೆ, ವಿವಿ ಮೊಹಲ್ಲಾ.
■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.
■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್:** ಶರನ್ನವರಾತ್ರಿ ಪೂಜಾ ಮಹೋತ್ಸವ, ಆಶೀರ್ವಾದ: ಶ್ರೀ ವೆಂಕಟಾಚಲ ಅವಧೂತರು, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ದುರ್ಗಾ ಸಪ್ತಶತಿ ಪಾರಾಯಣ, ಚಂಡೀ ಹೋಮ, ಶ್ರೀರಾಮಮಂದಿರ, ಜಯನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಡಾ.ಪಿ.ಎಸ್.ಗೀತಾ, 6.15 ದಸರಾ ವಿಶೇಷ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು: ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, ಸಂಕಲನ: ಎಸ್. ಲಕ್ಷ್ಮೀನಾರಾಯಣ 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಸಿರಿಗನ್ನಡಂ ಗೆಲ್ಗೆ: ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ" ಪ್ರಾಯೋಜಿತ ಕಾರ್ಯಕ್ರಮ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ಮೈಸೂರು ಮಹಲುಗಳು: ರೂಪಕ ಸರಣಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ದಸರಾ ವಿಶೇಷ ಕಥಾ ಕಾಲಕ್ಷೇಪ– "ವಿರಾಟ ಪರ್ವ ಕಥೆ", ನಡೆಸಿಕೊಡುತ್ತಾರೆ ವಿ.ಮಾಲಿನಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.30 ರಾಜಮಾರ್ಗ: ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ– ಡಾ.ಮೈಸೂರು ಉಮೇಶ್. **ಮಧ್ಯಾಹ್ನ:** 12.30 "ಕನಕ–ಜಾನಕಿ" ತಾಳಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ–ದಿವಾಕರ ಹೆಗಡೆ, 12.45 ನಮ್ಮ ಆರೋಗ್ಯ: ಪ್ಲೇಟ್ಲೆಟ್ ಡಿಸಾರ್ಡರ್ ಕುರಿತು ಡಾ.ಅರುಣ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು: ಪುರುಷೋತ್ತಮ್, 3.00 ಆರ್.ಮೋಹನ್: ಕ್ಲಾರಿಯೋನೆಟ್ ವಾದನ. **ಸಂಜೆ:** 4.00 ಮಹಿಳಾರಂಗ: ಸುರಭಿ ಗಾನ ಕಲಾ ಮಂದಿರದ ಸದಸ್ಯರಿಂದ ಸಂಗೀತ ರೂಪಕ "ವಾಗ್ಗೇಯ ರಚನೆಗಳಲ್ಲಿ ಮಹಿಷಾಸುರ ಮರ್ದಿನಿ, 4.45 ಹಿಂದಿ ಪಾಠ: ಡಾ.ಸ್ಮಿತಾ ಚಿಪ್ಳೂಣ್‌ಕರ್, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು ಹೊನ್ನು" ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ. **ರಾತ್ರಿ:** 9.30 ಹಳ್ಳೀ ಹಾಡು: ಪ್ರಸ್ತುತಿ– ಅಬ್ದುಲ್ ರಶೀದ್, 10.00 ನಾಟಕ.

24.10.2023 – ಮಂಗಳವಾರ

ಬೆಳಗ್ಗೆ: 6.10ಚಿಂತನ, 6.15 ದಸರಾ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು: ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, ಸಂಕಲನ: ಎಸ್. ಲಕ್ಷ್ಮೀನಾರಾಯಣ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ: ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಸಿರಿಗನ್ನಡಂ ಗೆಲ್ಗೆ: ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ" ಪ್ರಾಯೋಜಿತ ಕಾರ್ಯಕ್ರಮ, 7.15 ಕಾದಂಬರಿ ವಿಹಾರ– ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 9.05 ಮೈಸೂರು ಮಹಲುಗಳು: ರೂಪಕ ಸರಣಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.00 ಗಾಯಿತ್ರಿ ವೆಂಕಟರಾಘವನ್: ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.20 ರಾಜಮಾರ್ಗ: ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ– ಡಾ. ಮೈಸೂರು ಉಮೇಶ್. **ಮಧ್ಯಾಹ್ನ:** 12.05 ವನಿತಾ ವಿಹಾರ– ಆಪ್ತ ಸಮಾಲೋಚಕಿ ಹಾಗೂ ರಂಗಭೂಮಿ ಕಲಾವಿದೆ ಸರಳಾ ನಟರಾಜ್ ಅವರೊಂದಿಗೆ ಮಾತುಕತೆ, 12.30 ದೇವರನಾಮ, 12.45 ಮೈಸೂರಿನಿಂದಾಗಿ ದಸರಾ: ದಸರೆಯಿಂದಾಗಿ ಮೈಸೂರು ಮಾತನಾಡುತ್ತಾರೆ ಡಾ. ವಿ. ರಂಗನಾಥ್, 1.20 ಭಾವಗೀತೆಗಳು– ಪ್ರಥಮ್ ಭಟ್, 1.30 ಮೈಸೂರು ಅರಮನೆ ಆವರಣದಲ್ಲಿ ನಡೆಯಲಿರುವ ದಸರಾ ಜಂಬೂ ಸವಾರಿಯ (ದಸರಾ ಮೆರವಣಿಗೆ) ನೇರ ವೀಕ್ಷಕವಿವರಣೆ ವೀಕ್ಷಕ ವಿವರಣೆಕಾರರು– ಡಾ. ಸುಮಾರಾಣಿ ಪಿ., ಎನ್. ಕೇಶವಮೂರ್ತಿ, ಪಿ.ಸಿ. ಮಳೀಮಠ್, ಡಾ. ಮೈಸೂರು ಉಮೇಶ್, ನಿರ್ವಹಣೆ– ಅಬ್ದುಲ್ ರಶೀದ್ ಪ್ರಾಯೋಜಕರು– ಕರ್ನಾಟಕ ರಾಜ್ಯ ರೇಷ್ಮೆ ಉದ್ಯಮ ನಿಗಮ ಮತ್ತು ಮೈಸೂರು ದಸರಾ ಮಹೋತ್ಸವ ಸಮಿತಿ 2023. **ಸಂಜೆ:** 6.50 ಕೃಷಿರಂಗ: ಭತ್ತದ ರೋಗಗಳ ಸಮಗ್ರ ನಿರ್ವಹಣೆ ಕುರಿತು ಸಂವಾದ, ಭಾಗವಹಿಸುವರು ಡಾ.ಎನ್.ಬಿ. ಸನತ್‌ಕುಮಾರ್ ಮತ್ತು ಡಾ. ಆರ್.ಎನ್. ಪುಷ್ಪಾ, 9.30 ಡಾ. ಪದ್ಮಾಮೂರ್ತಿ– ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ: ವಾಚನ– ಗಣೇಶ ಉಡುಪ ವ್ಯಾಖ್ಯಾನ– ಜಿ.ಎಸ್. ಮಂಜುನಾಥ್, 10.30 ಸವಿನೆನಪು.

ಪ್ರೊ.ಭಗವಾನ್ ವಿಚಾರದಲ್ಲಿ ಕೆಲ ಒಕ್ಕಲಿಗರಿಂದ ಅನಾಗರಿಕ ವರ್ತನೆ

ಸ್ವರಾಜ್ ಇಂಡಿಯಾ ಅಧ್ಯಕ್ಷ ಉಗ್ರನರಸಿಂಹೇಗೌಡ



ಮೈಸೂರು, ಅ.22(ಜಿಎ)–ಪ್ರೊ.ಕೆ. ಎಸ್.ಭಗವಾನ್ ಅವರ ವಿಚಾರದಲ್ಲಿ ಕುವೆಂಪು ಅವರ ಸಾಹಿತ್ಯವನ್ನಾಗಲಿ, ಭಾಷಣ ಮತ್ತು ಸಂದರ್ಶನಗಳನ್ನು ಓದಿಕೊಳ್ಳದೆ ಕೆಲ ಒಕ್ಕಲಿಗರು ಅನಾಗರಿಕರಂತೆ ವರ್ತಿಸುತ್ತಿದ್ದಾರೆ ಎಂದು ಸ್ವರಾಜ್ ಇಂಡಿಯಾ ಪಕ್ಷದ ಅಧ್ಯಕ್ಷ ಉಗ್ರನರಸಿಂಹೇಗೌಡ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಷಾ ದಸರಾ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಕೆ.ಎಸ್. ಭಗವಾನ್ ಅವರು 'ಒಕ್ಕಲಿಗರಂಥ ಮಹಾಮೂಢರು, ಅನ್ ಕಲ್ಚರ್ ಬ್ರೂಟ್ಸ್ ಮತ್ತೊಬ್ಬರಿಲ್ಲ' ಇದು ನನ್ನ ಮಾತಲ್ಲ ಕುವೆಂಪು ಹೇಳಿದ್ದು, ಎಂದರೂ ಒಕ್ಕಲಿಗರ ಸಂಘದ ಕೆಲವರು ಭಗವಾನ್ ಮನೆ ಮುಂದೆ ಪ್ರತಿಭಟನೆ ಮಾಡುತ್ತಿರುವುದು ಭಗವಾನ್ ಅವರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಿ ಎಂದು ಹೇಳುತ್ತಿರುವುದು ಸರಿಯಲ್ಲ ಎಂದರು.

ಈ ಪ್ರತಿಭಟನೆಯಲ್ಲಿ ಶ್ರೀರಾಮ ಸೇನೆ ಮತ್ತು ಬಜರಂಗ ದಳದವರೂ ಸೇರಿಕೊಂಡಿದ್ದಾರೆ. ಅಲ್ಲದೆ ಕೆಲವು ಶಾಸಕರು, ಮಾಜಿ ಮಂತ್ರಿಗಳು ಕುವೆಂಪು ಹಾಗೆ ಹೇಳಿಯೇ ಇಲ್ಲ. ಭಗವಾನ್ ಒಬ್ಬ ಮಾನಸಿಕ ಸ್ಥಿಮಿತ ಕಳೆದುಕೊಂಡಿರುವ ಅರೆಹುಚ್ಚ ಅವನನ್ನು ಬಂಧಿಸಿ ಎಂದು ಆಕ್ರೋಶ ವ್ಯಕ್ತಪಡಿಸುತ್ತಿರುವವರು ಯಾರೂ ಕುವೆಂಪು ಅವರ ಸಾಹಿತ್ಯವನ್ನಾಗಲಿ, ಭಾಷಣ ಮತ್ತು ಸಂದರ್ಶನಗಳನ್ನು ಓದಿಕೊಳ್ಳದೆ ಅನಾಗರಿಕರಂತೆ ವರ್ತಿಸುತ್ತಿದ್ದಾರೆ. ಈ ಹಿಂದೆ 1976ರಲ್ಲಿ ಡಿ.ಲಿಂಗಯ್ಯ ಅವರು ಕುವೆಂಪು ಅವರನ್ನು ಸಂದರ್ಶನ ಮಾಡಿರುವ ವೇಳೆ 'ಒಕ್ಕಲಿಗರಂಥ ಮಹಾಮೂಢರು, ಅನ್ ಕಲ್ಚರ್ ಬ್ರೂಟ್ಸ್ ಮತ್ತೊಬ್ಬರಿಲ್ಲ' ಎಂದು ಹೇಳಿದ್ದಾರೆ. ಅದು 'ಕುವೆಂಪು ದರ್ಶನ್' ಸಂದರ್ಶನ ಕೃತಿಯಲ್ಲಿದೆ. ಅದನ್ನು ಒಕ್ಕಲಿಗರು ಓದಿಕೊಂಡರೆ ಒಳಿತು ಎಂದರು.

ಭಗವಾನ್ ಅವರು ಯಾವುದೇ ಕ್ರಾಂತಿಕಾರಿ, ದಾರ್ಶನಿಕ ಮತ್ತು ಸಮಾಜ ಸುಧಾರಕ ವ್ಯಕ್ತಿಗಳ ಮಾತುಗಳನ್ನು ಉದಾಹರಿಸುವಾಗ ಆ ಮಾತುಗಳ ಚಾರಿತ್ರಿಕ ಸಂದರ್ಭದ ಮಹತ್ವಗಳನ್ನು ವಿವರಿಸುವ ವೇಳೆ ಗೊಂದಲ ಮೂಡಿಸುತ್ತದೆ. ಹೀಗೆ ಹೇಳುವುದು ಅವರಿಗೆ ಒಂದೂ ಚಾಳಿಯಾಗಿದ್ದು, ಹೀಗಾಗಿ ಭಗವಾನ್ ತಮ್ಮ ಉದ್ದೇಶದ ಕ್ರಿಯೆಯಲ್ಲಿ ಸೋಲುತ್ತಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಂಟೇಸ್ವಾಮಿ ಪರಂಪರೆ ರಕ್ಷಣಾ ಹೋರಾಟ ಸಮಿತಿಯ ಶಂಭುಲಿಂಗಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ದಸರಾ ಕಾರ್ಯಕ್ರಮ

■ **ಜಗನ್ಮೋಹನ ಅರಮನೆ ವೇದಿಕೆ**
ಸಂಜೆ 6ರಿಂದ ಗುಲ್ಬರ್ಗದ ಪಾರ್ವತಿ ಹುರ್ಕಿಮಠ ಅವರಿಂದ ಸುಗಮ ಸಂಗೀತ, 6.45ರಿಂದ ಪ್ರೇರಣ ಎಸ್. ನಾಯಕ್ ಅವರಿಂದ ಭರತನಾಟ್ಯ, ಸಂಜೆ 7.30ರಿಂದ ನಾಗಚಂದ್ರಿಕ ಭಟ್ ಅವರಿಂದ ಸುಗಮ ಸಂಗೀತ, ರಾತ್ರಿ 8.30ರಿಂದ ಹೊಸಪೇಟೆಯ ಶ್ರೀ ಅಂಜಲಿ ಭರತನಾಟ್ಯ ಕಲಾ ಕೇಂದ್ರದ ಅಂಜು ಎಸ್. ಅವರಿಂದ ಭರತನಾಟ್ಯ

■ **ಕರ್ನಾಟಕ ಕಲಾಮಂದಿರ ವೇದಿಕೆ**
ಸಂಜೆ 5.30 ರಿಂದ ಗೋಪಾಲರಾಜು ಮತ್ತು ತಂಡದಿಂದ ಕಂಸಾಳೆ, ಸಂಜೆ 6ರಿಂದ ತೀರ್ಥಹಳ್ಳಿಯ ಎಚ್.ಎಸ್. ಉಷಾ ಅವರಿಂದ ಭಕ್ತಿಗೀತೆ, ಸಂಜೆ 6.45ರಿಂದ ವಿಶಾಲ ಹರಿಕಿರಣ್‌ರಿಂದ ಕೂಚುಪುಡಿ ನೃತ್ಯ, ಸಂಜೆ 7.30ರಿಂದ ಸ್ವಾಮಿ ಗಾಮನಹಳ್ಳಿ ಮತ್ತು ತಂಡದಿಂದ ಸುಗಮ ಸಂಗೀತ, ರಾತ್ರಿ 8.30ರಿಂದ ಮೈಸೂರಿನ ಯಕ್ಷಗಾನದ ಡಿ. ತಿಪ್ಪಣ್ಣ ಅವರಿಂದ ಕರಿರಾಯ ಚರಿತ್ರೆ ಯಕ್ಷಗಾನ.

■ **ಗಾನಭಾರತಿ ವೇದಿಕೆ**
ಸಂಜೆ 6 ರಿಂದ ಮೈಸೂರಿನ ಹಂಸಿನಿ ಎಸ್. ಕುಮಾರ್ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 6.45ರಿಂದ ಬಾಗಲಕೋಟೆಯ ಮಂಜುಳ ಮ. ಸಂಬಾಳಮಠದ ಅವರಿಂದ ಶಾಸ್ತ್ರೀಯ ಸಂಗೀತ, ಸಂಜೆ 7.30ರಿಂದ ಪುತ್ತೂರಿನ ನೃತ್ಯೋಪಾಸನ ಕಲಾ ಕೇಂದ್ರದಿಂದ ಸಮೂಹ ನೃತ್ಯ, ರಾತ್ರಿ 8.30ರಿಂದ ಡಾ. ಲೋಕೇಶ್ ಐ.ಡಿ. ಮತ್ತು ತಂಡದಿಂದ ಸುಗಮ ಸಂಗೀತ.

■ **ನಾದಬ್ರಹ್ಮ ಸಂಗೀತ ವೇದಿಕೆ**
ಸಂಜೆ 6 ರಿಂದ ಡಾ. ಶ್ರೀದೇವಿ ಕುಳೇನೂರ್ ಅವರಿಂದ ಸುಗಮ ಸಂಗೀತ, ಸಂಜೆ 6.45ರಿಂದ ಭಾರ್ಗವಿ ಅಕಾಡೆಮಿ ಪೂರ್ಣಿಮಾ ಅವರಿಂದ ನೃತ್ಯರೂಪಕ, ಸಂಜೆ 7.30ರಿಂದ ಬೆಳಗಾವಿ ಯಾದವೇಂದ್ರ ಪೂಜಾರಿ ಅವರಿಂದ ಸುಗಮ ಸಂಗೀತ, ರಾತ್ರಿ 8.30ರಿಂದ ಮೈಸೂರಿನ ಪ್ರಿಯದರ್ಶಿನಿ ವಾಸುದೇವ್ ಅವರಿಂದ ಭರತನಾಟ್ಯ.

■ **ಚಿಕ್ಕಗಡಿಯಾರ ವೇದಿಕೆ**
ಸಂಜೆ 6 ರಿಂದ ಚಾಮರಾಜ ನಗರದ ಸಂಜು ಮತ್ತು ತಂಡದಿಂದ ಹುಲಿವೇಷ, ಸಂಜೆ 6.30ಕ್ಕೆ ಮೈಸೂರಿನ ತನುಮನ ಸಂಗೀತ ಸಂಸ್ಥೆಯಿಂದ ದಾರ್ಶನಿಕ ಸಂಗೀತ, ಸಂಜೆ 7 ಗಂಟೆಯಿಂದ ಶಂಕರ್ ದಮ್ಮನಿಂಗಳ ಅವರಿಂದ ಮೂಲಧಾಟಿ ಜನಪದ ಗಾಯನ, ಸಂಜೆ 7.30ರಿಂದ ಮೈಸೂರಿನ ಪ್ರದೀಪ್ ಮತ್ತು ಕಲಾವೃಂದದವರಿಂದ ಸುಗಮ ಸಂಗೀತ, ರಾತ್ರಿ 8ರಿಂದ ಮೈಸೂರಿನ ರಘು ಮತ್ತು ಕಲಾವೃಂದದಿಂದ ಸುಗಮ ಸಂಗೀತ, ರಾತ್ರಿ 8.30ರಿಂದ ಮೈಸೂರು ಮಂಜುಶ್ರೀ ಗಾನಕಲಾ ತಂಡದಿಂದ ಸುಗಮ ಸಂಗೀತ.

■ **ಪುರಭವನ ವೇದಿಕೆ**
ಬೆಳಗ್ಗೆ 10.30 ರಿಂದ ಬಳ್ಳಾರಿಯ ಬುರ್ರಕಥಾ ಈರಮ್ಮ ಫೌಂಡೇಷನ್‌ನಿಂದ ಶೂರ್ಪನಖಿ ಪ್ರೇಮಪ್ರಲಾಪ, ಮಧ್ಯಾಹ್ನ 3 ಗಂಟೆಗೆ ಮೈಸೂರಿನ ಸುರಭಿ ತಂಡದಿಂದ ಸಂಪೂರ್ಣ ರಾಮಾಯಣ, ಸಂಜೆ 6 ಗಂಟೆಗೆ ತುಮಕೂರಿನ ಎ.ಸಿ. ವಸಂತಕುಮಾರ್ ಅವರಿಂದ ಮೂಡಲಪಾಯ ಯಕ್ಷಗಾನ.

■ **ಕಿರು ರಂಗಮಂದಿರ ವೇದಿಕೆ**
ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿನ ರಂಗ ಪಯಣ ತಂಡದಿಂದ 'ಗುಲಾಬಿ ಗ್ಯಾಂಗ್' ನಾಟಕ, ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಕಲ್ಪವೃಕ್ಷ ಟ್ರಸ್ಟ್ ವತಿಯಿಂದ 'ಹಿಂಗ್ ಮಾಡಿದ್ರೆ ಹೆಂಗೆ' ನಾಟಕ, ಸಂಜೆ 7 ಗಂಟೆಯಿಂದ ಸುಳ್ಯದ ದಿವ್ಯಶ್ರೀ ನಾಯಕ್ ಅವರಿಂದ ಮಾಧವಿ ನಾಟಕ.


■ **ರಮಾ ಗೋವಿಂದ ರಂಗಮಂದಿರ ವೇದಿಕೆ**
ಸಂಜೆ 5.30 ರಿಂದ ಮಂಡ್ಯದ ಮಂಜು ಅವರಿಂದ ಜಡೆ ಕೋಲಾಟ, ಸಂಜೆ 6.30ರಿಂದ ಶಶಿಕುಮಾರ್ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 7ರಿಂದ ಶಿರಸಿಯ ಮಾರಿಕಾಂಬ ರಂಗ ತಂಡದಿಂದ 'ಬೇಡನ ಮಗಳು' ನಾಟಕ.

■ **ನಟನ ರಂಗಮಂದಿರ**
ಸಂಜೆ 5 ರಿಂದ ವಿಜಯನಗರದ ಜಿ. ಜ್ಞಾನೇಶ್ವರ್ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 6.30ರಿಂದ ಮೈಸೂರಿನ ಜನಮನ ಸಾಂಸ್ಕೃತಿಕ ಸಂಘಟನೆಯಿಂದ 'ಸಂಬಂಜ ಅನ್ನೋದು ದೊಡ್ಡದು ಕನಾ' ನಾಟಕ.

■ **ಶ್ರೀಕಂಠೇಶ್ವರ ದೇವಸ್ಥಾನ ನಂಜನಗೂಡು ವೇದಿಕೆ**
ಸಂಜೆ 6 ರಿಂದ ದಾವಣಗೆರೆಯ ಶೃತಿಬಾಯಿ ಮತ್ತು ತಂಡದಿಂದ ಲಂಬಾಣಿ ನೃತ್ಯ, ಸಂಜೆ 6.30ರಿಂದ ಪ್ರವೀಣ್ ಶಂಕಿನ ಮಠ ಮತ್ತು ತಂಡದಿಂದ ಸುಗಮ ಸಂಗೀತ, ದಾವಣಗೆರೆಯ ಜ್ಯೋತಿ ಬಾಯಿ ಮತ್ತು ತಂಡದಿಂದ ಲಂಬಾಣಿ ಕೋಲಾಟ, ಸಂಜೆ 7.30ರಿಂದ ನಾಗಮಂಗಲದ ಸಿ.ಎನ್. ಮಂಜೇಶ್ ಮತ್ತು ತಂಡದಿಂದ ಜಾನಪದ ಗಾಯನ, ಸಂಜೆ 7ರಿಂದ ಕು. ವಿಬುಧ ಕು. ಅಖಿಲರಿಂದ ಶಾಸ್ತ್ರೀಯ ಸಂಗೀತ ಸಂಜೆ, 7.30ರಿಂದ ಬೆಂಗಳೂರಿನ ಆರ್. ಶ್ರೇಯಾ ಅವರಿಂದ ಭರತನಾಟ್ಯ, ರಾತ್ರಿ 8.30ರಿಂದ ಬೆಂಗಳೂರಿನ ಮಿಮಿಕ್ರಿ ಗೋಪಿ ಸಾಂಸ್ಕೃತಿಕ ಕಲಾವೇದಿಕೆಯಿಂದ ರಸಮಂಜರಿ.

■ **ಆಹಾರ ಮೇಳ:** ಬೆಳಗ್ಗೆ 10ರಿಂದ ರಾತ್ರಿಯವರೆಗೆ, ವೈವಿಧ್ಯತೆಯ ತಿಂಡಿ–ತಿನಿಸುಗಳ ಮಾರಾಟ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೇ ಜಿಲ್ಲಾಧಿಕಾರಿ ಕಚೇರಿ ಹಿಂಭಾಗ.
■ **ವಸ್ತುಪ್ರದರ್ಶನ:** ಮಧ್ಯಾಹ್ನ 3 ಗಂಟೆಯಿಂದ ರಾತ್ರಿಯವರೆಗೂ, ಸ್ಥಳ: ದೊಡ್ಡಕೆರೆ ಮೈದಾನ.
■ **ಫಲಪುಷ್ಪ ಪ್ರದರ್ಶನ:** ಬೆಳಗ್ಗೆ 10ರಿಂದ ರಾತ್ರಿಯವರೆಗೂ, ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್.

ಅ.26, ಮಹಿಳಾ ಪ್ರಧಾನ ಗೀತೆಗಳ ಗಾಯನ



ಮೈಸೂರು, ಅ.22(ಜಿಎ)– ದಸರಾ ಪ್ರಯುಕ್ತ ನಗರದ ಡಾ.ರಾಜಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಅ.26 ರಂದು ಸಂಜೆ.5.30 ರಿಂದ 9.30ರವರೆಗೆ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ 'ಭಾವವೆಂಬ ಹೂವು ಅರಳಿ' ಶೀರ್ಷಿಕೆಯಡಿ ಮಹಿಳಾ ಪ್ರಧಾನ ಗೀತೆಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಮೈಸೂರು ಜಯರಾಮ ರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮವನ್ನು ಶಿಕ್ಷಣ ಸಲಹೆಗಾರರಾದ ಡಾ.ಎಲ್.ಸವಿತಾ ಉದ್ಘಾಟಿಸಲಿದ್ದು, ಜಿಪಂ ಮಾಜಿ ಅಧ್ಯಕ್ಷೆ ಪರಿಮಳ ಶ್ಯಾಂ ಸುಂದರ್, ಕಲ್ಪನಾ ರಾಮಚಂದ್ರು, ಎಸ್.ಸುಕನ್ಯ, ನಾಗಲಕ್ಷ್ಮಿ, ಚಂದ್ರಕಲಾ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಕಾವೇರಿ ನಾಗರಾಜ್, ಸುಧೀಂದ್ರ, ಸುರೇಶ್, ನಟರಾಜ್ ರಾಮಮೂರ್ತಿ, ಸುಚೀಂದ್ರ ನಾಗಶ್ರೀ ಉಪಸ್ಥಿತರಿದ್ದರು.

ಇಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆ

ಮೈಸೂರು,ಅ.22–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅ.23ರಂದು ಬೆಳಗ್ಗೆ 11.30ಕ್ಕೆ ಜಿಲ್ಲಾ ಮಟ್ಟದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಕಲಾಮಂದಿರದ ಕಿರುರಂಗಮಂದಿರದಲ್ಲಿ ಏರ್ಪಡಿಸಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ನಾಳಿನ ಪಂಚಾಂಗ

24.10.2023 ಮಂಗಳವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 3ರಿಂದ 4.30 ರವರೆಗೆ.

ನಗರದಲ್ಲಿ ನಾಳೆ

■ **ಶ್ರೀ ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ ದಶಮಿ, ತೀರ್ಥಸ್ನಾನ, ಉತ್ಸವ, ಸಂಜೆ ಪೂರ್ಣಾಹುತಿ, ಧ್ವಜಾ ಆವರೋಹಣ, ಮಹಾ ಮಂಗಳಾರತಿ, ದೇವಸ್ಥಾನದ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.
■ **ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ವಿಜಯದಶಮಿ ಆಚರಣೆ, ಗಜಲಕ್ಷ್ಮೀ ಅಲಂಕಾರ, ಮಕ್ಕಳಿಗೆ ಪುಸ್ತಕ, ಪೆನ್ನು, ಪ್ಲೇಟು ವಿತರಣೆ, ವೀಣಾಲಂಕಾರ, ಸ್ಥಳ: ದೇವಸ್ಥಾನದ ಆವರಣ, ಅಶೋಕ ರಸ್ತೆ, ಬೆಳಗ್ಗೆಯಿಂದ.
■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ–2023, ಲಕ್ಷಾರ್ಚನೆ ಹೋಮ, ಮಹಿಷ ಮರ್ಧಿನಿ ಅಲಂಕಾರ, ಸ್ಥಳ: ದೇವಸ್ಥಾನ ಆವರಣ, ದೇವಸ್ಥಾನದ ರಸ್ತೆ, ವಾಣಿ ವಿಲಾಸ ಮೊಹಲ್ಲಾ, ಬೆಳಗ್ಗೆ 9 ಗಂಟೆಗೆ.
■ **ರಾಮ್ ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.
■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಉತ್ಸವ, ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ವಿಜಯದಶಮಿ ಆಚರಣೆ, ಬೆಳಗ್ಗೆ 10ಕ್ಕೆ ವಿದ್ವಾನ್ ಆರ್. ರಾಜು ಅವರಿಂದ ಸುಗಮ ಸಂಗೀತ, ಮಧ್ಯಾಹ್ನ 12 ಗಂಟೆಗೆ ಪೂರ್ಣಕಲಾ ರಾಜ ರಾಜೇಶ್ವರಿ ಪೂಜೆ, ಹೋಮ, ಪೂರ್ಣಾಹುತಿ, ಅನ್ನಾರ್ಚನೆ, ಕಲಶ ಉದ್ವಾಸನೆ, ಶಮೀ ಪೂಜೆ, ಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ದೇವಿ ಉತ್ಸವ, ಸ್ಥಳ: ನಾದ ಮಂಟಪ, ದೇವಸ್ಥಾನದ ಆವರಣ, ಊಟಿ ರಸ್ತೆ.
■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀ ಶ್ರೀ ದುರ್ಗಾ ಪೂಜೆ, ವಿಜಯದಶಮಿ ಮತ್ತು ಶ್ರೀ ಮಧ್ವ ಜಯಂತಿ ಪ್ರಯುಕ್ತ ಶ್ರೀ ದುರ್ಗಾ ಮಾತೆಗೆ ಪೂಜೆ, ಆರತಿ, ಭಜನೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ, ಸಂಜೆ 7.20ಕ್ಕೆ

ವಿಜಯದಶಮಿ ಮೆರವಣಿಗೆ



(ಅರಮನೆ ಒಳಾವರಣ–24.10.2023)
ನಂದಿ ಪೂಜೆ (ಅರಮನೆ ಬಲರಾಮ ದ್ವಾರ) ಮಧ್ಯಾಹ್ನ 1.46ರಿಂದ 2.08 ರವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ.

■ **(ಅರಮನೆ ಆವರಣ)**
ಸಂಜೆ 4.40ರಿಂದ 5ರವರೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಚಾಲನೆ. ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಘನ ಉಪಸ್ಥಿತಿ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು: ಮೈಸೂರು ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ ಹೆಚ್.ಸಿ. ಮಹದೇವಪ್ಪ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಶಾಸಕ ಟಿ.ಎಸ್. ಶ್ರೀವತ್ಸ.

■ **ಪಂಜಿನ ಕವಾಯತು (ಟಾರ್ಚ್‌ಲೈಟ್ ಪರೇಡ್)**
ಸಂಜೆ 7.30ಕ್ಕೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಪಂಜಿನ ಕವಾಯತು, ಗೌರವ ವಂದನೆ ಸ್ವೀಕಾರ: ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಘನ ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮಿ ರಾಜೀವ್ ಚಂದ್ರಶೇಖರ್, ಕೇಂದ್ರ ಕೃಷಿ ಸಚಿವೆ ಕು. ಶೋಭಾ ಕರಂದ್ಲಾಜೆ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ, ರಾಸಾಯನಿಕ, ರಸಗೊಬ್ಬರ ಹಾಗೂ ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಭಗವಂತ ಖೂಬಾ, ಮುಖ್ಯ ಅತಿಥಿಗಳು: ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಮೇಯರ್ ಶಿವಕುಮಾರ್, ಅಧ್ಯಕ್ಷತೆ: ತನ್ವೀರ್ ಸೇಠ್.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 23 ಸೋಮವಾರ 2023

ಸಂಪುಟ: 44 | ಸಂಚಿಕೆ: 188 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ನಾಳೆ ವೈಭವದ ಜಂಬೂಸವಾರಿ



ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ವಿಜಯದಶಮಿ ಮೆರವಣಿಗೆಗೆ ಚಾಲನೆ

ಜಂಬೂಸವಾರಿ ಸಾಗುವ ರಾಜಮಾರ್ಗದ ಇಕ್ಕೆಲಗಳಲ್ಲಿ ಮರದ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಸಾರ್ವಜನಿಕರಿಗೆ ಮೆರವಣಿಗೆ ನೋಡಲು ವ್ಯವಸ್ಥೆ ಕಲ್ಪಿಸಲಾಗಿದೆ

ಸಂಜೆ 4.40ರಿಂದ 5 ಗಂಟೆವರೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಚಿನ್ನದ ಅಂಬಾರಿಯಲ್ಲಿ ಆಸೀನಳಾದ ಶ್ರೀ ಚಾಮುಂಡೇಶ್ವರಿ ದೇವಿಗೆ ಸಿಎಂ ಪುಷ್ಪಾರ್ಚನೆ





ಮಂಗಳವಾರ ಮಧ್ಯಾಹ್ನ 1.46ರಿಂದ 2.08 ಗಂಟೆವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಸಿದ್ದರಾಮಯ್ಯರಿಂದ ನಂದಿ ಧ್ವಜಕ್ಕೆ ಪೂಜೆ

ಮೈಸೂರು, ಅ.22 (ಆರ್‌ಕೆ)– ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿ ಮೆರವಣಿಗೆಯು ಅ.24ರಂದು ವೈಭವೋಪೇತವಾಗಿ ನಡೆಯಲಿದೆ.

ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಮಂಗಳವಾರ ಮಧ್ಯಾಹ್ನ 1.46ರಿಂದ 2.08 ಗಂಟೆವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಂದಿ ಧ್ವಜಕ್ಕೆ ಪೂಜೆ ನೆರವೇರಿಸುವ ಮೂಲಕ 2023ರ ಐತಿಹಾಸಿಕ ವಿಜಯದಶಮಿ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡುವರು.

ಸಂಜೆ 4.40ರಿಂದ 5 ಗಂಟೆವರೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಚಿನ್ನದ ಅಂಬಾರಿಯಲ್ಲಿ ಆಸೀನಳಾದ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಮುಖ್ಯಮಂತ್ರಿಗಳು ಪುಷ್ಪಾರ್ಚನೆ ಮಾಡುವರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೇಯರ್ ಶಿವಕುಮಾರ್, ಯುವರಾಜ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಸಚಿವ ಸಂಪುಟದ ಸದಸ್ಯರು ಈ ಸಂದರ್ಭ ಉಪಸ್ಥಿತರಿದ್ದು, ಜಂಬೂಸವಾರಿ ವೀಕ್ಷಿಸುವರು.

750 ಕೆ.ಜಿ. ಚಿನ್ನದ ಅಂಬಾರಿ ಹೊತ್ತು ಅಭಿಮನ್ಯು ಆನೆ ಜಂಬೂಸವಾರಿಯಲ್ಲಿ ಸಾಗಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪುವುದು. ಜಾನಪದ ಕಲಾ ತಂಡ, ನಾಡಿನ ವೈವಿಧ್ಯತೆ ಸಾರುವ ಹಾಗೂ ಸರ್ಕಾರದ ಗ್ಯಾರಂಟಿ ಯೋಜನೆಗಳು, ಪ್ರವಾಸೋದ್ಯಮ, ಧಾರ್ಮಿಕ ಕೇಂದ್ರಗಳನ್ನು ಪ್ರಸ್ತುತಪಡಿಸುವ ಸ್ತಬ್ಧಚಿತ್ರಗಳು, ಕರ್ನಾಟಕ ಪೊಲೀಸ್ ಬ್ಯಾಂಡ್ ತಂಡ, ಕೆಎಸ್‌ಆರ್‌ಪಿ ತುಕಡಿ ಸೇರಿದಂತೆ ವಿವಿಧ ಆಕರ್ಷಕ ತಂಡಗಳು ಮೆರವಣಿಗೆಯಲ್ಲಿ ಸಾಗಲಿವೆ.

ಸಂಜೆ 7.30 ಗಂಟೆಗೆ ಮೈಸೂರಿನ ಬನ್ನಿಮಂಟಪದ ಮೈದಾನದಲ್ಲಿ ಆಕರ್ಷಕ ಪಂಜಿನ ಕವಾಯತು (ಟಾರ್ಚ್‌ಲೈಟ್ ಪರೇಡ್) ನಡೆಯಲಿದ್ದು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ▸ 6ನೇ ಪುಟಕ್ಕೆ

ಪೊಲೀಸರಿಂದ ಭಾರಿ ಭದ್ರತೆ

ಓರ್ವ ಡಿಐಜಿ ನೇತೃತ್ವದಲ್ಲಿ 8 ಎಸ್ಪಿಗಳು, 10 ಎಎಸ್ಪಿಗಳು ಸೇರಿ 6 ಸಾವಿರಕ್ಕೂ ಹೆಚ್ಚು ಪೊಲೀಸರ ನಿಯೋಜನೆ, ಸಿಸಿ ಕ್ಯಾಮರಾ ಕಣ್ಗಾವಲು, ಇಂಟೆಲಿಜೆನ್ಸ್ ಸಿಬ್ಬಂದಿ ಕಟ್ಟೆಚ್ಚರ





ಮೈಸೂರು,ಅ.22(ಆರ್‌ಕೆ)–ಮಂಗಳವಾರ ನಡೆಯಲಿರುವ ವೈಭವದ ವಿಜಯದಶಮಿ ಮೆರವಣಿಗೆಯಲ್ಲಿ ಈ ಬಾರಿ ಆರು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಿ ಭಾರಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ಜಂಬೂಸವಾರಿ ಮೆರವಣಿಗೆಗೆ ಭದ್ರತೆ ಕುರಿತಂತೆ ಮಾಹಿತಿ ನೀಡಿರುವ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಈ ವರ್ಷ ವಿಜಯದಶಮಿ ಮೆರವಣಿಗೆ ನೋಡಲು ಲಕ್ಷಾಂತರ ಮಂದಿ ಆಗಮಿಸುವ ನಿರೀಕ್ಷೆ ಇರುವುದರಿಂದ ಸುರಕ್ಷತೆಗಾಗಿ ಅಗತ್ಯ ಮುಂಜಾಗ್ರತೆಯಾಗಿ ಅತೀ ಹೆಚ್ಚು ಪೊಲೀಸರನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗುತ್ತಿದೆ ಎಂದರು.

ಓರ್ವ ಡಿಐಜಿ, 8 ಮಂದಿ ಎಸ್ಪಿಗಳು, 10 ಅಡಿಷನಲ್ ಎಸ್ಪಿಗಳು, ಡಿವೈಎಸ್ಪಿ, ಇನ್ಸ್‌ಪೆಕ್ಟರ್ ಸೇರಿ ಹೊರಗಿನಿಂದ 4,500 ಪೊಲೀಸರನ್ನು ಕರೆಸಿಕೊಳ್ಳಲಾಗಿದ್ದು, 6 ಸಾವಿರಕ್ಕೂ ಹೆಚ್ಚು ಮಂದಿಯನ್ನು ಬಂದೋಬಸ್ತ್‌ಗೆ ನಿಯೋಜಿಸಿ ಭಾರಿ ಕಟ್ಟೆಚ್ಚರ ವಹಿಸಲಾಗಿದೆ. ಅರಮನೆ ಒಳ ಮತ್ತು ಹೊರ ಆವರಣ, ಜಂಬೂಸವಾರಿ ಸಾಗುವ ಮಾರ್ಗ ಹಾಗೂ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಬಳಿ ಅಧಿಕಾರಿಗಳೂ ಸೇರಿದಂತೆ ಅತೀ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್ ಕರ್ತವ್ಯಕ್ಕಾಗಿ ನಿಯೋಜಿಸಲಾಗಿದ್ದು, ಸಿಸಿ ಕ್ಯಾಮರಾಗಳ ಕಣ್ಗಾವಲಿನಲ್ಲಿ ತೀವ್ರ ನಿಗಾ ವಹಿಸಲು ಕ್ರಮ ವಹಿಸಲಾಗಿದೆ.

ಜಂಬೂಸವಾರಿ ಮೆರವಣಿಗೆ ಹಿನ್ನೆಲೆಯಲ್ಲಿ ಬಸ್ ಸ್ಟ್ಯಾಂಡ್, ರೈಲ್ವೇ ಸ್ಟೇಷನ್, ವಿಮಾನ ನಿಲ್ದಾಣ, ಮೈಸೂರಿಗೆ ಸಂಪರ್ಕ ▸ 6ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತರಿಗೂ ಆಯುಧ ಪೂಜೆ ಹಾಗೂ ವಿಜಯದಶಮಿ ಶುಭಾಶಯಗಳು

ಬಿಡುವು

ಆಯುಧ ಪೂಜೆ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 24.10.2023ರ ಮಂಗಳವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ

ಮೈಸೂರು, ಅ.22(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮೂರು ದಿನಗಳ ಮೈಸೂರು ಪ್ರವಾಸ ಹಮ್ಮಿಕೊಂಡಿದ್ದಾರೆ.

ನಾಳೆ(ಅ.23) ಮಧ್ಯಾಹ್ನ 12.30ಕ್ಕೆ ಮೈಸೂರಿಗೆ ಆಗಮಿಸುವ ಮುಖ್ಯಮಂತ್ರಿಗಳು, ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಿಜ್ಞಾನ ಮತ್ತು ಕಲಾ ಕಾಲೇಜಿಗೆ ಭೇಟಿ ನೀಡಲಿದ್ದಾರೆ. ನಂತರ ಸಂಜೆ 4 ಗಂಟೆಗೆ ದಸರಾ ಪ್ರಯುಕ್ತ ಏರ್ಪಡಿಸಿರುವ ವೈಮಾನಿಕ ಪ್ರದರ್ಶನ (ಏರ್ ಶೋ) ▸ 6ನೇ ಪುಟಕ್ಕೆ

ವಿಶ್ವಕಪ್: 20 ವರ್ಷಗಳ ಬಳಿಕ ಕಿವೀಸ್ ಮಣಿಸಿದ ಇಂಡಿಯಾ



- ನ್ಯೂಜಿಲೆಂಡ್ ವಿರುದ್ಧ ಭಾರತಕ್ಕೆ 4 ವಿಕೆಟ್ ಜಯ
- ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ಭಾರತ


ಧರ್ಮಶಾಲಾ, ಅ.22– ವಿರಾಟ್ ಕೊಹ್ಲಿ ಅವರ ಮನಮೋಹಕ ಅರ್ಧಶತಕ ಹಾಗೂ ಮೊಹಮ್ಮದ್ ಶಮಿ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ನ್ಯೂಜಿಲೆಂಡ್ ವಿರುದ್ಧ ಭಾರತ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಭಾರತ 2003ರ ಬಳಿಕ 20 ವರ್ಷಗಳ ನಂತರ ಏಕದಿನ ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ಅನ್ನು ಮಣಿಸಿ ಪ್ರಸಕ್ತ ವಿಶ್ವಕಪ್‌ನ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ನ್ಯೂಜಿಲೆಂಡ್ ನೀಡಿದ 274 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 48 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ನಷ್ಟಕ್ಕೆ ಈ ಜೋಡಿ 67 ಬಾಲ್‌ಗೆ 71 ರನ್ ಗಳಿಸಿತು. ಈ ವೇಳೆ ರೋಹಿತ್ ಶರ್ಮಾ 40 ಎಸೆತಗಳಲ್ಲಿ ತಲಾ 4 ಸಿಕ್ಸ್, ಬೌಂಡರಿ ಒಳಗೊಂಡ 46ರನ್ ಗಳಿಸಿ ನಿರ್ಗಮಿಸಿದರು. ಆ ಮೂಲಕ 4 ರನ್‌ನಿಂದ ಅರ್ಧಶತಕದಿಂದ ವಂಚಿತರಾದರು.

ಇನ್ನು ರೋಹಿತ್ ಔಟಾದ ಬೆನ್ನಲ್ಲೇ ಶುಭ್‌ಮನ್ ಗಿಲ್ ಕೂಡ 5 ಬೌಂಡರಿ ಒಳಗೊಂಡ 26 ರನ್ ಗಳಿಸಿ ಔಟಾದರು. ಈ ವೇಳೆ ಶ್ರೇಯಸ್ ಅಯ್ಯರ್ ಜೊತೆಗೂಡಿದ ಕೊಹ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ಮೂಲಕ ತಂಡವನ್ನು ಗೆಲುವಿನ ಹಾದಿಗೆ ಕೊಂಡೊಯ್ದರು. ಈ ಮಧ್ಯೆ ▸ 6ನೇ ಪುಟಕ್ಕೆ

ಮೈಸೂರಿಗೆ ಹರಿದು ಬಂದ ಜನಸಾಗರ

ಟ್ರಾಫಿಕ್ ಜಾಮ್‌ನಿಂದ ಪ್ರವಾಸಿಗರ ಪರದಾಟ



ಮೈಸೂರು, ಅ.22(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಹಾಗೂ ಸಾಲು ಸಾಲು ರಜೆ ಹಿನ್ನೆಲೆಯಲ್ಲಿ ಭಾನುವಾರ ಸಾಂಸ್ಕೃತಿಕ ನಗರಿ ಮೈಸೂರಿಗೆ ಪ್ರವಾಸಿಗರು ಲಗ್ಗೆ ಇಟ್ಟಿದ್ದು, ನಗರದ ಹೃದಯ ಭಾಗದಲ್ಲೇ ಟ್ರಾಫಿಕ್ ಜಾಮ್ ಸಮಸ್ಯೆ ವಾಹನ ಸವಾರರನ್ನು ಕಾಡತೊಡಗಿತ್ತು.

ಜಂಬೂಸವಾರಿಗೆ ಕ್ಷಣಗಣನೆ ಆರಂಭವಾಗಿದ್ದು, ಎಲ್ಲೆಡೆ ದಸರಾ ಸಂಭ್ರಮ ಮನೆ ಮಾಡಿದೆ. ಅ.24ರಂದು ನಡೆಯುವ ಜಂಬೂಸವಾರಿ ಮೆರವಣಿಗೆ ಸಾಂಸ್ಕೃತಿಕ ನಗರಿ ಮದುವಣಗಿತ್ತಿಯಂತೆ ಸಿಂಗಾರಗೊಂಡು ಸಜ್ಜಾಗಿದೆ. ಶನಿವಾರದಿಂದ ಮಂಗಳವಾರದವರೆಗೂ 4 ದಿನ ರಜೆ ಇರುವುದರಿಂದ ಹಾಗೂ ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ತೆರಿಗೆ ವಿನಾಯಿತಿ ನೀಡಿರುವುದರಿಂದ ತಮಿಳುನಾಡು ಹಾಗೂ ಕೇರಳದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಆಗಮಿಸಿದ್ದಾರೆ. ರಜೆ ಸಂಭ್ರಮವನ್ನು ಆಸ್ವಾದಿಸಲು ಪ್ರವಾಸಿಗರು ಮೈಸೂರಿಗೆ ಲಗ್ಗೆ ಇಟ್ಟಿದ್ದರು. ಇದರಿಂದ ನಗರ ಪ್ರಮುಖ ರಸ್ತೆಗಳು, ಪ್ರವಾಸಿ ಸ್ಥಳಗಳು ▸ 6ನೇ ಪುಟಕ್ಕೆ

ರೋಮಾಂಚನ ಕ್ಷಣಗಳಿಗೆ ಸಾಕ್ಷಿಯಾದ ಪೂರ್ವಭ್ಯಾಸದ ದಸರಾ ವೈಮಾನಿಕ ಪ್ರದರ್ಶನ



ಪೂರ್ವಭ್ಯಾಸದ ವೈಮಾನಿಕ ಪ್ರದರ್ಶನದ ಪ್ರಯುಕ್ತ ಆಗಸದಲ್ಲಿ ಹಾರಾಟ ನಡೆಸುತ್ತಿದ್ದ ವಿಮಾನಗಳು ಮೈಸೂರಿನ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಕಂಡು ಬಂದ ರೋಚಕ ದೃಶ್ಯಾವಳಿ.

ಇಂದು ಯಥಾವತ್ತಾಗಿ ಪ್ರದರ್ಶನ...

"'ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡ' ಮೈಸೂರಿನಲ್ಲಿ ಪ್ರದರ್ಶನ ನೀಡಿದ್ದು ಇದೇ ಮೊದಲು. ವಿಶ್ವವಿಖ್ಯಾತ ಮೈಸೂರು ದಸರಾ ಪ್ರಯುಕ್ತ ಮೈಸೂರಿನಲ್ಲಿ ಇಂದು ಪ್ರದರ್ಶನ ನೀಡಿದ್ದು, ಇಡೀ ನಮ್ಮ ತಂಡಕ್ಕೆ ಹೆಮ್ಮೆ ತಂದಿದೆ. ಇಂದಿನ ಪ್ರದರ್ಶನದಂತೆಯೇ ಯಥಾವತ್ತಾಗಿ ನಾಳೆಯೂ (ಅ.23) ಪ್ರದರ್ಶನ ನಡೆಯಲಿದೆ.

–ಅರ್ಜುನ್ ಕೆ.ಪಟೇಲ್, ವಿಂಗ್ ಕಮಾಂಡರ್, ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡ.

ಬಾನಂಗಳದಲ್ಲಿ ಲೋಹದ ಹಕ್ಕಿಗಳ ಚಿತ್ತಾರ–ಚಮತ್ಕಾರ

- ಭಾರತೀಯ ವಾಯುಪಡೆಯ 'ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡ'ದ ವಿಮಾನಗಳ ಕರಾಮತ್ತು
- ಸುಮಾರು 20 ನಿಮಿಷ ಆಗಸದಲ್ಲಿ ಹಾರಾಟ

ಮೈಸೂರು,ಅ.22(ಪಿಎಂ)– ಆಗಸದಲ್ಲಿ ಲೋಹದ ಹಕ್ಕಿಗಳ ಹಾರಾಟದಲ್ಲಿ ಮೂಡಿದ ಚಿತ್ತಾರ–ಚಮತ್ಕಾರವು ಕಾತುರದಿಂದ ಕಾದಿದ್ದ ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿತು.

ಮೈಸೂರು ದಸರಾ ಮಹೋತ್ಸವ ಪ್ರಯುಕ್ತ ಅ.23ರಂದು ಸಂಜೆ 4ಕ್ಕೆ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನದಲ್ಲಿ ವೈಮಾನಿಕ ಪ್ರದರ್ಶನ ಆಯೋಜಿಸಲಾಗಿದ್ದು, ಭಾನುವಾರ ಇದೇ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ನಡೆದ ಈ ಪ್ರದರ್ಶನದ ಪೂರ್ವಭ್ಯಾಸದ ರೋಚಕ ಕ್ಷಣಗಳಿವು. ಸುಮಾರು 20 ನಿಮಿಷಗಳ ಕಾಲ ಭಾರತೀಯ ವಾಯುಪಡೆಯ 'ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡ'ದ 9 ವಿಮಾನಗಳು ಬಾನಂಗಳದಲ್ಲಿ ಚಿತ್ರ–ವಿಚಿತ್ರವಾಗಿ ಹಾರಾಟ ನಡೆಸುವ ಮೂಲಕ ನೋಡುಗರು ಉಸಿರು ಬಿಗಿಹಿಡಿಯುವಂತೆ ಮಾಡಿದವು.

ಆಕಾಸದತ್ತ ಕಣ್ಣು ಮಿಟುಕಿಸುತ್ತಾ ಮೈದಾನದಲ್ಲಿ ಕೂತಿದ್ದ ಪ್ರೇಕ್ಷಕರಿಗೆ ಮೊದಲಿಗೆ ಬಿಳಿ ಪಟ್ಟೆ ಹೊಂದಿರುವ ಕೆಂಪು ಬಣ್ಣದ 9 ವಿಮಾನಗಳು ಇಂಜಿನ್‌ನ ಭಾರಿ ಸದ್ದಿನೊಂದಿಗೆ ಕಾಣಿಸಿಕೊಂಡು ಬಿಳಿ ಹೊಗೆಯ ಚಿತ್ತಾರದೊಂದಿಗೆ ಡೈಮಂಡ್ ವಿನ್ಯಾಸದಲ್ಲಿ ಪ್ರದರ್ಶನ ನೀಡಿ ಕೆಲವೇ ಕ್ಷಣಗಳಲ್ಲಿ ಕಣ್ಮರೆಯಾದವು. ಎತ್ತ ಹೋದವು ಎಂದು ಪ್ರೇಕ್ಷಕರು ▸ 6ನೇ ಪುಟಕ್ಕೆ

ಗೋಲ್ಡ್ ಕಾರ್ಡ್, ಪಾಸ್‌ಗೆ ಪ್ರವೇಶ...

ಭಾನುವಾರ ನಡೆದ ಪೂರ್ವಭ್ಯಾಸದ ವೈಮಾನಿಕ ಪ್ರದರ್ಶನಕ್ಕೆ ಮುಕ್ತ ಪ್ರವೇಶಾವಕಾಶ ಕಲ್ಪಿಸಲಾಗಿತ್ತು. ಮೈಸೂರಿನ ಬನ್ನಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಅ.23ರಂದು ಸಂಜೆ 4ಕ್ಕೆ ವೈಮಾನಿಕ ಪ್ರದರ್ಶನ ನಡೆಯಲಿದೆ. ಇದೇ ದಿನ ಸಂಜೆ 7ಕ್ಕೆ ದಸರಾ ಪಂಜಿನ ಕವಾಯಿತು ಪ್ರದರ್ಶನದ ಪೂರ್ವಭ್ಯಾಸ ಇದೇ ಮೈದಾನದಲ್ಲಿ ನಡೆಯಲಿದೆ. ಅ.23ರ ಪಂಜಿನ ಕವಾಯಿತು ಪೂರ್ವಭ್ಯಾಸದ ವೀಕ್ಷಣೆಗೆ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಿಂದ ನೀಡಿರುವ ಪಾಸ್ ಹಾಜರುಪಡಿಸಿದವರಿಗೆ ಮಾತ್ರ ವೈಮಾನಿಕ ಪ್ರದರ್ಶನ ಮತ್ತು ಪಂಜಿನ ಕವಾಯಿತು ಪೂರ್ವಭ್ಯಾಸ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಗೋಲ್ಡ್ ಕಾರ್ಡ್ ಹಾಜರುಪಡಿಸಿಯೂ ವೈಮಾನಿಕ ಪ್ರದರ್ಶನ ವೀಕ್ಷಿಸಬಹುದು.

ನಕ್ಕರೆ ಅದೇ ಸ್ವರ್ಗ

ಶಿಷ್ಯ : ಸ್ವಾಮಿಗಳೇ ನನ್ನ ಹೆಂಡ್ತಿ ನಾ ಹೇಳಿದಂತೆ ಕೇಳ್ಬೇಕು ಅಂದ್ರೆ ಏನ್ಮಾಡ್ಬೇಕು?
ಸನ್ಯಾಸಿ : ಅದು ಗೊತ್ತಿದ್ದಿದ್ರೆ ನಾನ್ಯಾಕೋ ಸನ್ಯಾಸಿ ಆಗ್ತಿದ್ದೆ...

ಮೈಸೂರು ಮಿತ್ರ

ಸೋಮವಾರ, 23 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

"ಯಾವತ್ತು ಒಬ್ಬ ವ್ಯಕ್ತಿಯಾಗಿ ಜೀವಿಸುವುದಕ್ಕಿಂತ ವ್ಯಕ್ತಿತ್ವವಾಗಿ ಬದುಕುವುದು ಒಳ್ಳೆಯದು. ವ್ಯಕ್ತಿಗೆ ಮರಣವಿದೆ. ಆದರೆ, ವ್ಯಕ್ತಿತ್ವಕ್ಕೆ ಮರಣವೇ ಇಲ್ಲ. ಗಾಂಧೀಜಿ ಮತ್ತು ವಿವೇಕಾನಂದರು ನಮ್ಮ ಮಧ್ಯದಲ್ಲಿಲ್ಲ. ಆದರೆ ಅವರ ವ್ಯಕ್ತಿತ್ವ ಇಂದಿಗೂ ನಮ್ಮನ್ನು ಪ್ರಭಾವಿಸುತ್ತದೆ."

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { "ನದಿನೇ ನೋಡದೆ ಇರುವವನು ಸಮುದ್ರ ವರ್ಣನೆ ಮಾಡಿದ ಹಾಗೆ"

ನಿಮ್ಮ ಪತ್ರಗಳು

ವಿಶ್ವಕಪ್: ಹಗಲು–ರಾತ್ರಿ ಪಂದ್ಯಗಳು ಹೊರೆಯಾಗದಿರಲಿ

ಮಾನ್ಯರೆ,

ಪ್ರಸ್ತುತ ನಡೆಯುತ್ತಿರುವ 2023ರ ಕ್ರಿಕೆಟ್ ವಿಶ್ವಕಪ್‌ನಲ್ಲಿ 45 ಪಂದ್ಯಗಳಿದ್ದು, ಬಹುತೇಕ ಪಂದ್ಯಗಳು ಹಗಲು ರಾತ್ರಿ ಪಂದ್ಯಗಳಾಗಿವೆ ಮತ್ತು ಹಗಲು ಪಂದ್ಯಗಳು ಬೆರಳೆಣಿಕೆಯಷ್ಟು ಮಾತ್ರವಿರುವುದು ಸರ್ಕಾರಕ್ಕೆ ಹೊರೆಯಾಗುವುದು ಖಚಿತವಾಗಿದೆ.

ಮಳೆಯ ಅಭಾವದಿಂದಾಗಿ ಅಣೆಕಟ್ಟುಗಳಲ್ಲಿ ನೀರಿನ ಸಂಗ್ರಹಣೆ ಕಡಿಮೆಯಿದ್ದು, ವಿದ್ಯುತ್ ಉತ್ಪಾದನೆ ಸಹ ಗಣನೀಯ ಪ್ರಮಾಣದಲ್ಲಿ ಆಗದೆ, ಕುಂಠಿತಗೊಂಡಿದೆ. ಜನಸಾಮಾನ್ಯರು, ರೈತರು ಮತ್ತು ಹಲವಾರು ಉದ್ಯಮಗಳಿಗೆ ವಿದ್ಯುತ್ ಸರಬರಾಜು ಮಾಡುವುದು ಕಷ್ಟಕರವಾಗಿದ್ದು, ರಾಜ್ಯದಲ್ಲಿ ಅನಿಯಮಿತ ಲೋಡ್ ಶೆಡ್ಡಿಂಗ್ ಅನಿವಾರ್ಯವಾಗಿದೆ.

ಇಂತಹ ಕಷ್ಟದ ಸಮಯದಲ್ಲಿ ಮನರಂಜನೆಗಾಗಿ ಹಗಲು–ರಾತ್ರಿ ಕ್ರಿಕೆಟ್ ಪಂದ್ಯಗಳನ್ನು ನಡೆಸುವ ಅಗತ್ಯವಿದೆಯೆ ಎಂಬುದು ಜನಸಾಮಾನ್ಯರ ಪ್ರಶ್ನೆಯಾಗಿದೆ.ಹಗಲು ರಾತ್ರಿ ಪಂದ್ಯಗಳ ಬದಲಾಗಿ, ನೈಸರ್ಗಿಕವಾಗಿ ದೊರೆಯುವ ಸೂರ್ಯನ ಬೆಳಕನ್ನು ಬಳಸಿ ಹಗಲಿನಲ್ಲಿ ಕ್ರಿಕೆಟ್ ಪಂದ್ಯಗಳನ್ನು ನಡೆಸಿದರೆ ಸರ್ಕಾರಕ್ಕೆ ಹೊರೆಯಾಗದೆ ವಿದ್ಯುತ್ ಉಳಿತಾಯವಾಗಲಿದ್ದು, ಉಳಿತಾಯವಾದ ವಿದ್ಯುತ್ ಅನ್ನು ರೈತರ ಪಂಪ್‌ಸೆಟ್, ಆಸ್ಪತ್ರೆ ಮತ್ತು ಜನಸಾಮಾನ್ಯರಿಗೆ ನೀಡಲು ಸಾಧ್ಯವಾಗುತ್ತದೆ.

ಕರ್ನಾಟಕ ರಾಜ್ಯದಲ್ಲೂ ಸಹ ಹಲವಾರು ವಿಶ್ವಕಪ್ ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸಲಾಗಿದ್ದು, ಇವುಗಳನ್ನು ಹಗಲು ಪಂದ್ಯಗಳಾಗಿ ಬದಲಾಯಿಸುವಂತೆ ಬಿಸಿಸಿಐಗೆ ರಾಜ್ಯ ಸರ್ಕಾರ ಸೂಚಿಸಿದರೆ, ರಾಜ್ಯದ ಲೋಡ್ ಶೆಡ್ಡಿಂಗ್ ಸಮಸ್ಯೆ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಬಹುದಾಗಿದೆ.

ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲ್ಯಾಂಡ್, ದಕ್ಷಿಣ ಆಫ್ರಿಕಾದಂತಹ ಮುಂದುವರೆದ ದೇಶಗಳಲ್ಲಿ ವಿದ್ಯುತ್ ಉತ್ಪಾದನೆಯ ಹಲವಾರು ಮೂಲಗಳಿದ್ದು, ಅಂತಹ ದೇಶಗಳಿಗೆ ಹಗಲು ರಾತ್ರಿಯ ಕ್ರಿಕೆಟ್ ಪಂದ್ಯಗಳು ಹೊರೆಯಾಗುವುದಿಲ್ಲ, ಆದರೆ ನಮ್ಮಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಕ್ಕೆ ಹಗಲು ರಾತ್ರಿ ಪಂದ್ಯಗಳ ಅವಶ್ಯಕತೆಯಿರುವುದಿಲ್ಲ.

ಭಾರತೀಯ ಕ್ರಿಕೆಟ್ ಸಂಸ್ಥೆ (ಬಿಸಿಸಿಐ) ಭಾರತದಲ್ಲಿ ನಡೆಯುವ ಕ್ರಿಕೆಟ್ ಪಂದ್ಯಗಳನ್ನು ಸಾಧ್ಯವಾದಷ್ಟು ಹಗಲಿನಲ್ಲಿ ನಡೆಯುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಬೇಕು ಮತ್ತು ಜವಾಬ್ದಾರಿ ಸಂಸ್ಥೆಯಾಗಿ ನಡೆದುಕೊಳ್ಳಬೇಕು ಹಾಗೂ ಈ ನಿಟ್ಟಿನಲ್ಲಿ ಭಾರತ ಸರ್ಕಾರ ಕೂಡ ಬಿಸಿಸಿಐಗೆ ಈ ಕುರಿತು ಕೆಲವು ನಿಯಮಗಳನ್ನು ವಿಧಿಸುವ ಮೂಲಕ ಮನರಂಜನೆಗಾಗಿ ಅನಗತ್ಯ ವಿದ್ಯುತ್ ವ್ಯಯವಾಗುವುದನ್ನು ತಡೆಯವಂತಾಗಲಿ ಎಂದೂ ಆಶಿಸೋಣ.

– ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

ಸರ್ಕಾರಿ ಆಸ್ಪತ್ರೆ ಸಮೀಪ ಖಾಸಗಿ ಪ್ರಯೋಗಾಲಯಗಳು ಇರಬಾರದೆಂಬ ಆದೇಶ ಸ್ವಾಗತಾರ್ಹ

ಮಾನ್ಯರೆ,

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಕಾರ್ಯಾಲಯವು ಇತ್ತೀಚೆಗೆ ಸುತ್ತೋಲೆಯೊಂದನ್ನು ಹೊರಡಿಸಿದ್ದು, ಅದರ ಪ್ರಕಾರ ಸರ್ಕಾರಿ ಆಸ್ಪತ್ರೆಗಳ ಸುಮಾರು 200 ಮೀಟರ್ ಅಂತರದಲ್ಲಿ ಯಾವುದೇ ಖಾಸಗಿ ಚಿಕಿತ್ಸಾ ಪ್ರಯೋಗಾಲಯಗಳನ್ನು ತೆರೆಯದಂತೆ ಸರ್ಕಾರ ಆದೇಶ ಹೊರಡಿಸಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸ್ವಾಗತಾರ್ಹ ಕ್ರಮ ಎನ್ನಬಹುದು.

ಕಾರಣ, ಕೆಲವು ಸರ್ಕಾರಿ ಜಿಲ್ಲಾ ಆಸ್ಪತ್ರೆಗಳ ಮತ್ತು ತಾಲೂಕು ಸರ್ಕಾರಿ ಆಸ್ಪತ್ರೆಗಳ ಅಕ್ಕ–ಪಕ್ಕದಲ್ಲಿ ಅಥವಾ ಎದುರುಗಡೆಯೇ ಖಾಸಗಿ ಪೆಥಾಲಜಿಗಳು ಮತ್ತು ಎಕ್ಸ್–ರೇ ಪ್ರಯೋಗಾಲಯಗಳು ಬಹಳಷ್ಟು ವರ್ಷಗಳಿಂದಲೂ ತೆರೆದು ಸರ್ಕಾರಿ ಆಸ್ಪತ್ರೆಗೆ ಬರುವ ಬಡ ರೋಗಿಗಳಿಂದ ಹಣ ದೋಚುವ ಕೆಲಸ ಮಾಡುತ್ತಿವೆ,

ಸರ್ಕಾರಿ ಆಸ್ಪತ್ರೆಗಳ ಕೆಲವು ವೈದ್ಯರು ಅವಶ್ಯಕತೆ ಇರಲಿ ಅಥವಾ ಇಲ್ಲದಿರಲಿ, ಪಕ್ಕದ ಪೆಥಾಲಜಿಯಲ್ಲೇ ಕೆಲವು ಮಾದರಿ ರಕ್ತ ಪರೀಕ್ಷೆಗಳನ್ನು ಮಾಡಿಸಿಕೊಂಡು ಬರಲು ಅಪ್ಪಣೆ ಮಾಡಿ ಚೀಟಿ ಬರೆದು ಕೊಡುತ್ತಾರೆ, ಇದು ಎಲ್ಲರಿಗೂ ಗೊತ್ತಿರುವ ಸಂಗತಿ. ಕೆಲವೊಂದು ಕಡೆ ಆ ಸರ್ಕಾರಿ ವೈದ್ಯರ ಸಂಬಂಧಿಗಳದ್ದೇ ಈ ಪ್ರಯೋಗಾಲಯಗಳಾಗಿರುತ್ತವೆ, ಇದನ್ನು ಪ್ರಶ್ನೆ ಮಾಡುವ ಧೈರ್ಯ ಯಾರಿಗೂ ಇಲ್ಲ. ಕೆಲವೊಂದು ಆಸ್ಪತ್ರೆಗಳಲ್ಲಿ ರಕ್ತ ಪರೀಕ್ಷೆ ಮಾಡುವ ಅವಶ್ಯ ಉಪಕರಣಗಳು ಇದ್ದರೂ, ಬೇರೆ ಕಡೆ ಮಾಡಿಸಿಕೊಂಡು ಬನ್ನಿ ಎಂದು ಚೀಟಿ ಬರೆಯುತ್ತಾರೆ. ಸದ್ಯ ಸರ್ಕಾರದ ಸುತ್ತೋಲೆಯಿಂದ ಈ ದಂಧೆ ಸ್ವಲ್ಪ ಮಟ್ಟಿಗಾದರೂ ಸುಧಾರಿಸಬಹುದು.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಟ್ಯೂಶನ್ ಗುರುಗಳೇ ದೇವರುಗಳು...?!

ಮಾನ್ಯರೆ,

ದಾನಗಳಲ್ಲಿ ಶ್ರೇಷ್ಠವಾದದ್ದು ವಿದ್ಯಾದಾನ. ವಿದ್ಯೆಯ ಅಗಾಧತೆ ಯಾವುದೇ ವ್ಯಾಖ್ಯಾನಕ್ಕೆ ನಿಲುಕುವಂತಹದಲ್ಲ. ಅದರ ಅರ್ಥ ವೈಶಾಲ್ಯತೆ ಮತ್ತು ಪಾವಿತ್ರ್ಯತೆ ಇಂದು ಕೇವಲ ಒಂದು ಉದ್ಯೋಗಕ್ಕೆ, ಹಣದ ಸಂಪಾದನೆಗೆ, ಸೀಮಿತವಾಗುತ್ತಿದೆ. ವಿದ್ಯೆ ನೀಡಬೇಕಾದ ಶಾಲೆಗಳು ಮೂಲ ಉದ್ದೇಶ, ಮಹತ್ವವನ್ನು ಮರೆತಿರುವುದು ಒಂದೆಡೆಯಾದರೆ ಟ್ಯೂಶನ್ ಕೇಂದ್ರಗಳು ನಾಯಿಕೊಡೆಗಳಂತೆ ಎಲ್ಲೆಡೆ ತಲೆಯೆತ್ತಿ ಸುಳ್ಳು ಭರವಸೆಗಳನ್ನು ನೀಡುತ್ತಾ ಪ್ರತಿಷ್ಠಿತ ಹೆಸರಿನಿಂದ ಹಗಲು ದರೋಡೆ ಮಾಡುತ್ತಿವೆ.

ಐಐಟಿ, ನೀಟ್, ಜೆಇಇ ಈ ಬ್ಯಾಂಕಿಂಗ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆಲ್ಲಾ ಎಸ್‌ಎಸ್‌ಎಲ್‌ಸಿ, ಪಿಯುಸಿಯಂತಹ ಸಾಮಾನ್ಯ ಪರೀಕ್ಷೆಗಳ ಬಗ್ಗೆ ಪೋಷಕರು ಗೊಂದಲಕ್ಕೊಳಗಾಗಿ ಮಕ್ಕಳು ಉತ್ತಮ ಅಂಕ ಪಡೆಯಬೇಕೆಂಬ ಕನಸಿನೊಂದಿಗೆ ಟ್ಯೂಶನ್‌ಗೆ ಸೇರಿಸುತ್ತಾರೆ. ಅತಿ ಹೆಚ್ಚಿನ ನಿರೀಕ್ಷೆಯ ಭಾರದೊಂದಿಗೆ ಬರುವ ಮಕ್ಕಳಿಗೆ ಯಾವ ರೀತಿಯ ಕೋಚಿಂಗ್ ಸಿಗುತ್ತದೆ? ದನಗಳ ದೊಡ್ಡಿಯಂತೆ ಏಕ ರೀತಿಯ ಪಾಠ ಪ್ರವಚನ. ಪ್ರಶ್ನೆ ಪತ್ರಿಕೆ ಕೊಡುತ್ತೇವೆ. ಎಲ್ಲರನ್ನೂ ಪಾಸ್ ಮಾಡುತ್ತೇವೆ, ಇಲ್ಲದಿದ್ದರೆ ಹಣ ವಾಪಸ್ಸು ಎಂದೆಲ್ಲಾ ಸುಳ್ಳು ಆಶ್ವಾಸನೆ ನೀಡಿ ಅಡ್ಡದಾರಿಗೆ ತಳ್ಳಿ ಆಲಸಿಗಳನ್ನಾಗಿಸುತ್ತಿದೆ. ಶಾಲಾ ಶಿಕ್ಷಕರ ಮಾರ್ಗದರ್ಶನದಲ್ಲಿ ನಂಬಿಕೆ ಇಲ್ಲ. ಸುಲಭವಾಗಿ ಶ್ರಮವಿಲ್ಲದೆ ಸಿಗುವುದಕ್ಕೆ ಬೆಲೆ. ಟ್ಯೂಶನ್ ಗುರುಗಳೇ ದೇವರು. ಶಾಲೆಯಲ್ಲಿ ಓದಿನೆಡೆ ಗಮನ ಹರಿಸುವುದಿಲ್ಲ. ಟ್ಯೂಶನ್‌ನಲ್ಲಿ ಕಲಿಯುತ್ತೇವೆಂದು ನಿರ್ಲಕ್ಷಿಸಿ ಅಲ್ಲೂ ಕೇಳುವುದಿಲ್ಲ. 24 ತಾಸಿನಲ್ಲಿ ಶಾಲೆ ಟ್ಯೂಶನ್ ಎಂದು ಸಮಯ ಕಳೆದರೆ ಓದುವುದೆಲ್ಲಿ, ಸಮಯದ ಅಭಾವವೆಂಬ ಉವಾಚ. ನಿರೀಕ್ಷಿತ ಮಟ್ಟದಲ್ಲಿ ಸಾಧಿಸಲಾಗದಿದ್ದರೆ ಮಕ್ಕಳಲ್ಲಿ ಮಾನಸಿಕ ಖಿನ್ನತೆ, ಒಂಟಿತನ, ಒತ್ತಡ. ಜೀವನವೇ ಮುಗಿದಂತೆ ಪೋಷಕರ ಗೋಣಗುವಿಕೆ. ಒಟ್ಟಾರೆ ಮಕ್ಕಳ ಭವಿಷ್ಯ ಡೋಲಾಯಮಾನ. ಇದಕ್ಕೆಲ್ಲ ಯಾರು ಹೊಣೆ? ಈ ಎಲ್ಲಾ ಸೂಕ್ಷ್ಮತೆಯನ್ನು ಅರಿತು ಬಲವಂತವಾಗಿ ಟ್ಯೂಶನ್ ಕೇಂದ್ರಗಳಿಗೆ ತಳ್ಳದೆ ಅವಲೋಕಿಸಿ, ತೀರ್ಮಾನಿಸಿ ಮಕ್ಕಳ ಭವಿಷ್ಯವನ್ನು ಸರಿದಾರಿಯಲ್ಲಿ ಕೊಂಡೊಯ್ಯೋಣಾ?!

– ಹೇಮಲತಾ ಎಸ್.ಆರ್, ಸಿದ್ಧಾರ್ಥನಗರ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ವಿಶ್ವ ವಿಖ್ಯಾತ ಮೈಸೂರು ದಸರಾ



ಚಿನ್ನದ ಅಂಬಾರಿ

ಮೈಸೂರು ದಸರೆಯ ಕೇಂದ್ರ ಬಿಂದುವಾದ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯನ್ನು ಜೀಟಿ ಮರದಿಂದ ದೇವತಾ ಮಂಟಪದಂತೆ ರಚನೆಯಾಗಿರುವ ಚಿನ್ನದ ತಗಡಿನಿಂದ ಆವೃತ್ತವಾಗಿರುವ ಒಂದು ಸುಂದರ ಕಲಾಕೃತಿ. ಇದು ಪರ್ಣ ಮತ್ತು ಪುಷ್ಪಗಳಿಂದ ಕೂಡಿದ್ದು ವಿನ್ಯಾಸಗಳು ಉಬ್ಬು ಚಿತ್ರ ತಂತ್ರದಿಂದ ರೂಪಿಸಲಾಗಿದೆ. ಇದರ ಗೋಪುರ ಆಕರ್ಷಕ ಪಂಚಕಳಶಗಳನ್ನು ಒಳಗೊಂಡಿದ್ದು ಸಂಪೂರ್ಣವಾಗಿ ದಂತದಿಂದಲೇ ಜಡಿಸಿರುವ ಎರಡು ಚಾಮರಗಳು ಮನಮೋಹಕವಾಗಿವೆ. ೮೦ ಕೆ.ಜಿ. ಚಿನ್ನದಿಂದ ತಯಾರಿಸಲಾಗಿರುವ ಈ ಅದ್ಭುತವಾದ ಅಂಬಾರಿಯನ್ನು ಅರಮನೆಯ ಗೊಂಬೆತೊಟ್ಟಿಯ ಉತ್ತರ ತುದಿಯಲ್ಲಿ ಇಡಲಾಗಿದ್ದು ಪ್ರತೀವರ್ಷ ವಿಜಯದಶಮಿಯಂದು ಜಂಬೂಸವಾರಿಗೆ ಇದನ್ನು ಬಳಸಲಾಗುತ್ತದೆ. ಅಂದು ತಾಯಿ ಚಾಮುಂಡೇಶ್ವರಿ ಅಲಂಕೃತಳಾದ ಈ ಅಂಬಾರಿಯನ್ನು ನೋಡಿ ಧನ್ಯರಾಗುವುದೇ ಒಂದು ಸೌಭಾಗ್ಯ.

ಒಂದು ಕಾಲದಲ್ಲಿ ಆಳರಸರ ಮಹೋತ್ಸವವಾಗಿ ಮೆರೆದು ಇಂದು ಬದಲಾದ ಕಾಲಘಟ್ಟದಲ್ಲಿ ನಾಡಹಬ್ಬವೆಂದು ಕರೆಯಲ್ಪಡುತ್ತಿರುವ ಮೈಸೂರು ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಗಳಿಗೂ ಹೆಚ್ಚಿನ ಇತಿಹಾಸವಿದೆ. ನಮ್ಮ ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲೇ ಇಷ್ಟೊಂದು ಸುದೀರ್ಘ ಕಾಲ ನಡೆದು ಬಂದಿರುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ. ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ಆರಾಧನೆಯೊಡನೆ ಆರಂಭವಾಗುವ ನವರಾತ್ರಿ ವೈಭವದ ವಿಜಯದಶಮಿಯ ಈ ಮೈಸೂರು ದಸರಾ ಮಹೋತ್ಸವಕ್ಕೆ ಅದರದೇ ಆದ ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ಹಿರಿಮೆಯುಂಟು. ಕರ್ನಾಟಕದ ಇತಿಹಾಸದಲ್ಲಿ ಸುವರ್ಣಯುಗವನ್ನು ಸೃಷ್ಟಿಸಿ ವಿಜಯನಗರ ಸಾಮ್ರಾಜ್ಯ ಕಟ್ಟಿ ವೈಭವದಿಂದ ಮೆರೆದವರು ವಿಜಯನಗರ ಅರಸರು. ಅವರ ಕಾಲದಲ್ಲಿ ಆರಂಭಗೊಂಡು ಆಚರಿಸಲ್ಪಡುತ್ತಿದ್ದ ನವರಾತ್ರಿ ಉತ್ಸವದ ವಿಜಯದಶಮಿಯ ದಸರಾ ಹಬ್ಬಕ್ಕೆ ಇನ್ನೂ ಹೆಚ್ಚಿನ ವೈಭವದ ವರ್ಣಮಯ ಕಳೆ ತಂದುಕೊಟ್ಟವರು ವಿಜಯನಗರ ಅರಸರಲ್ಲೇ ಅತ್ಯಂತ ಪ್ರಖ್ಯಾತರಾಗಿದ್ದ ಶ್ರೀ ಕೃಷ್ಣದೇವರಾಯರು. ಆಗ ಹಂಪೆಯಲ್ಲಿರುವ ಮಹಾನವಮಿ ದಿಬ್ಬ ಮತ್ತು ವಿಜಯ ವಿಠಲ ದೇವಾಲಯಗಳು ಈ ಮಹೋತ್ಸವದ ಕೇಂದ್ರಗಳಾಗಿದ್ದವು. ತಮ್ಮ ಸಾಮ್ರಾಜ್ಯದ ಶಕ್ತಿ–ಸಾಮರ್ಥ್ಯ, ಸಂಪತ್ತು–ಸಮೃದ್ಧಿ, ವೈಭವ–ವೈಭೋಗ, ವೀರತ್ವ–ಧೀರತ್ವ, ಕಲೆ–ಸಾಹಿತ್ಯ, ಸಂಗೀತ–ನೃತ್ಯ, ಸಂಸ್ಕೃತಿ–ಸಂಪನ್ನತೆ... ಹೀಗೆ ಸಕಲ ವಿಧಗಳಲ್ಲೂ ತಮ್ಮ ಹಿರಿಮೆ–ಗರಿಮೆಗಳನ್ನು ತೋರ್ಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಬಹುಮುಖ್ಯವಾಗಿ ವಿಜಯದ ದ್ಯೋತಕವಾಗಿ ವಿಜಯದಶಮಿಯ ಈ ದಸರಾ ಮಹೋತ್ಸವವನ್ನು ವಿಜಯನಗರ ಅರಸರು ಆಚರಿಸುತ್ತಿದ್ದರು. ಈ ಉತ್ಸವವನ್ನು ವೀಕ್ಷಿಸಲು ದೇಶ–ವಿದೇಶಗಳ ಗಣ್ಯಾತಿಗಣ್ಯರು, ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ ದಾಖಲೆಗಳುಂಟು. ಅಷ್ಟೇ ಅಲ್ಲ 11ನೇ ಶತಮಾನದಲ್ಲೇ ಇಲ್ಲಿಗೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರಾದ ಅಲ್ಬೆರೋನಿ, 15–16ನೇ ಶತಮಾನದಲ್ಲಿ ಬಂದಿದ್ದ ಪರ್ಷಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲ ಕೊಂಟಿ, ಪೋರ್ಚುಗೀಸಿನ ಡೊಮಿಂಗೋಪಾಯಸ್ (1520–1522) ಮೊದಲಾದವರು ವಿಜಯನಗರ ಸಾಮ್ರಾಜ್ಯದ ವೈಭವೋಪೇತವಾದ ಈ ಮಹೋತ್ಸವವನ್ನು ಕೊಂಡಾಡಿ ತಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ.

ಇಂಥ ವಿಜಯದಶಮಿಯ ದಸರಾ ಮಹೋತ್ಸವವನ್ನು ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮುಂದುವರಿಸಿಕೊಂಡು ಬಂದವರು ಯದುವಂಶದ ಮೈಸೂರು ಒಡೆಯರು. ಇವರಲ್ಲಿನ 9ನೇ ಆಳ್ವಿಕೆಯ ರಾಜ ಒಡೆಯರು (1578–1617) ಅಂದು ತಮ್ಮ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ 1610ರಲ್ಲಿ ವಿಜಯನಗರದ ರಾಜಪರಂಪರೆಯಂತೆ ನವರಾತ್ರಿ ಉತ್ಸವದ ವಿಜಯದಶಮಿಯ ದಸರಾ ಮಹೋತ್ಸವವನ್ನು ಮೊದಲಿಗೆ ಆರಂಭಿಸಿದರು. ಥೇಟ್ ವಿಜಯನಗರ ಅರಸರ ಸಂಪ್ರದಾಯದಂತೆಯೇ ದಸರಾಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಶಾಸ್ತ್ರ ಹಾಗೂ ವಿಧಿ–ವಿಧಾನಗಳನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಅಳವಡಿಸಿಕೊಂಡರು. ಈ ಪ್ರಕಾರ ಅಶ್ವಯುಜ ಶುದ್ಧ ಪ್ರಥಮೆಯಂದು ನವರಾತ್ರಿ ಉತ್ಸವ ಶುರುವಾಗಿ ಮಹಾನವಮಿಯ ಕಡೇ ದಿನದವರೆಗೂ ಪ್ರತಿನಿತ್ಯ ಪೂಜೆ–ಪುನಸ್ಕಾರ, ಪೂರ್ವಾಹ್ನ ಮತ್ತು ಮಧ್ಯಾಹ್ನ ಸಿಂಹಾಸನಾರೋಹಣ, ಒಡ್ಡೋಲಗ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಬೇಕೆಂದು ಪಕ್ಕಾ ವಿಧೇಯಕವನ್ನೇ ಮಾಡಿ ದಸರಾ ಹಬ್ಬವನ್ನು ಆಚರಣೆಗೆ ತಂದರು.

1798ರವರೆಗೂ ಮೈಸೂರು ರಾಜ್ಯದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲೇ ದಸರಾ ನಡೆಯುತ್ತಿತ್ತು. ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಯ ನಂತರ ಮತ್ತೆ ಅಧಿಕಾರಕ್ಕೆ ಬಂದ ಯದುಕುಲತಿಲಕ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಕಾಲಕ್ಕೆ (1799–1868) ರಾಜ್ಯದ ರಾಜಧಾನಿ ಶ್ರೀರಂಗಪಟ್ಟಣದಿಂದ 1799 ಜೂನ್ 30ರಂದು ಮೈಸೂರಿಗೆ ವರ್ಗವಾಯಿತು. ಅಲ್ಲಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅತೀವ ಕಾಳಜಿಯಿಂದ ಮತ್ತಷ್ಟು ವಿಜೃಂಭಣೆಯಿಂದ 1799ರ ಆಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ದಸರಾ ಪ್ರಾರಂಭವಾಗಿ 'ಮೈಸೂರು ದಸರಾ' ಎಂದು ವಿಶ್ವ ವಿಖ್ಯಾತಿಯಾಯಿತು. ವಿಜಯದಶಮಿಯಂದು ಮಧ್ಯಾಹ್ನ ಮಹಾರಾಜರು ಅಲಂಕೃತ ಆನೆಯ ಮೇಲಿನ ಚಿನ್ನದ ಅಂಬಾರಿಯನ್ನೇರಿ ವೈಭವದ ಜಂಬೂಸವಾರಿಯಲ್ಲಿ ಅಂಬಾ ವಿಲಾಸ ಅರಮನೆಯಿಂದ ಹೊರಟು ಬನ್ನಿಮಂಟಪಕ್ಕೆ ತೆರಳಿ ಬನ್ನಿಪೂಜೆ ಮಾಡಿ ಧ್ವಜ ಹಾರಿಸಿ ಸೈನಿಕರಿಂದ ವಂದನೆ ಸ್ವೀಕರಿಸಿ ನಂತರ ತಾವು ಬಂದ ರಾಜ ಮಾರ್ಗದಲ್ಲೇ ಅರಮನೆಗೆ ವಾಪಸ್ಸಾಗುವ ಈ ಜಂಬೂಸವಾರಿಯೇ ಮೈಸೂರು ದಸರೆಯ ಪ್ರಮುಖ ಆಕರ್ಷಣೆ.

ಈ ರೀತಿ ರಾಜ ಒಡೆಯರಿಂದ ಶ್ರೀರಂಗಪಟ್ಟಣದಲ್ಲಿ ಪ್ರಾರಂಭವಾದ ವಿಜಯನಗರ ಪರಂಪರೆಯ ನವರಾತ್ರಿ ಪೂಜೆಯ ದಸರಾ ಮಹೋತ್ಸವ ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಮತ್ತಷ್ಟು ಭವ್ಯಗೊಂಡು, ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆ(1902–1940) ಕಾಲಕ್ಕೆ ಮಗದಷ್ಟು ವೈಭವದ ಉತ್ತುಂಗಕ್ಕೇರಿ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವಾಗಿ ವಿಜೃಂಭಿಸಿತು. ನಾಲ್ವಡಿಯವರ ನಂತರ ಯದುವಂಶದ 25ನೆಯ ಹಾಗೂ ಕಟ್ಟಕಡೆಯ ದೊರೆಯಾಗಿ ಅಧಿಕಾರಕ್ಕೆ ಬಂದ ಶ್ರೀ ಜಯಚಾಮರಾಜ ಒಡೆಯರ್ ಆಳ್ವಿಕೆ ಕಾಲದಲ್ಲಿ (1940–1947) ಇನ್ನಷ್ಟು ವೈಭವ ಪಡೆದುಕೊಂಡು ಜಾಗತಿಕ ಆಕರ್ಷಣೆ ಪಡೆಯಿತು. ಆದರೆ, 1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ಗಳಿಸಿದ ನಂತರ ರಾಜ ಮಹಾರಾಜರ ಸಂಸ್ಥಾನಗಳೆಲ್ಲವೂ ಭಾರತ ಸರ್ಕಾರದಲ್ಲಿ ವಿಲೀನವಾದವು. ಆದರೂ ಸಹ ಯಾವುದೇ ಅಡ್ಡಿಯಿಲ್ಲದೆ ಮೈಸೂರು ದಸರಾ ಆಚರಣೆ ನಡೆದುಕೊಂಡು ಬರುತ್ತಿತ್ತು. ಶ್ರೀ ಜಯಚಾಮರಾಜ ಒಡೆಯರು ರಾಜ ಪ್ರಮುಖರಾಗಿ ಹಿಂದಿನಂತೆ ಜಂಬೂಸವಾರಿಯಲ್ಲಿ ಭಾಗವಹಿಸುತ್ತಿದ್ದರು. 1962ರಲ್ಲಿ ರಾಜಧನ ಮತ್ತು ರಾಜತ್ವ ರದ್ದಾದಾಗ ಮೂರ್‍ನಾಲ್ಕು ವರ್ಷಗಳ ಕಾಲ ದಸರಾ ನಿಂತು ಹೋಗಿತ್ತು. ಆದರೆ, ಮೈಸೂರಿನ ಪ್ರಮುಖ ಕೈಗಾರಿಕೋದ್ಯಮಿ ಎಫ್.ಕೆ. ಇರಾನಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಸರಳವಾಗಿ ದಸರಾ ಹಬ್ಬವನ್ನು ನಡೆಸಿಕೊಂಡು ಬರಲಾಯಿತು. 1980ರಲ್ಲಿ ಆರ್.ಗುಂಡೂರಾವ್ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾದಾಗ ಭವ್ಯ ಪರಂಪರೆಯ ಮೈಸೂರು ದಸರಾ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿ ಅದರ ಉಸ್ತುವಾರಿಯನ್ನು ಸರ್ಕಾರವೇ ವಹಿಸಿಕೊಂಡಿತು. ಹಾಗಾಗಿ ಅಂದಿನಿಂದ ಇಂದಿನ ತನಕವೂ ನಾಡಹಬ್ಬವಾಗಿ ರಾಜ್ಯ ಸರ್ಕಾರದಿಂದಲೇ ಪ್ರತಿವರ್ಷ ಮೈಸೂರು ದಸರಾ ನಡೆಯುತ್ತಾ ಬಂದಿದೆ.

ರಾಜ ಪ್ರತ್ಯಕ್ಷ ದೈವವೆಂಬ ಭಾವನೆಯಿದ್ದ ಆ ಕಾಲದಲ್ಲಿ ಆಳರಸರದೇ ದರ್ಬಾರು. ಅಂದು ಅಂಬಾರಿಯಲ್ಲಿ ಸ್ವತಃ ಮಹಾರಾಜರೇ ಕೂರುತ್ತಿದ್ದರೆ ಇಂದು ಮೈಸೂರಿನ ಅಧಿದೇವತೆ ನಾಡದೇವಿ ಶ್ರೀ ಚಾಮುಂಡೇಶ್ವರಿ ಅಂಬಾರಿಯಲ್ಲಿ ಅಲಂಕೃತವಾಗಿ ಪೂಜಿಸಲ್ಪಡುತ್ತಾಳೆ. 750 ಕೆ.ಜಿ. ಭಾರದ ಬಂಗಾರದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯ ಸುಂದರ ಮೂರ್ತಿಯನ್ನು ಹೊತ್ತ ಗಜರಾಜನ ಗಾಂಭೀರ್ಯ ನಡಿಗೆಯಲ್ಲಿ ಮೈಸೂರು ರಾಜ ಬೀದಿಯಲ್ಲಿ ಸಾಗುವ ಮೈಸೂರು ದಸರೆಯ ಜಂಬೂಸವಾರಿಯನ್ನು ನೋಡುವುದೇ ಒಂದು ಮಹಾಹಬ್ಬ. ಹಾಗಾಗಿ ಈ ಮಹಾದೃಶ್ಯ ಕಾವ್ಯವನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶಿಯರೆಲ್ಲಾ ಸಾಗರದೋಪಾದಿಯಲ್ಲಿ ಮೈಸೂರಿನತ್ತ ಹರಿದು ಬರುತ್ತಾರೆ. ವಿಜಯದಶಮಿಯಂದು ಈ ಚಿನ್ನದ ಅಂಬಾರಿಯನ್ನು ದರ್ಶಿಸುವುದು ಮಹಾ ಪುಣ್ಯವೆಂಬ ಭಾವನೆ ಇಲ್ಲಿ ಬೇರೂರಿರುವುದರಿಂದ ಇದಕ್ಕೆ ದೈವೀಕಶಕ್ತಿಯುದ್ದೆಂದು ಹೆಚ್ಚಿನ ಮಹತ್ವವುಂಟು.

ವಿಜಯದಶಮಿ ವೈಭವದ ನವರಾತ್ರಿಯ ಮೈಸೂರು ದಸರಾ ಎಂದರೆ ಅದು ಜಂಬೂಸವಾರಿಯಷ್ಟೇ ಅಲ್ಲ. ಸಮಸ್ತ ನಾಡಿನ ಸಾಂಸ್ಕೃತಿಕ ಸಿರಿ ಸಂಪತ್ತಿನ ಮತ್ತು ನಾಡಹಬ್ಬದ ರಾಜ ಪರಂಪರೆಯ ಅನಾವರಣ. ಮೈಸೂರು ದಸರಾ ಉತ್ಸವದ ಉದ್ದಕ್ಕೂ ಇದರದ್ದೇ ಮಹಾದರ್ಶನ. ಅಶ್ವಯುಜ ಶುದ್ಧ ಪ್ರಥಮೆಯಂದು ದೇವಿ ಚಾಮುಂಡಿ ಪೂಜೆಯೊಡನೆ ಚಾಮುಂಡಿಬೆಟ್ಟದಲ್ಲಿ ನವರಾತ್ರಿ ಉತ್ಸವ ಆರಂಭಗೊಳ್ಳುವ ಮೊದಲ ದಿನದಿಂದ ಹಿಡಿದು ಮಹಾನವಮಿಯ ಒಂಭತ್ತು ದಿನಗಳೂ ದಸರಾ ಸಂಗೀತೋತ್ಸವ, ದಸರಾ ಚಲನಚಿತ್ರೋತ್ಸವ, ದಸರಾ ಕಾವ್ಯೋತ್ಸವ, ದಸರಾ ರಂಗೋತ್ಸವ, ದಸರಾ ಕ್ರೀಡೋತ್ಸವ, ಯುವ ದಸರಾ, ಯೋಗ ದಸರಾ, ಗ್ರಾಮೀಣ ದಸರಾ, ಜನಪದ ದಸರಾ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ, ದಸರಾ ಗೊಂಬೆ ಪ್ರದರ್ಶನ, ದಸರಾ ವೈಮಾನಿಕ ಪ್ರದರ್ಶನ, ದಸರಾ ಆಹಾರ ಮೇಳ.... ಹೀಗೆ ಮೈಸೂರಿನ ತುಂಬಾ ವಿವಿಧ ದಸರಾ ಉತ್ಸವಗಳ, ಮೇಳಗಳ, ಪ್ರದರ್ಶನಗಳ ಮಹಾ ಸುಗ್ಗಿಯೇ ಜರುಗುತ್ತದೆ. ನವರಾತ್ರಿಯ ಸಮಾರೋಪವಾಗಿ ವಿಜಯದಶಮಿಯಂದು ರಾಜ್ಯದ ಮುಖ್ಯಮಂತ್ರಿಯಿಂದ ನಂದಿ ಕಂಬ ಪೂಜೆಯೊಡನೆ ಆನೆ ಮೇಲಿನ ಅಂಬಾರಿಯಲ್ಲಿ ಆಸೀನಳಾಗಿರುವ ತಾಯಿ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಚಾಲನೆಗೊಂಡು ನಡೆಯುವ ಜಂಬೂಸವಾರಿಯ ಮಹಾ ಮೆರವಣಿಗೆಯಲ್ಲಂತೂ ಇಡೀ ನಾಡಿನ ಸಾಂಸ್ಕೃತಿಕ ಸಂಪತ್ತು ತೆರೆದುಕೊಳ್ಳುತ್ತದೆ. ಮಿಂಚಿ ಮೆರೆಯುತ್ತದೆ.

ನಂದೀಧ್ವಜ ಕುಣಿತ, ನಾದಸ್ವರ ವಾದನ, ಪ್ಯಾಲೇಸ್ ಬ್ಯಾಂಡ್, ಪೊಲೀಸ್ ಬ್ಯಾಂಡ್, ಆನೆ ಸಾರೋಟು, ಕುದುರೆ ಸಾರೋಟು, ಫಿರಂಗಿಗಳು, ಬೆಳ್ಳಿ ರಥ, ವಿವಿಧ ಪಲ್ಲಕ್ಕಿಗಳು, ಭಜನೆ ಮೇಳ, ಕರಗ, ವೀರಭದ್ರನ ಕುಣಿತ, ಕೀಲು ಕುದುರೆ, ಮಲ್ಲಗಂಬ, ವೇಷಗಾರರು, ಅಲಾವಿ ಕುಣಿತ, ವೀರಗಾಸೆ, ಝೂಂಜ್ ಪಥಕ್, ಗೊರವರ ಕುಣಿತ, ಜಗ್ಗಲಗೆ ಮೇಳ, ಹೆಜ್ಜೆ ಮೇಳ, ಗಾರುಡಿ ಗೊಂಬೆ, ಟಿಬೇಟಿಯನ್ ನೃತ್ಯ, ಚಿಟ್ ಮೇಳ, ಕೋಲಾಟ, ಮಲೆನಾಡು ಸುಗ್ಗಿಕುಣಿತ, ಕೊಡವ ಕುಣಿತ, ಪೂಜಾ ಕುಣಿತ, ಕಂಸಾಳೆ, ತಮಟೆ ವಾದನ, ಮರಗಾಲು ಕುಣಿತ, ಸೋಮನಕುಣಿತ, ಚಂಡೆ ಮೇಳ, ಹಾಲಕ್ಕಿ ಸುಗ್ಗಿ ಕುಣಿತ, ನಗಾರಿ ಮೇಳ, ಪಟಾ ಕುಣಿತ, ಕೊಂಬು ಕಹಳೆ, ಕರಡಿ ಮಜಲು, ಪಾಳೇಗಾರರ ವೇಷ, ದೊಣ್ಣೆವರಸೆ, ಕಂಗಿಲು ಕುಣಿತ, ಯಕ್ಷಗಾನ ವೇಷಧಾರಿಗಳು, ಜಡೆಕೋಲಾಟ, ಧ್ವಜ ಕುಣಿತ, ಚಿಟಿಕಿ ಭಜನೆ, ಒನಕೆ ನೃತ್ಯ, ಭೂತ ನೃತ್ಯ ಇವುಗಳೆಲ್ಲದರ ಮಹಾ ಸಂಗಮವಾಗಿ ರಾಜ್ಯದ ಪ್ರತಿಯೊಂದು ಜಿಲ್ಲೆಯನ್ನೂ ಪ್ರತಿನಿಧಿಸುವ 30ಕ್ಕೂ ಹೆಚ್ಚು ವೈವಿಧ್ಯಮಯ ಸ್ತಬ್ದಚಿತ್ರಗಳೊಡನೆ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿ ಸಾಗುವ 'ಮೈಸೂರು ದಸರಾ' ಎಂಬ ಈ ಮಹಾ ಮೆರವಣಿಗೆ ಲಕ್ಷಾಂತರ ಜನರ ಕಣ್ಮನ ಸೆಳೆಯುತ್ತಾ ನಗರದಿಂದ ನಾಲ್ಕೈದು ಕಿ.ಮೀ. ದೂರವಿರುವ ಬನ್ನಿಮಂಟಪ ತಲುಪುತ್ತದೆ.

ಆಕರ್ಷಕ ಟಾರ್ಚ್‌ಲೈಟ್ ಪರೇಡ್

ಆಗ ಅಲ್ಲಿ ಪೊಲೀಸ್ ದಳದಿಂದ ಮನಮೋಹಕ, ಬಹುರೋಚಕವಾದ ಟಾರ್ಚ್‌ಲೈಟ್ ಪರೇಡ್ (ಪಂಜಿನ ಕವಾಯಿತು) ಆರಂಭವಾಗುತ್ತದೆ. ಹಿಂದೆ ಮಹಾರಾಜರು ಸೈನಿಕರಿಂದ ಧ್ವಜ ವಂದನೆ ಸ್ವೀಕರಿಸುತ್ತಿದ್ದ ಮಾದರಿಯಲ್ಲೇ ಈಗ ಟಾರ್ಚ್‌ಲೈಟ್ ಪರೇಡ್‌ನಲ್ಲಿ ರಾಜ್ಯದ ರಾಜ್ಯಪಾಲರು ಧ್ವಜವಂದನೆ ಗೌರವ ಸ್ವೀಕರಿಸುತ್ತಾರೆ. ಟಾರ್ಚ್‌ಲೈಟ್ ಪರೇಡ್‌ನ ಚಿತ್ತಾಕರ್ಷಕ ಸಾಹಸಮಯ ವರ್ಣ ದೃಶ್ಯಗಳಂತೂ ವರ್ಣಿಸಲಸದಳ. ಲೇಸರ್ ಪ್ರದರ್ಶನ, ಅಶ್ವಾರೋಹಿಗಳ ಸಾಹಸ ಕಸರತ್ತು, ಹೊನಲು ಬೆಳಕಿನ ಮಾಯಾಲೋಕ, ಬಣ್ಣ ಬಣ್ಣದ ಬಾಣ ಬಿರುಸುಗಳ ಯಕ್ಷಲೋಕಗಳೆಲ್ಲವೂ ಒಮ್ಮೆಗೇ ಸೃಷ್ಟಿಗೊಂಡು ಇವುಗಳೊಂದಿಗೆ ಹತ್ತು ದಿನಗಳ ಒಟ್ಟಾರೆ ದಸರಾ ಕಾರ್ಯಕ್ರಮಗಳಿಗೆ ಮಂಗಳ ಹಾಡಲಾಗುತ್ತದೆ. ಈ ದಸರಾ ಸಂದರ್ಭದಲ್ಲಿ ಮೈಸೂರು ನಗರದ ದೊಡ್ಡಕೆರೆ ಮೈದಾನದಲ್ಲಿ ಸೃಷ್ಟಿಗೊಳ್ಳುವ 'ದಸರಾ ವಸ್ತುಪ್ರದರ್ಶನ' ಕೂಡ ಪ್ರವಾಸಿಗರನ್ನು ಆಕರ್ಷಿಸುವ ಕಿನ್ನರ ಲೋಕವಾಗಿ ಕಂಗೊಳಿಸುತ್ತದೆ. ಹಾಗೆಯೇ ಇವೆಲ್ಲಕ್ಕೂ ಕೇಂದ್ರ ಬಿಂದುವಾದ ಜಗದ್ವಿಖ್ಯಾತ ಅಂಬಾವಿಲಾಸ ಅರಮನೆಯೊಳಗಿನ ದರ್ಬಾರ್‌ಹಾಲ್‌ನಲ್ಲಿ ಇದೇ ನವರಾತ್ರಿಯ ವೇಳೆ ರಾಜವಂಶಸ್ಥ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರತ್ನಖಚಿತ ಸ್ವರ್ಣ ಸಿಂಹಾಸನಾರೂಢರಾಗಿ "ಖಾಸಗಿ ದರ್ಬಾರ್' ನಡೆಸುತ್ತಾರೆ. ಬೇರೆಲ್ಲೂ ಕಾಣಸಿಗದ, ಎಲ್ಲರಿಗೂ ಪ್ರವೇಶವಿರದ ಅಪರೂಪದ ಖಾಸಗಿ ದರ್ಬಾರ್ ಇದು!

ಶಮಿವೃಕ್ಷ ಮತ್ತು ವಿಜಯದಶಮಿ

ಮೈಸೂರು ದಸರಾ ಎಂದರೆ ಅದು ಮಹಾ ಸಂಭ್ರಮದ ನಾಡಹಬ್ಬ, ಧರ್ಮ ಸಂಸ್ಕೃತಿಗಳು ಸಂಗಮಿಸಿ ಮೆರೆಯುವ ಮಹಾಪರ್ವ, ಶಕ್ತಿ ದೇವತೆಯನ್ನು ಪೂಜಿಸುವ ದಿವ್ಯೋತ್ಸವ, ಆಶ್ವಯುಜ ಮಾಸದ ಪಾಡ್ಯದಿಂದ ಪ್ರಾರಂಭಿಸಿ ದಶಮಿಯವರೆಗೆ ಹತ್ತುದಿನಗಳು ಒಳಗೊಂಡಿರುವ ಈ ಸುದೀರ್ಘ ಮಹೋತ್ಸವದ ಮೊದಲ ಒಂಭತ್ತು ದಿನಗಳು 'ನವರಾತ್ರಿ' ಎನಿಸಿದರೆ ಹತ್ತನೆಯ ದಿನವು ಸಂಭ್ರಮದ ಸಮಾರೋಪವಾಗಿ 'ವಿಜಯದಶಮಿ' ಎನಿಸಿಕೊಂಡಿದೆ.

ಇದು ವಿಜಯ+ದಶಮಿಯೂ ಹೌದು., ಹಾಗೆಯೇ ವಿಜಯದ+ಶಮಿಯೂ ಹೌದು, ಶಮೀವೃಕ್ಷದ ಅರ್ಥಾತ್ ಬನ್ನಿ ಮರದ ಕೊಂಬೆಯೊಂದನ್ನು ಕಡಿದು ವಿಜಯದ ಸಂಕೇತವಾಗಿ ಸೀಮೋಲ್ಲಂಘನ ಮಾಡುವುದೇ ವಿಜಯದಶಮಿ, ಶಮೀಪೂಜೆಗೆ ಇಲ್ಲಿ ವಿಶೇಷ ಮಹತ್ವ, ಮೈಸೂರು ದಸರಾದಲ್ಲಿ ಅರಮನೆಯಿಂದ ಹೊರಡುವ 'ಜಂಬೂಸವಾರಿ' ಬನ್ನಿಮಂಟಪವನ್ನು ತಲುಪಿ ಬನ್ನಿಮರವನ್ನು ಪೂಜಿಸುವುದ ರೊಂದಿಗೆ ದಸರೆಗೆ ಮಂಗಳ ಹಾಡಲಾಗುತ್ತದೆ ಹಾಗೆಯೇ ಮೈಸೂರಿನ ಯದುವಂಶಸ್ಥರು ವಿಜಯದಶಮಿಯಂದು ಶಮೀವೃಕ್ಷ ಪೂಜಿಸುವುದರೊಂದಿಗೆ ಪಾಡ್ಯದಂದು ಕಟ್ಟಿಸಿಕೊಂಡಿದ್ದ ಕಂಕಣವನ್ನು ಬಿಚ್ಚಿ ತಮ್ಮ ಖಾಸಗಿ ದರ್ಬಾರನ್ನು ಮುಗಿಸುತ್ತಾರೆ.



ಕೇಂದ್ರದ ಕೃಷಿ ಖಾತೆ ರಾಜ್ಯ ಸಚಿವೆ ಕು. ಶೋಭಾ ಕರಂದ್ಲಾಜೆ ಅವರು ಭಾನುವಾರ ಮೈಸೂರಿನ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.

ಎಸ್.ಜೆ.ಪುನಿತಾಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ಹೆಚ್.ರಾಜಶೇಖರ್ ಅವರ ಮಾರ್ಗದರ್ಶನದಲ್ಲಿ ಎಸ್.ಜೆ. ಪುನಿತಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕೈರೋ ಶೃಂಗಸಭೆ: ಗಾಜಾ ಯುದ್ಧ ; ಇಸ್ರೇಲ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅರಬ್ ರಾಷ್ಟ್ರಗಳ ನಾಯಕರು!

ಕೈರೋ, ಅ.22– ಶನಿವಾರ ನಡೆದ ಕೈರೋ ಶೃಂಗಸಭೆಯಲ್ಲಿ ಗಾಜಾದಲ್ಲಿನ ಇಸ್ರೇಲ್ ಕ್ರಮವನ್ನು ಈಜಿಪ್ಟ್ ಮತ್ತು ಜೋರ್ಡಾನ್ ಕಟುವಾಗಿ ಟೀಕಿಸಿದ್ದು, ದಶಕಗಳ ಹಿಂದೆ ಇಸ್ರೇಲ್‌ನೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡಿದ್ದ ಎರಡು ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳು ಹಮಾಸ್ ವಿರುದ್ಧದ ಎರಡು ವಾರಗಳ ಯುದ್ಧದಿಂದ ತಾಳ್ಮೆ ಕಳೆದುಕೊಳ್ಳುತ್ತಿರುವಂತೆ ತೋರಿಸಿತು.

ಶೃಂಗಸಭೆಯನ್ನು ಆಯೋಜಿಸಿದ್ದ ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್–ಸಿಸ್ಸಿ ಅವರು ಗಾಜಾದ 2.3 ಮಿಲಿಯನ್ ಪ್ಯಾಲೆಸ್ಟೀನಿಯನ್ನರನ್ನು ಸಿನಾಯ್ ಪರ್ಯಾಯ ದ್ವೀಪಕ್ಕೆ ಓಡಿಸುವ ಯಾವುದೇ ಮಾತನ್ನು ಮತ್ತೊಮ್ಮೆ ತಿರಸ್ಕರಿಸಿದರು ಮತ್ತು ಪ್ಯಾಲೆಸ್ತೀನ್ ನಾಶದ ವಿರುದ್ಧ ಎಚ್ಚರಿಕೆ ನೀಡಿದರು.

ಹಮಾಸ್ ದಾಳಿಯಿಂದ ಉಂಟಾದ ಯುದ್ಧದಲ್ಲಿ ಸಾವಿರಾರು ಜನರು ಸಾವನ್ನಪ್ಪಿದ್ದು, ಮೂರನೇ ವಾರಕ್ಕೆ ಕಾಲಿಟ್ಟಿದ್ದರೂ ಯುದ್ಧ ಅಂತ್ಯಗೊಳದ ಲಕ್ಷಣ ಕಾಣುತ್ತಿರುವುದರಿಂದ ಆಗಾಗ್ಗೆ ಮಧ್ಯವರ್ತಿಗಳಾಗಿ ಇಸ್ರೇಲ್‌ನೊಂದಿಗೆ ನಿಕಟ ಸಂಬಂಧ ಹೊಂದಿರುವವರಲ್ಲಿಯೂ ಸಹ ಇಸ್ರೇಲ್ ವಿರುದ್ಧ ಕೋಪ ಹೆಚ್ಚಾಗುತ್ತಿರುವುದು ಶೃಂಗಸಭೆಯ ಭಾಷಣಗಳಲ್ಲಿ ಕೇಳಿಬಂತು.

ಜೋರ್ಡಾನ್ ದೊರೆ ಕೂಡಾ ಅದೇ ರೀತಿಯ ಸಂದೇಶ ನೀಡಿದರು. ಜೋರ್ಡಾನ್ ಈಗಾಗಲೇ ಹಿಂದಿನ ಮಧ್ಯಪ್ರಾಚ್ಯ ಯುದ್ಧಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳಾಂತರಗೊಂಡ ಪ್ಯಾಲೆಸ್ಟೀನಿಯನ್ನರನ್ನು ಹೊಂದಿದೆ. ಈಗ ಇಸ್ರೇಲ್ ಮಾಡುತ್ತಿರುವುದು ಅಂತಾರಾಷ್ಟ್ರೀಯ ಕಾನೂನಿನ ಪ್ರಕಾರ ಯುದ್ಧಾಪರಾಧವಾಗಿದೆ ಮತ್ತು ನಮಗೆಲ್ಲರಿಗೂ ಕೆಂಪು ಗೆರೆಯಾಗಿದೆ ಎಂದು ಹೇಳಿದರು.

ಗಾಜಾದಲ್ಲಿ ಇಸ್ರೇಲ್ ತನ್ನ ಬರ್ಬರ ಆಕ್ರಮಣವನ್ನು ನಿಲ್ಲಿಸುವಂತೆ ಪ್ಯಾಲೇಸ್ಟಿನಿಯನ್ ಅಧ್ಯಕ್ಷ ಮಹಮೂದ್ ಅಬ್ಬಾಸ್ ಕರೆ ನೀಡಿದರು. ಪ್ಯಾಲೇಸ್ಟಿನಿಯನ್ನರನ್ನು ಕರಾವಳಿ ಪ್ರದೇಶದಿಂದ ಹೊರಹಾಕುವ ಪ್ರಯತ್ನಗಳ ವಿರುದ್ಧ ಎಚ್ಚರಿಕೆ ನೀಡಿದರು. ನಾವು ಬಿಡುವುದಿಲ್ಲ, ನಾವು ಬಿಡುವುದಿಲ್ಲ, ನಾವು ಬಿಡುವುದಿಲ್ಲ, ಮತ್ತು ನಾವು ನಮ್ಮ ಭೂಮಿಯಲ್ಲಿ ಉಳಿಯುತ್ತೇವೆ ಎಂದು ಅವರು ಶೃಂಗಸಭೆಯಲ್ಲಿ ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಸೋಮವಾರ 23 ಅಕ್ಟೋಬರ್ 2023

ಸಾಧಕರನ್ನು ಅಭಿನಂದಿಸಿದಾಗ ಸನ್ಮಾನ ಅರ್ಥಪೂರ್ಣ

ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಪ್ರಾಯ



ಮದ್ದೂರು, ಅ.22– ಸಮಾಜಕ್ಕಾಗಿ ಒಳ್ಳೆಯ ಕೆಲಸ ಮಾಡಿದ ವ್ಯಕ್ತಿಗಳನ್ನು ಗುರುತಿಸಿ, ಸನ್ಮಾನ ಮಾಡುವುದು ಅರ್ಥ ಪೂರ್ಣ ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಹೋರಾಟಗಾರ ಡಿ.ಕರಡೀ ಗೌಡರ 10ನೇ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಭಾನುವಾರ ತಾಲೂಕಿನ ವಳಗೆರೆಹಳ್ಳಿ ಗ್ರಾಮದ ಎಸ್.ಡಿ.ಜಯರಾಂ ಕ್ರೀಡಾಂ ಗಣದಲ್ಲಿ ಡಿ.ಕರಡೀಗೌಡ ಪ್ರತಿಷ್ಠಾನ ದಿಂದ ಆಯೋಜಿಸಿದ್ದ 10ನೇ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಶಿವರಾಜ್‌ಕುಮಾರ್ ಅವರು ಉತ್ತಮ ಸಾಧಕ. ಅವರ ಮೇಲೆ ಜನರು ಸಾಕಷ್ಟು ಪ್ರೀತಿ ಇಟ್ಟಿದ್ದಾರೆ. ಕರ್ನಾಟಕ ಸೇರಿದಂತೆ ಹಲವು ಭಾಗದಲ್ಲಿ ಅವರು ಒಳ್ಳೆಯ ಪ್ರೀತಿ ಗಳಿಸಿದ್ದಾರೆ. ಅವರಿಗೆ ಸನ್ಮಾನ ಮಾಡುತ್ತಿರುವುದು ಸಂತೋಷದ ವಿಷಯ. ಅಲ್ಲದೇ ಪ್ರೊ.ಜಯರಾಂದೇವ ಅವರಿಗೂ ಸನ್ಮಾನ ಮಾಡುತ್ತಿರುವುದು ಶ್ಲಾಘನೀಯ. ಕರ್ನಾಟಕ ಲೋಕಾಯುಕ್ತ ಬಂದ ವೇಳೆ ಸಮಾಜದ ಬಗ್ಗೆ ಎಲ್ಲರಿಗೂ ತಿಳಿಯುತ್ತಿದೆ. ಸಮಾಜ ತಪ್ಪು ಮಾಡಿದವರನ್ನು ಶಿಕ್ಷಿಸುತ್ತಿದೆ. ಜೈಲಿಗೆ ಹೋದವರ ಜೊತೆ ಹೋಗಬೇಡ ಅಂತ ಹಿಂದೆ ಹೇಳುತ್ತಿದ್ದರು. ಆದರೆ ಇಂದು ಶ್ರೀಮಂತಿಕೆ ಗೌರವಿಸುವ ಕೆಲಸ ಆಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶ್ರೀಮಂತನಾಗುವುದು ತಪ್ಪಿಲ್ಲ. ಆದರೆ ಇನ್ನೊಬ್ಬರ ಜೇಬಿಗೆ ಕೈ ಹಾಕಬಾರದು. ಸಮಾಜ ಬದಲಾವಣೆಯಾಗಬೇಕು. ತೃಪ್ತಿ ಇದ್ದರೆ ಯಾವ ರೋಗವೂ ಬರುವುದಿಲ್ಲ. ಹೀಗಾಗಿ ತೃಪ್ತಿ ಅಳವಡಿಸಿಕೊಳ್ಳಿ, ಮಾನವೀಯತೆ ನಮ್ಮ ಹಿರಿಯರು ಕಟ್ಟಿದ ಮೌಲ್ಯ ಮೊದಲು ಮಾನವನಾಗಬೇಕು. ಸಮಾಜ ದಲ್ಲಿ ಶಾಂತಿ ಸುವ್ಯವಸ್ಥೆ ಬರಲಿ ಎಂದರು.

ಇದೇ ಸಂದರ್ಭದಲ್ಲಿ ನಟ ಶಿವರಾಜ್ ಕುಮಾರ್ ಹಾಗೂ ಪ್ರೊ.ಜಯದೇವ ಅವರಿಗೆ ಕರಡಿಗೌಡ ಸಮಾಜಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಟಿ.ಜಿ.ಶಿವಶಂಕರೇಗೌಡ, ಪ್ರತಿಷ್ಠಾನದ ಅಧ್ಯಕ್ಷ ವಿ.ಜಿ.ಗೌಡ, ವೇಲು ವಿಶಾಲ್ ರಘು ಇತರೆ ಗಣ್ಯರು ಉಪಸ್ಥಿತರಿದ್ದರು.

ಕಾವೇರಿ ವಿಚಾರದಲ್ಲಿ ಪ್ರಧಾನಿ ಮಧ್ಯ ಪ್ರವೇಶಿಸಲಿ: ನಟ ಶಿವರಾಜ್ ಕುಮಾರ್ ಒತ್ತಾಯ

ಮದ್ದೂರು: ಕಾವೇರಿ ನದಿ ನೀರಿನ ವಿಚಾರದಲ್ಲಿ ಸಂಕಷ್ಟ ಎದುರಾಗಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯ ಪ್ರವೇಶಿಸಿ ಎರಡೂ ರಾಜ್ಯಗಳ ನಡುವೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಚಿತ್ರನಟ ಡಾ.ಶಿವರಾಜ್ ಕುಮಾರ್ ಒತ್ತಾಯಿಸಿದರು.

ತಾಲೂಕಿನ ವಳಗೆರೆಹಳ್ಳಿ ಗ್ರಾಮದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿದರೆ ಮಾತ್ರ ಸಮಸ್ಯೆಗೆ ಪರಿಹಾರ ಸಿಗಲಿದೆ. ಹೀಗಾಗಿ ಸಂಕಷ್ಟ ಪರಿಸ್ಥಿತಿಯಲ್ಲಿ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳ ನಡುವೆ ಮಾತುಕತೆಗೆ ಮುಂದಾಗಬೇಕಿದೆ. ಎರಡು ಸರ್ಕಾರಗಳ ಜೊತೆ ಮಾತನಾಡಿದರೆ ಸಮಸ್ಯೆ ಬಗೆಹರಿಯಲಿದೆ ಎಂದರು. ಕಾವೇರಿ ವಿಚಾರದಲ್ಲಿ ರೈತರ ಪರ ಸದಾ ಕಾಲ ನಿಲ್ಲುತ್ತೇವೆ. ಹೋರಾಟದ ಮೂಲಕ ಆಳುವ ಸರ್ಕಾರದ ಮೇಲೆ ಒತ್ತಡ ತರಬೇಕು. ಯಾವ ರೀತಿ ಒತ್ತಡ ತರಬೇಕು ಎಂಬುದರ ಬಗ್ಗೆ ಎಲ್ಲರೂ ಕುಳಿತು ತೀರ್ಮಾನ ಮಾಡಿದರೆ ಒಳ್ಳೆಯದು. ಕನ್ನಡಿಗರ ಹೋರಾಟ ದೊಡ್ಡ ಮಟ್ಟದಾಗಿರಬೇಕು. ಬೆಂಕಿ ಹಚ್ಚಿ ಆಕ್ರೋಶ ಹೊರ ಹಾಕುವುದಲ್ಲ. ಬದಲಿಗೆ ತಾಳ್ಮೆಯಿಂದ ಹೋರಾಟ ಮಾಡಬೇಕು. ಹಿರಿಯರೆಲ್ಲ ಒಟ್ಟಿಗೂಡಿ ರೈತರ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕು ಎಂದರು.

ನಾನು ರಾಜಕೀಯ ಪ್ರವೇಶಿಸುವ ಪ್ರಶ್ನೆಯೇ ಇಲ್ಲ. ಯಾವುದೇ ಕಾರಣಕ್ಕೂ ರಾಜಕೀಯಕ್ಕೆ ಬರುವುದಿಲ್ಲ. ನನಗೆ ಸಿನಿಮಾ ಕ್ಷೇತ್ರದಲ್ಲಿ ಸಂತೃಪ್ತಿ ಇದೆ. ಅಷ್ಟೇ ಸಾಕು. ಗೀತಾ ಶಿವರಾಜ್‌ಕುಮಾರ್ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಇರಲಿದ್ದಾರೆ. ಅವರು ಯಾವ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುತ್ತಾರೋ ಗೊತ್ತಿಲ್ಲ. ಚುನಾವಣೆಯಲ್ಲಿ ಸ್ಪರ್ಧೆ ಮಾಡಿದರೆ ಅವರ ಜೊತೆ ನಾನು ಇರುತ್ತೇನೆ ಎಂದರು. ಸ್ವಾತಂತ್ರ್ಯ ಹೋರಾಟಗಾರರ ಹೆಸರಲ್ಲಿ ನನಗೆ ಪ್ರಶಸ್ತಿ ದೊರೆತಿರುವುದು ಸಂತೋಷ ತಂದಿದೆ. ಅಷ್ಟೇ ಸಂಭ್ರಮದಿಂದ ಪ್ರಶಸ್ತಿ ಸ್ವೀಕರಿಸಿದ್ದೇನೆ. ಘೋಸ್ಟ್ ಚಲನಚಿತ್ರಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ. ವಿಭಿನ್ನ ಮಾದರಿಯ ಚಿತ್ರವನ್ನು ಕನ್ನಡಿಗರು ಸ್ವೀಕರಿಸಿರುವುದು ಖುಷಿ ವಿಚಾರವಾಗಿದ್ದು, ಜನರ ಪ್ರೋತ್ಸಾಹ ಸಿಕ್ಕರೆ ಒಳ್ಳೆಯ ಸಿನಿಮಾ ಮಾಡಲು ಸಾಧ್ಯ. ಮಾಮೂಲಿ ಚಲನಚಿತ್ರ ಮಾಡುವುದು ಬೇರೆ ಇಂತಹ ಸಿನಿಮಾ ಬೇರೆ. ಹೊರ ರಾಜ್ಯದಲ್ಲೂ ಒಳ್ಳೆಯ ಪ್ರತಿಕ್ರಿಯೆ ದೊರೆತಿದೆ. ಕಾಂತಾರ, ವೇದ ಸಿನಿಮಾ ಒಂದು ಮಟ್ಟಕ್ಕೆ ತಲುಪಿತ್ತು. ಘೋಸ್ಟ್ ಕೂಡ ದೊಡ್ಡ ಮಟ್ಟಕ್ಕೆ ಹೋಗುತ್ತಿದೆ ಎಂದರು.

ಉತ್ತಮ ಬದುಕಿಗೆ ಪೌರಾಣಿಕ ನಾಟಕಗಳು ಮಾರ್ಗದರ್ಶಕ

ವಕೀಲ ವಿ.ಎಸ್.ಧನಂಜಯ ಕುಮಾರ್



ಕೆ.ಆರ್.ಪೇಟೆ, ಅ.22– ಪೌರಾಣಿಕ ನಾಟಕಗಳು ಮನುಷ್ಯನ ಉತ್ತಮ ಬದುಕಿಗೆ ಮಾರ್ಗದರ್ಶಕವಾಗಿವೆ ಎಂದು ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ, ವಕೀಲ ವಿ.ಎಸ್. ಧನಂಜಯ ಕುಮಾರ್ ತಿಳಿಸಿದರು.

ತಾಲೂಕಿನ ಕತ್ತರಘಟ್ಟ ಗ್ರಾಮದಲ್ಲಿ ನಡೆದ ಅಭಿಮನ್ಯು ವಿವಾಹ ಅಥವಾ ಭೀಮ– ದುರ್ಯೋಧನರ ಗದಾಯುದ್ಧ ನಾಟಕದಲ್ಲಿ ಮಾತನಾಡಿದ ಅವರು, ನಾಟಕ ನಮ್ಮ ಸಂಸ್ಕೃತಿ ಪರಂಪರೆ ಪ್ರತಿಬಿಂಬ. ಪೌರಾಣಿಕ ನಾಟಕಗಳಲ್ಲಿ ಬರುವ ವಿವಿಧ ಪಾತ್ರಗಳ ಉತ್ತಮ ಸಾರವನ್ನು ಅರಿತು ಜೀವನ ನಡೆಸಿದರೆ ಮನುಷ್ಯ ಉತ್ತಮ ಜೀವನ ನಡೆಸಬಹುದು. ಇದು ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿ ಎಂದರು.

ಸತ್ಯ, ನ್ಯಾಯ, ನೀತಿ ಧರ್ಮಕ್ಕೆ ಜಯವಿದೆ. ಅನ್ಯಾಯ, ಅಧರ್ಮ, ಅಸತ್ಯಕ್ಕೆ ಎಂದಿಗೂ ಉಳಿಗಾಲವಿಲ್ಲ ಎಂಬ ಶ್ರೇಷ್ಠ ಸಂದೇಶವನ್ನು ಪೌರಾಣಿಕ ನಾಟಕಗಳು ನೀಡುತ್ತವೆ. ಹಾಗಾಗಿ ಪೌರಾಣಿಕ ನಾಟಕ ಕಲೆಯನ್ನು ಉಳಿಸಲು ಸರ್ಕಾರ ಸೂಕ್ತ ಪ್ರೋತ್ಸಾಹ ನೀಡಬೇಕು ಎಂದರು.

ಹಳ್ಳಿಗಳಲ್ಲಿ ಪೌರಾಣಿಕ ನಾಟಕ ಕಲಿತು ತಾವೇ ಸಂಪನ್ಮೂಲ ಕ್ರೋಢೀಕರಿಸಿ ನಾಟಕ ಗಳನ್ನು ಅಭಿನಯಿಸುತ್ತಾ ನಮ್ಮ ಸಂಸ್ಕೃತಿ, ಪರಂಪರೆ ಸಂರಕ್ಷಣೆ ಮಾಡುತ್ತಿದ್ದಾರೆ. ಹೀಗಾಗಿ ಸರ್ಕಾರ ನಾಟಕಗಳಿಗೆ ಕನಿಷ್ಠ 1 ಲಕ್ಷ ರೂ. ಪ್ರೋತ್ಸಾಹ ಧನ ನೀಡಬೇಕು ಎಂದು ಒತ್ತಾಯಿಸಿದರು. ಸಮಾಜ ಸೇವಕ ಹಾಗೂ ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಆರ್.ಟಿ.ಮಲ್ಲಿಕಾರ್ಜುನ್, ಉದ್ಯಮಿ ಜಗದೀಶ್ ಮಾತನಾಡಿದರು. ನಿವೃತ್ತ ಶಿಕ್ಷಕ ರಾಮೇಗೌಡ ನಾಟಕದ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಮಂಜು ಸಹೋದರ ಉದ್ಯಮಿ ಲೋಕೇಶ್ ಕಾರ್ಯಕ್ರಮ ಉದ್ಘಾಟಿಸಿದರು.

ಈ ವೇಳೆ ಟಿಎಪಿಸಿಎಂಎಸ್ ನಿರ್ದೇಶಕ ಬಲದೇವ್, ಗ್ರಾಪಂ ಸದಸ್ಯ ಸಿದ್ದೇಶ್, ಕತ್ತರಘಟ್ಟ ಡೈರಿ ಕಾರ್ಯದರ್ಶಿ ಚಂದ್ರ ಶೇಖರ್, ಗ್ರಾಮದ ಮುಖಂಡರಾದ ಕೆ.ಎಂ.ವಾಸುದೇವ್, ಸತೀಶ್, ಗವೀಗೌಡ, ಕುಮಾರ್, ಮನುಕುಮಾರ್, ಗ್ರಾಪಂ ಸದಸ್ಯರಾದ ಪರಮೇಶ್, ಹರ್ಷ, ದೀಪು, ಉಪನ್ಯಾಸಕ ವಾಸು, ಕತ್ತರಘಟ್ಟ ಸರ್ಕಾರಿ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಬೆಟ್ಟಮ್ಮ, ಶಿಕ್ಷಕ ನಾಗೇಂದ್ರ ಸೇರಿದಂತೆ ಇತರರಿದ್ದರು.



ಇತ್ತೀಚೆಗೆ ಮೈಸೂರು ವಿವಿಯಲ್ಲಿ ನಡೆದ 103ನೇ ಘಟಿಕೋತ್ಸವದಲ್ಲಿ ತಾಲೂಕಿನ ಬಲ್ಲೇನಹಳ್ಳಿ ಗ್ರಾಮದ ಜಯರಾಮ್ ಮತ್ತು ವೀಣಾ ದಂಪತಿ ಪುತ್ರಿ ಜೆ.ಲಿಖಿತ ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್‌ನಲ್ಲಿ 2 ಚಿನ್ನದ ಪದಕ ಪಡೆದಿದ್ದಾರೆ.

ಸರ್ಕಾರಿ ನೌಕರರ ಕ್ರೀಡಾಕೂಟ

ಮಂಡ್ಯ, ಅ.22– ರಾಜ್ಯ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಅ.27 ರಿಂದ 29 ರವರೆಗೆ ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲಾಗುವುದು.

ಜಿಲ್ಲೆಯಲ್ಲಿ ಸಂಘಟಿಸಲಾದ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾ ಕೂಟದಲ್ಲಿ ಭಾಗವಹಿಸಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಹಾಗೂ ಗುಂಪು ಸ್ಪರ್ಧೆ ಗಳಲ್ಲಿ ಪ್ರಥಮ ಸ್ಥಾನ ಪಡೆದು ಈಗಾಗಲೇ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿರುವ ಕ್ರೀಡಾಪಟುಗಳು ಅ.27ರಂದು ಬೆಳಗ್ಗೆ 8 ಗಂಟೆಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ತುಮಕೂರು ಇವರಲ್ಲಿ ವರದಿ ಮಾಡಿಕೊಂಡು ಕ್ರೀಡೆಗಳಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಕೋರಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾವೇರಿ ಹೋರಾಟ: ಶಿವಳ್ಳಿ, ನಗರಕೆರೆ ವ್ಯಾಪ್ತಿ ಗ್ರಾಮಸ್ಥರ ಬೆಂಬಲ

ಮಂಡ್ಯ, ಅ.22– ಕಾವೇರಿ ಕೊಳ್ಳದ ಜಲಾಶಯ ಗಳಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಮುಂದುವರೆದಿದ್ದು, ಭಾನುವಾರ ಮಂಡ್ಯ ತಾಲೂಕಿನ ಶಿವಳ್ಳಿ ಹಾಗೂ ಮದ್ದೂರು ತಾಲೂಕಿನ ನಗರಕೆರೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಗ್ರಾಮಸ್ಥರು ಕಾವೇರಿ ಹೋರಾಟ ಬೆಂಬಲಿಸಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು 48ನೇ ದಿನದ ಹೋರಾಟ ಮುಂದುವರಿಸಿ, ಕಾವೇರಿ ಹೋರಾಟಕ್ಕೆ ಬೆಂಬಲ ಸೂಚಿಸಿದ ಶಿವಳ್ಳಿ ಗ್ರಾಪಂ ವ್ಯಾಪ್ತಿಯ ರೈತರು, ನೆರೆ ರಾಜ್ಯಕ್ಕೆ ಹರಿಸುತ್ತಿರುವ ನೀರನ್ನು ಸ್ಥಗಿತಗೊಳಿಸ ಬೇಕು. ಸಂಕಷ್ಟ ಕಾಲದಲ್ಲಿ ಕರ್ನಾಟಕದ ಹಿತ ಕಾಪಾಡ ಬೇಕು. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಸಂಕಷ್ಟ ಸೂತ್ರ ರಚಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಶಿವಳ್ಳಿ, ಗುನ್ನ ನಾಯಕನಹಳ್ಳಿ, ಗೊರವಾಲೆ, ಮರಡಿಪುರ ಗ್ರಾಮದ ರೈತರು ಭಾಗಿಯಾಗಿದ್ದರು. ಗ್ರಾಮದ ಮುಖಂಡರಾದ ಶಿವಲಿಂಗಯ್ಯ, ನಾಗರಾಜ್, ನಾಗಣ್ಣ, ಶಿವಲಿಂಗಪ್ಪ ಜಯರಾಮು ಭಾಗವಹಿಸಿದ್ದರು.

ಮದ್ದೂರು ತಾಲೂಕಿನ ನಗರಕೆರೆ ಗ್ರಾಪಂ ವ್ಯಾಪ್ತಿಯ



ಹುಲಿಗೆರೆಪುರ, ಉಪ್ಪಾರದೊಡ್ಡಿ, ಸೋಂಪುರ, ವೈದ್ಯನಾಥ ಪುರ, ಮಾಲಗಾರನಹಳ್ಳಿ ರೈತರು ನಿರಂತರ ಧರಣಿ ಬೆಂಬಲಿಸಿದರು. ಗ್ರಾಮದ ಮುಖಂಡರಾದ ದೇವೇಗೌಡ, ಚೆನ್ನೇಗೌಡ, ಸುರೇಶ್, ಪ್ರಸನ್ನ, ಪುಟ್ಟಯ್ಯ, ಅಭಿ, ಸೋಮು, ಕಿರಣ್ ಕುಮಾರ್ ಭಾಗವಹಿಸಿದ್ದರು.

ಇದೇ ವೇಳೆ ಮಾತನಾಡಿದ ಕಾವೇರಿ ಕುಟುಂಬದ ಪ್ರೊ.ಕೆ.ಸಿ.ಬಸವರಾಜ್, ಕಾವೇರಿ ನದಿ ನೀರು ಹಂಚಿಕೆ ಸಂಬಂಧ ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನಲ್ಲಿ ಸಂಕಷ್ಟ ಸೂತ್ರ ರೂಪಿಸಲಾಗಿದೆ. ಕಾವೇರಿ ವಿಚಾರದಲ್ಲಿ ಸಂಕಷ್ಟ ಸೂತ್ರ ಇಲ್ಲ ಎಂಬುದು ತಪ್ಪು ತಿಳುವಳಿಕೆ. ಆಳುವ ಸರ್ಕಾರಗಳು ಈ ವಿಚಾರದಲ್ಲಿ ಜನಸಾಮಾನ್ಯರನ್ನು ದಿಕ್ಕು ತಪ್ಪಿಸುತ್ತಿವೆ. ಕಾವೇರಿ ನ್ಯಾಯಾಧೀಕರಣದ ತೀರ್ಪಿನ 27ನೇ ಅಧ್ಯಾಯದಲ್ಲಿ ಸಂಕಷ್ಟ ಸೂತ್ರದ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿದೆ. ಅದೇ ರೀತಿ 28ನೇ ಅಧ್ಯಾಯದಲ್ಲಿ ಸಂಕಷ್ಟ ಸಂದರ್ಭ ನೀರು ಹಂಚಿಕೆ ಬಗ್ಗೆಯೂ ತಿಳಿಸಿದೆ ಎಂದರು.

ಕಾವೇರಿ ಕೊಳ್ಳದಲ್ಲಿ ಪ್ರಸ್ತುತ ಮಳೆ ಕೊರತೆಯಿಂದ ಶೇ.55 ರಷ್ಟು ನೀರು ಕೊರತೆ ಇದೆ ಎಂದು ಅಂಕಿ ಅಂಶ ತಿಳಿಸಿದ್ದು, ಕೇರಳ ಹೊರತುಪಡಿಸಿ ಕರ್ನಾಟಕ, ತಮಿಳುನಾಡು, ಪುದುಚೇರಿ ರಾಜ್ಯವು ನೀರಿನ ಕುಂಠಿತ ಪ್ರಮಾಣವನ್ನು ಹಂಚಿಕೊಳ್ಳಬೇಕು. ಹಾಗೆ ನೋಡಿದರೆ ತಮಿಳುನಾಡಿಗೆ ಶೇ.27.50 ಕಡಿಮೆ ನೀರು ಹರಿಸಬೇಕು. ಆದರೆ ಸರ್ಕಾರ ಇದರ ಅರಿವು ಇಲ್ಲದಂತೆ ನಿರಂತರ ನೀರು ಹರಿಸುತ್ತಿದೆ ಎಂದರು.

ನ್ಯಾಯಾಧೀಕರಣ ತೀರ್ಪಿನಲ್ಲಿರುವ ಸಂಕಷ್ಟದ ಸೂತ್ರ ಅಂಶವನ್ನು ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮನವರಿಕೆ ಮಾಡಿಕೊಡಬೇಕಾಗಿತ್ತು. ಆದರೆ ಸರ್ಕಾರ ಇದರಲ್ಲಿ ವಿಫಲವಾಗಿದೆ. ತಮಿಳುನಾಡಿಗೆ 172.25 ಟಿಎಂಸಿ ನೀರು ಹರಿಸಬೇಕು. ಈ ವರ್ಷ ಮಳೆ ಕೊರತೆ ಹಿನ್ನೆಲೆಯಲ್ಲಿ ಸಂಕಷ್ಟ ಕಾಲದಲ್ಲಿನ ನೀರಿನ ಕುಂಠಿತ ಪ್ರಮಾಣ ಕಳೆಯಬೇಕಾಗಿತ್ತು. ಆದರೆ ಸರ್ಕಾರ ಹೆಚ್ಚಿನ ಪ್ರಮಾಣದ ನೀರನ್ನ ಹರಿಸುತ್ತಿದೆ. ಇದರಿಂದ ರಾಜ್ಯದಲ್ಲಿ ಸಂಕಷ್ಟ ಹೆಚ್ಚಿದೆ ಎಂದರು.

ಈಗಲೂ ಸಹ ಕಾಲ ಮಿಂಚಿಲ್ಲ. ನ್ಯಾಯಾಧೀಕರಣದ ಅಂತಿಮ ತೀರ್ಪಿನಲ್ಲಿರುವ ಸಂಕಷ್ಟ ಸೂತ್ರ ಪ್ರಸ್ತಾಪ ಮಾಡಿ ಪ್ರಾಧಿಕಾರ ಮತ್ತು ನಿಯಂತ್ರಣ ಸಮಿತಿಗೆ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು. ಪ್ರತಿಭಟನೆಯಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ಮುಖಂಡರಾದ ಬೇಕರಿ ರಮೇಶ್, ಚಂದ್ರ ಶೇಖರ್, ಕೃಷ್ಣ ಪ್ರಕಾಶ್ ಇತರರು ಭಾಗವಹಿಸಿದ್ದರು.

ಮೂರನೇ ಪುಟದಿಂದ

ನಾಳೆ ವೈಭವದ ಜಂಬೂಸವಾರಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಗಣ್ಯರು ಉಪಸ್ಥಿತರಿದ್ದು ಪಂಜಿನ ಕವಾಯತು ವೀಕ್ಷಿಸುವರು. ಆ ಮೂಲಕ 10 ದಿನಗಳ ನವರಾತ್ರಿ ಉತ್ಸವ ಅಂತ್ಯಗೊಳ್ಳಲಿದೆ. ಸಹಸ್ರಾರು ಮಂದಿ ಮಂಗಳವಾರ ನಡೆಯಲಿರುವ ವಿಜಯ ದಶಮಿ ಮೆರವಣಿಗೆ ನೋಡಿ ಕಣ್ತುಂಬಿಕೊಳ್ಳುವರಲ್ಲದೆ, ಅಭಿಮನ್ಯು ಹೊತ್ತು ತರುವ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ತಾಯಿ ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿ ದರ್ಶನ ಪಡೆದು ಭಕ್ತಿಪರವಶರಾಗುವರು. ವಿಜಯ ದಶಮಿ ಮೆರವಣಿಗೆ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ಸಕಲ ಸಿದ್ಧತೆ ಮಾಡಲಾಗಿದ್ದು, ಅತೀ ಗಣ್ಯರು, ಗಣ್ಯರು, ಆಹ್ವಾನಿತರು, ಪಾಸ್, ಟಿಕೆಟ್, ಗೋಲ್ಡ್ ಕಾರ್ಡ್ ಹೊಂದಿದ ಸಾರ್ವಜನಿಕರಿಗೆ ಪ್ರತ್ಯೇಕ ಎನ್‌ಕ್ಲೋಸರ್‌ಗಳಲ್ಲಿ ಆಸನ ವ್ಯವಸ್ಥೆ ಮಾಡಲಾಗಿದೆ.

ಜಂಬೂಸವಾರಿ ಸಾಗುವ ರಾಜಮಾರ್ಗದ ಇಕ್ಕೆಲಗಳಲ್ಲಿ ಮರದ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಸಾರ್ವಜನಿಕರಿಗೆ ಮೆರವಣಿಗೆ ನೋಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಅ.15ರಂದು ನಾದಬ್ರಹ್ಮ ಡಾ.ಹಂಸಲೇಖ ಅವರು ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಗೆ ಅಗ್ರಪೂಜೆ ಸಲ್ಲಿಸುವ ಮೂಲಕ 2023ರ ದಸರಾ ಮಹೋತ್ಸವವನ್ನು ಉದ್ಘಾಟಿಸಿದ್ದರು. ನವರಾತ್ರಿ ಉತ್ಸವದಲ್ಲಿ ಮೈಸೂರು ವಿವಿಧ ಚಟುವಟಿಕೆ, ವೈವಿಧ್ಯಮಯ ಸಂಗೀತ, ನೃತ್ಯ, ಗಾಯನ, ಕಲೆ, ಸಂಸ್ಕೃತಿ, ಪರಂಪರೆ ಬಿಂಬಿಸುವ ಕಾರ್ಯಕ್ರಮಗಳು ಜರುಗಿದವು. ಚಲನಚಿತ್ರೋತ್ಸವ, ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಕುಸ್ತಿ ಪಂದ್ಯಾವಳಿ, ವಸ್ತುಪ್ರದರ್ಶನ, ಯೋಗ ವಿದ್ಯುತ್ ದೀಪಾಲಂಕಾರ, ರೈತ, ಮಹಿಳಾ ದಸರಾ, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಲಕ್ಷಾಂತರ ಮಂದಿಗೆ ಮುದ ನೀಡಿದವು. ದಸರಾ ಕ್ರೀಡಾಕೂಟ, ಪಾರಂಪರಿಕ ನಡಿಗೆ, ಹಾಲು ಕರೆಯುವ ಸ್ಪರ್ಧೆ, ಮುದ್ದು ಪ್ರಾಣಿಗಳ ಪ್ರದರ್ಶನ ಸೇರಿದಂತೆ ಹಲವು ಕಾರ್ಯಕ್ರಮಗಳು ದೇಶ–ವಿದೇಶಗಳ ಪ್ರವಾಸಿಗರನ್ನು ಮೈಸೂರಿನತ್ತ ಸೆಳೆದಿವೆ. ಈಗಾಗಲೇ ಸಹಸ್ರಾರು ಮಂದಿ ಪ್ರವಾಸಿಗರು ಪಾರಂಪರಿಕ ನಗರಿಗೆ ಆಗಮಿಸಿದ್ದು, ಜಂಬೂ ಸವಾರಿ ವೀಕ್ಷಿಸಲು ಹೋಟೆಲ್, ಲಾಡ್ಜ್, ರೆಸಾರ್ಟ್, ಹೋಂ ಸ್ಟೇಗಳಲ್ಲಿ ವಾಸ್ತವ್ಯ ಹೂಡಿದ್ದು, ಪ್ರವಾಸಿ ತಾಣಗಳಿಗೆ ಭೇಟಿ ನೀಡುತ್ತಿದ್ದಾರೆ.

ಲಕ್ಷಾಂತರ ಮಂದಿ ಜಂಬೂ ಸವಾರಿ ನೋಡಲು ಆಗಮಿಸುವುದರಿಂದ ಈ ಬಾರಿ ಅತೀ ಹೆಚ್ಚು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಇನ್ನಿಲ್ಲದ ಭದ್ರತೆ ಒದಗಿಸಲಾಗಿದೆ. ಹೊರ ಜಿಲ್ಲೆಗಳಿಂದ ಎಸ್ಪಿ, ಎಎಸ್ಪಿ, ಡಿವೈಎಸ್ಪಿ, ಇನ್‌ಸ್ಪೆಕ್ಟರ್ ಸೇರಿದಂತೆ 8 ಸಾವಿರ ಮಂದಿಯನ್ನು ಬಳಸಿಕೊಂಡು ಕಟ್ಟೆಚ್ಚರ ವಹಿಸಲಾಗಿದೆ.

ಪೊಲೀಸರ ಭಾರೀ ಭದ್ರತೆ


ಕಲ್ಪಿಸುವ ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳ ಚೆಕ್‌ಪೋಸ್ಟ್‌ಗಳಲ್ಲಿ ಪ್ರವಾಸಿಗರ ಮೇಲೆ ನಿಗಾ ಇರಿಸಲಾಗಿದೆಯಲ್ಲದೆ, ಲಾಡ್ಜ್, ಹೋಟೆಲ್, ರೆಸಾರ್ಟ್‌ಗಳಲ್ಲಿ ವಾಸ್ತವ್ಯ ಹೂಡಿರುವವರ ಮೇಲೂ ನಿಗಾ ಇರಿಸಿ ಸಂಶಯಾಸ್ಪದ ವ್ಯಕ್ತಿಗಳ ಪೂರ್ವಾಪರ ವಿಚಾರಣೆ ಮಾಡಿ ಮಾಹಿತಿ ಪಡೆಯಲಾಗುತ್ತಿದೆ ಎಂದು ತಿಳಿಸಿದರು.

ಅಂಬಾರಿ ಹೊರುವ ಆನೆ ಸುತ್ತ ಅನಗತ್ಯವಾಗಿ ಓಡಾಡುವುದನ್ನು ತಡೆದು ದರ್ಬಾರ್ ಸಮವಸ್ತ್ರಧಾರಿಗಳು ಮಾತ್ರ ಸುತ್ತುವರಿದು, ಕಡಿಮೆ ಸಂಖ್ಯೆಯ ಪೊಲೀಸರನ್ನು ಸುರಕ್ಷತೆಗಾಗಿ ನಿಯೋಜಿಸಿ ಯಾವುದೇ ಗೊಂದಲವಾಗದಂತೆ ಈ ಬಾರಿ ಕ್ರಮ ವಹಿಸುತ್ತೇವೆ ಎಂದರು. ಸ್ಟೇಟ್ ಇಂಟೆಲಿಜೆನ್ಸ್ ಘಟಕ, ಆಂಟಿಸೆಬೆಟಿಕ್ ಚೆಕ್ ಟೀಂ, ಬಾಂಬ್ ಪತ್ತೆ ಮತ್ತು ನಿಗ್ರಹ ದಳ, ಶ್ವಾನ ದಳದ ಹೆಚ್ಚುವರಿ ಸಿಬ್ಬಂದಿ ಗಳನ್ನು ಕರೆಸಿಕೊಳ್ಳಲಾಗಿದ್ದು, ಸ್ಥಳ ತಪಾಸಣೆ, ಅಗತ್ಯ ಮಾಹಿತಿ ಸಂಗ್ರಹಿಸಲಾಗುತ್ತಿದೆ. ವಿಜಯ ದಶಮಿ ಮೆರವಣಿಗೆ, ಪಂಜಿನ ಕವಾಯತು ಪ್ರದರ್ಶನದಲ್ಲಿ ನೂಕು–ನುಗ್ಗಲು ಆಗದಂತೆ ರಾಜಮಾರ್ಗದ ಎರಡೂ ಬದಿಗಳಲ್ಲಿ ಬ್ಯಾರಿಕೇಡ್ ಅಳವಡಿಸಿ ಜಂಬೂ ಸವಾರಿ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ. ಸಿವಿಲ್ ಪೊಲೀಸ್, ಕೆಎಸ್‌ಆರ್‌ಪಿ, ಸಿಎಆರ್, ಡಿಎಆರ್, ಕೆಎಆರ್‌ಪಿ, ಮೌಂಟೆಡ್ ಪೊಲೀಸ್ ಸೇರಿದಂತೆ ಈ ಬಾರಿ ಜಂಬೂ ಸವಾರಿ ಮೆರವಣಿಗೆಗೆ ಭಾರೀ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿದೆ ಎಂದು ಅವರು ತಿಳಿಸಿದರು.

ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ

ವೀಕ್ಷಣೆ ಮಾಡಲಿದ್ದಾರೆ. ಅ.24 ರಂದು ಬೆಳಗ್ಗೆ 8.30ಕ್ಕೆ ಶ್ರೀ ಕ್ಷೇತ್ರ ಸುತ್ತೂರು ಮಠಕ್ಕೆ ಭೇಟಿ ನೀಡಿ, ಮಧ್ಯಾಹ್ನ 1.46 ರಿಂದ 2.08ರ ನಡುವೆ ನಂದಿಧ್ವಜ ಪೂಜೆ ನೆರವೇರಿಸಲಿದ್ದಾರೆ. ಸಂಜೆ 4.40ಕ್ಕೆ ವಿಜಯದಶಮಿ ಮೆರವಣಿಗೆಯನ್ನು ಉದ್ಘಾಟಿಸಿ, ಸಂಜೆ 7.30ಕ್ಕೆ ಬನ್ನಿಮಂಟಪ ಕವಾಯತು ಮೈದಾನದಲ್ಲಿ ನಡೆಯುವ ಟಾರ್ಚ್ ಲೈಟ್ ಪೆರೇಡ್ (ಪಂಜಿನ ಕವಾಯತು)ನಲ್ಲಿ ಭಾಗವಹಿಸಲಿದ್ದಾರೆ. ಅ.25ರಂದು ಮಧ್ಯಾಹ್ನ 12.30ಕ್ಕೆ ರಾಮಕೃಷ್ಣನಗರದಲ್ಲಿ ಲಿಂಗಾಂಬುದಿ ಸಸ್ಯ ಶಾಸ್ತ್ರೀಯ ತೋಟ ಉದ್ಘಾಟಿಸುವ ಮುಖ್ಯಮಂತ್ರಿಗಳು, 1.30ಕ್ಕೆ ಕರ್ಜನ್ ಪಾರ್ಕ್‌ನಲ್ಲಿ ತೋಟಗಾರಿಕೆ ಪಿತಾಮಹ ಡಾ.ಎಂ.ಹೆಚ್. ಮರೀಗೌಡರ ಪ್ರತಿಮೆ ಅನಾವರಣಗೊಳಿಸಿದ ಬಳಿಕ ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಸಂಜೆ 4 ಗಂಟೆಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ತೆರಳಲಿದ್ದಾರೆ.

ಬಾನಂಗಳದಲ್ಲಿ ಲೋಹದ ಹಕ್ಕಿಗಳ ಚಿತ್ತಾರ–ಚಮತ್ಕಾರ



ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡದ ಫ್ಲೈಟ್ ಲೆಫ್ಟಿನೆಂಟ್ ಕನ್ವಾಲ್ ಸಂಧು ಅವರೊಂದಿಗೆ ಪ್ರೇಕ್ಷಕರು ಅಭಿಮಾನದಿಂದ ಫೋಟೋ ತೆಗೆಸಿಕೊಂಡ ಕ್ಷಣ.



ಪ್ರದರ್ಶನ ವೀಕ್ಷಿಸಲು ಆಗಸದತ್ತ ಮುಖ ಮಾಡಿ ಕುಳಿತಿಸುವ ಪ್ರೇಕ್ಷಕರು. ಮೈದಾನದ ಬಹುತೇಕ ಆಸನಗಳು ಭರ್ತಿಯಾಗಿದ್ದವು.

ಕೌತುಕದಿಂದ ಅತ್ತಿತ್ತ ಕಣ್ಣಾಡಿಸುತ್ತಿದ್ದಂತೆ ಭಾರೀ ಸದ್ದಿನ ಮೊರೆತದೊಂದಿಗೆ ಮತ್ತೆ ಪ್ರೇತ್ಯಕ್ಷವಾದ 4 ವಿಮಾನಗಳು, ತಲಾ ಎರಡರಂತೆ ಎದುರು–ಬದುರು ರಭಸದಿಂದ ನುಗ್ಗುವ ಮೂಲಕ ದಿಗಿಲು ಮೂಡಿಸಿದವು.

ಹೀಗೆ ಕ್ಷಣ ಮಾತ್ರದಲ್ಲಿ ಬಾನಿನಲ್ಲಿ ಬಿಳಿ ಹೊಗೆಯ ರಂಗೋಲಿ ಬಿಡಿಸಿ ಮರೆಯಾಗುತ್ತಿದ್ದಂತೆ ಮತ್ತೆ ಅವುಗಳಲ್ಲೇ 5 ವಿಮಾನಗಳು ಸಾಲಾಗಿ ಸಾಗಿ ಪ್ರೇಕ್ಷಕರಲ್ಲಿ ಸಂಭ್ರಮ ಉಂಟು ಮಾಡಿದವು. ಎತ್ತ ಹೋದ ವೆಂದು ನೋಡುತ್ತಿದ್ದಂತೆ ಮತ್ತೆ 3 ವಿಮಾನಗಳು ಉಲ್ಟಾ–ಪಲ್ಟಾ ಸಾಗುವ ಮೂಲಕ ರೋಚಕ ದೃಶ್ಯಾವಳಿ ಮೂಡಿಸಿದವು.

ಪೈಲಟ್‌ಗಳು ಅತ್ಯಂತ ಶಿಸ್ತು ಮತ್ತು ಸಂಯಮದಿಂದ ಪ್ರದರ್ಶನ ನೀಡಿ ನಾನಾ ಚಿತ್ತಾರಗಳನ್ನು ಆಗಸದಲ್ಲಿ ಮೂಡಿಸಿದರು. ವಿಜಯದ ಸಂಕೇತ ಬರೆದು ಪುಳಕ ವಿಟ್ಟ ವಿಮಾನಗಳು ನೋಡಗರ ಎದೆಗೆ ಲಗ್ಗೆ ಇಟ್ಟವು. ತೆಲಕೆಳಗಾಗಿ ತಿರುಗುವ ಮೂಲಕ ಹಾರಾಟ ನಡೆಸಿ, ಉಸಿರು ಬಿಗಿ ಇಡಿಯುವಂತೆ ಮಾಡಿದವು. ಬ್ಯಾರೆಲ್ ರೋಲ್ ವಿಧದಲ್ಲಿ ಸುರಳಿಯಾಗಿ ಸುತ್ತಿದ್ದವು. ಅಲ್ಲದೆ, ಲೂಪ್ ಮ್ಯಾನ್ಯೂವರ್, ಆಲ್ಫಾ ಕ್ರಾಸ್ ರಚನೆಯ ಹಾರಾಟಗಳು ಪುಳಕವಿಟ್ಟವು.

ಮೂಡಿದ ಹೃದಯದ ಚಿತ್ತಾರ: ಅಂತಿಮವಾಗಿ ಮೂರು ವಿಮಾನಗಳು ಹೃದಯದ ಸಂಕೇತವನ್ನು ಆಗಸದಲ್ಲಿ ಬರೆದು ಪ್ರೇಕ್ಷಕರಿಗೆ ಪ್ರೀತಿಯ ಚುಂಬನ ನೀಡಿದವು. ಎರಡು ವಿಮಾನಗಳು ಎದುರು–ಬದರು ಹಾರಾಟ ನಡೆಸಿ, ತನ್ನ ಬಿಳಿ ಹೊಗೆಯಲ್ಲಿ ಹೃದಯದ ಸಂಕೇತದ ಚಿತ್ತಾರ ಮೂಡಿಸಿದರೆ, ಮತ್ತೊಂದು ವಿಮಾನ ಬಾಣದ ಆಕಾರದಲ್ಲಿ ಹೃದಯದ ಚಿತ್ತಾರದಲ್ಲಿ ಸಾಗಿ ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮಾಡಿತು.

ಇನ್ನಷ್ಟು ಸಮಯ ಇರಬೇಕಿತ್ತು: ನಾಲ್ಕು ವರ್ಷಗಳ ನಂತರ ದಸರಾದಲ್ಲಿ ನಡೆದ ಈ ವೈಮಾನಿಕ ಪ್ರದರ್ಶನವು ಪ್ರೇಕ್ಷಕರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು. ಬನ್ನಿಮಂಟಪದ ಕವಾಯತು ಮೈದಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರು ಈ ಪ್ರದರ್ಶನ ಕಂಡು ಭಾರೀ ಸಂಭ್ರಮಿಸಿದರು. ಈ ಪೈಕಿ ಹಲವರು ಇನ್ನಷ್ಟು ಸಮಯ ಪ್ರದರ್ಶನ ಇದ್ದಿದ್ದರೆ ಮತ್ತಷ್ಟು ಅದ್ಭುತವಾಗಿರುತ್ತಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರೆ, ಹಲವರು ಈ 20 ನಿಮಿಷಗಳ ಪ್ರದರ್ಶನಕ್ಕೇ ಭಾರೀ ಸಂಭ್ರಮ ವ್ಯಕ್ತಪಡಿಸಿದರು.

ಕಮಾಂಡಿಂಗ್ ಆಫೀಸರ್ ಮತ್ತು ಗ್ರೂಪ್ ಕ್ಯಾಪ್ಟನ್ ಜಿ.ಎಸ್.ಧಿಲ್ಲೋನ್ ಪ್ರದರ್ಶನದ ನೇತೃತ್ವ ವಹಿಸಿದ್ದರು. ವಿಂಗ್ ಕಮಾಂಡರ್‌ಗಳಾದ ಸಿದೇಶ್ ಕಾರ್ತಿಕ್, ಅಲೋಕ್, ಭಾರದ್ವಾಜ್, ಹೂಡಾ, ಹಿರಿಯ ಲೆಫ್ಟಿನೆಂಟ್‌ಗಳಾದ ಚಾಂದೇಲ್, ವಶಿಷ್ಟ್, ಹಿಮಾಂಶು, ಅಲೆನ್ ಅವರು ಪ್ರದರ್ಶನವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ತಂಡದ ವಿಂಗ್ ಕಮಾಂಡರ್ ಅರ್ಜುನ್ ಕೆ.ಪಟೇಲ್ ನೇತೃತ್ವದಲ್ಲಿ ಪ್ರದರ್ಶನದ ಸರಕ್ಷತೆ ಬಗ್ಗೆ ನಿಗಾ ವಹಿಸುವ ಪ್ರಕ್ರಿಯೆ ಮೈದಾನದಲ್ಲಿ ನಡೆಯಿತು. ಆ ಮೂಲಕ ಪ್ರದರ್ಶನದಲ್ಲಿ ಹಾರಾಟ ನಡೆಸಿದ ಎಲ್ಲಾ ಇತರ ಪೈಲಟ್‌ಗಳೊಂದಿಗೆ ರೇಡಿಯೋ ಸಂವಹನ ಸಾಧನಗಳ ಮೂಲಕ ನಿರಂತರ ಸಂವಹನ ಸಾಧಿಸಿ ಪ್ರದರ್ಶನದ ಯಶಸ್ಸು ಕಾಣುವಂತೆ ಮಾಡಲಾಯಿತು. ತಂಡದ ಕ್ಯಾಮರಾ ಸಿಬ್ಬಂದಿ ಗೋಪಾಲ್ ಸುನಿಲ್, ಗೋಪಾಲ್ ಗೌರವ್ ಮತ್ತು ಕೊಪ್ಪಲ್ ವಿವೇಕ್ ಇಡೀ ಪ್ರದರ್ಶನ ರೇಕಾರ್ಡ್ ಮಾಡಿ, ವಿಮಾನ ಹಾರಾಟ ನಡೆಸುತ್ತಿದ್ದ ಪೈಲಟ್‌ಗಳಿಗೆ ಸಂದೇಶ ರವಾನಿಸಿ ಆಕಾಸದಲ್ಲಿ ಸಾರಾಗವಾಗಿ ಚಲಿಸಲು ಸಹಕಾರ ನೀಡಿದರು.

ತಂಡದ ಫ್ಲೈಟ್ ಲೆಫ್ಟಿನೆಂಟ್ ಕನ್ವಾಲ್ ಸಂಧು ಅವರು ಇಡೀ ಪ್ರದರ್ಶನ ನಿರೂಪಿಸಿ, ವಿಮಾನಗಳ ಚಲನ–ವಲನ, ಅವುಗಳ ನಡೆಸುವ ಹಾರಾಟದ ವಿಧಗಳ ಬಗ್ಗೆ ಪ್ರೇಕ್ಷಕರಿಗೆ ಮಾಹಿತಿ ಒದಗಿಸಿದರು.

ಸೂಲೂರು ವಾಯುನೆಲೆಯಿಂದ ಹಾರಿ ಬಂದವು: ಎರಡು ವಿಧದಲ್ಲಿ ಪ್ರದರ್ಶನ ನಡೆಯಿತು. ಮೊದಲ ವಿಧದಲ್ಲಿ ಎಲ್ಲಾ 9 ವಿಮಾನಗಳು ಅತ್ಯಂತ ಸಮೀಪದಲ್ಲಿ ಒಟ್ಟಿಗೆ ಹಾರಾಟ ನಡೆಸಿ, ವಿವಿಧ ರಚನೆಗಳನ್ನು ಮೂಡಿಸಿದವು. ಮತ್ತೊಂದು ವಿಧದಲ್ಲಿ ಉಲ್ಟಾ–ಪಲ್ಟಾ, ತಿರುಗು–ಮುರುಗು ಹಾರಾಟ ಸೇರಿದಂತೆ ವಿವಿಧ ರೀತಿಯಲ್ಲಿ ಚಲಿಸಿದವು. ಈ ಪೂರ್ವಭ್ಯಾಸದ ವೈಮಾನಿಕ ಪ್ರದರ್ಶನವು ಪ್ರೇಕ್ಷಕರು ರೋಚಕ ಕ್ಷಣಗಳಲ್ಲಿ ತೇಲುವಂತೆ ಮಾಡಿತು. ತಂಡದ ಪ್ರತಿಯೊಬ್ಬ ಪೈಲಟ್ 1 ಸಾವಿರ ಗಂಟೆಗಳ ಹಾರಾಟದ ಅನುಭವ ಹೊಂದಿರುವ ಅರ್ಹರಾಗಿದ್ದು, ಈ ವಿಮಾನಗಳು ತಮಿಳುನಾಡಿನ ಕೋಯಮತ್ತೂರು ಬಳಿಯ ಸೂಲೂರು ವಾಯುನೆಲೆಯಿಂದ ಹಾರಿ ಬಂದು ಪ್ರದರ್ಶನ ನೀಡಿ, ಮರಳಿ ಹೋದವು.

ಕಿವೀಸ್ ಮಣಿಸಿದ ಇಂಡಿಯಾ

6 ಬೌಂಡರಿ ಒಳಗೊಂಡ 33 ರನ್ ಗಳಿಸಿದ್ದ ಅಯ್ಯರ್ ವಿಕೆಟ್ ಒಪ್ಪಿಸಿದರು. ಬಳಿಕ ಒಂದಾದ ಕನ್ನಡಿಗ ಕೆ.ಎಲ್.ರಾಹುಲ್ ಹಾಗೂ ವಿರಾಟ್ ಕೊಹ್ಲಿ 54 ರನ್‌ಗಳ ಜೊತೆಯಾಟವಾಡುವ ಮೂಲಕ ಮತ್ತೆ ಪಂದ್ಯದ ಮೇಲೆ ಹಿಡಿತ ಸಾಧಿಸಿದರು. ಈ ವೇಳೆ ಕೊಹ್ಲಿ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 27 ರನ್ ಗಳಿಸಿದ್ದ ರಾಹುಲ್ ಔಟಾದರು. ಇದರ ಬೆನ್ನಲ್ಲೇ ಸೂರ್ಯಕುಮಾರ್ ಯಾದವ್ 2 ರನ್ ಸಿಡಿಸಿ ರನೌಟ್‌ಗೆ ಬಲಿಯಾದರು. ಈ ಸಂದರ್ಭ ಭಾರತ 191 ರನ್‌ಗಳಿಗೆ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಬಳಿಕ ಕ್ರೀಸ್‌ಗೆ ಆಗಮಿಸಿದ ರವೀಂದ್ರ ಜಡೇಜಾ ಎಚ್ಚರಿಕೆಯಿಂದ ಬ್ಯಾಟ್ ಬೀಸಿದರೇ, ದಿಟ್ಟ ಹೋರಾಟ ನೀಡಿದ ಕೊಹ್ಲಿ ರನ್ ಕುಸಿಯದಂತೆ ನೋಡಿಕೊಂಡರು. ಆದರೆ 104 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸರ್ ಒಳಗೊಂಡ 95 ರನ್‌ಗೆ ಔಟಾಗುವ ಮೂಲಕ ಕೊನೆವರೆಗೂ ಶತಕದ ಕುತೂಹಲ ಕೆರಳಿಸಿದ್ದ ಕೊಹ್ಲಿ ಶತಕ ವಂಚಿತರಾಗಿ ನಿರ್ಗಮಿಸಿದರು. ಇದು ಕಿಂಗ್ ಕೊಹ್ಲಿ ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿತು. ಅಂತಿಮವಾಗಿ ಜಡೇಜಾ 3 ಬೌಂಡರಿ, 1 ಸಿಕ್ಸರ್ ಒಳಗೊಂಡ 39 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ನ್ಯೂಜಿಲೆಂಡ್ ಪರ ಲಾಕಿ ಫರ್ಗುಸನ್ 2, ಟ್ರೆಂಟ್ ಬೌಲ್ಟ್, ಮ್ಯಾಟ್ ಹೆನ್ರಿ, ಮಿಚೆಲ್ ಸ್ಯಾಂಟ್ನರ್ ತಲಾ ಒಂದು ವಿಕೆಟ್ ಕಿತ್ತರು. ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 19 ರನ್ ಆಗುವಷ್ಟರಲ್ಲೇ ಶೂನ್ಯಕ್ಕೆ ಡೆವೊನ್ ಕಾನ್ವೇ ವಿಕೆಟ್ ಒಪ್ಪಿಸಿದರೇ, ವಿಲ್ ಯಂಗ್ 17 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ರಚಿನ್ ರವೀಂದ್ರ ಹಾಗೂ ಡೇರಿಲ್ ಮಿಚೆಲ್ 159 ರನ್‌ಗಳ ಜೊತೆಯಾಟವಾಡಿ ಚೇತರಿಕೆ ನೀಡಿದರು. ಆದರೆ ರಚಿನ್ ರವೀಂದ್ರ 75 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ಡೇರಿಲ್ ಮಿಚೆಲ್ ಶತಕ ಸಿಡಿಸಿ ಮಿಂಚಿದರು.

ಮೈಸೂರಿಗೆ ಹರಿದು ಬಂದ ಜನಸಾಗರ

ಜನರಿಂದ ತುಂಬಿ ತುಳುಕುತ್ತಿತ್ತು ಇದರಿಂದ ಮೈಸೂರಿನ ಪ್ರವಾಸೋದ್ಯಮ ಕಳೆಗಟ್ಟಿದ್ದು, ಹೋಟೆಲ್, ವಸತಿ ಗೃಹಗಳು ತುಂಬಿ ತುಳುಕಿದ್ದರೆ, ಬೀದಿ ಬದಿಯ ವ್ಯಾಪಾರ ವಹಿವಾಟು ಭರ್ಜರಿಯಾಗಿ ನಡೆಯಿತು.

ದಸರಾ ಮಹೋತ್ಸವದ ಬಹುತೇಕ ಕಾರ್ಯಕ್ರಮಗಳು ಅಂತ್ಯಗೊಂಡಿದ್ದು, ಫಲಪುಷ್ಪ ಪ್ರದರ್ಶನ ಮತ್ತು ಸಂಗೀತ ನಿರ್ದೇಶಕ ಹಂಸಲೇಖ ನೇತೃತ್ವದ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಣೆಗಾಗಿ ಅರಮನೆಯತ್ತ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು.

ಫ್ಲವರ್ ಶೋನಲ್ಲೂ ಜನ ದಂಡು: ಫಲಪುಷ್ಪ ಪ್ರದರ್ಶನ ನಡೆಯುತ್ತಿರುವ ಕುಪ್ಪಣ್ಣ ಉದ್ಯಾನಕ್ಕೂ ಜನ ಸಮೂಹದ ಹೊಳೆ ಹರಿದು ಬಂದಿತ್ತು. ಗಾಜಿನ ಮನೆಯಲ್ಲಿ ಚಂದ್ರಯಾನ–3 ಮಾದರಿ ವೀಕ್ಷಣೆಗೆ ಜನರು ಮುಗಿಬಿದ್ದಿರು. ಸೌತೆಕಾಯಿ ಗುಡಿಸಲು ಮನೆ, ಗ್ಯಾರಂಟಿ ಯೋಜನೆ ಮಾದರಿಗಳು, ಚಾಮುಂಡೇಶ್ವರಿ ವಿಗ್ರಹ, ಸಿಂಹಾಸನ, ದಸರಾ ಖಾಸಗಿ ದರ್ಬಾರ್ ಇನ್ನಿತರ ಹೂವುಗಳಿಂದ ಮಾಡಿರುವ ಪ್ರತಿಕೃತಿ ನೋಡಲು ಜನರು ತುದಿಗಾಲ ಮೇಲೆ ನಿಂತಿದ್ದು, ತಮ್ಮ ನೆಚ್ಚಿನ ಆಕೃತಿ ಮುಂದೆ ನಿಂತು ಕುಟುಂಬ ಸದಸ್ಯರು, ಸ್ನೇಹಿತರೊಂದಿಗೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಟ್ರಾಫಿಕ್ ಜಾಮ್: ಜನದಟ್ಟಣೆಯಿಂದ ನಗರದ ಪ್ರಮುಖ ರಸ್ತೆ, ವೃತ್ತದಲ್ಲಿ ವಾಹನ ಸಮಸ್ಯೆ ಉಂಟಾಯಿತು. ಅರಮನೆ ಸುತ್ತಲಿನ ರಸ್ತೆಗಳು, ಸಯ್ಯಾಜಿರಾವ್ ರಸ್ತೆ, ಜೆಎಲ್‌ಬಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಅಶೋಕ ರಸ್ತೆ, ಎನ್‌ಬಿ ರಸ್ತೆ ಸೇರಿದಂತೆ ಇನ್ನಿತರ ರಸ್ತೆಗಳಲ್ಲಿ ವಾಹನ ಓಡಾಟ ಹೆಚ್ಚಿತ್ತು. ರಸ್ತೆಗಳಲ್ಲಿ ವಾಹನ ಮೆರವಣಿಗೆಯೇ ನಡೆ ದಂತೆ ಭಾಸವಾಯಿತು. ನಿಧಾನಗತಿಯಲ್ಲಿ ವಾಹನಗಳು ಮುಂದಕ್ಕೆ ಸಾಗುತ್ತಿದ್ದವು. ಒಂದು ಕಡೆಯಿಂದ ಇನ್ನೊಂದು ಕಡೆ ವಾಹನಗಳು ಹೋಗಲು ತೊಂದರೆ ಉಂಟಾಯಿತು.

ಪ್ರವಾಸಿ ತಾಣಗಳಲ್ಲೂ ಪ್ರವಾಸಿಗರ ದಂಡು ಕಂಡು ಬಂತು. ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ ಸೇರಿದಂತೆ ಇನ್ನಿತರ ಪ್ರೇಕ್ಷಣೀಯ ಸ್ಥಳಗಳಿಗೆ ವೀಕ್ಷಣೆಗೆ ಜನರು ಮುಗಿಬಿದ್ದಿದ್ದರು

ವಸತಿ ಗೃಹಗಳು ಭರ್ತಿ: ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಮೈಸೂರಲ್ಲಿ ಹೋಟೆಲ್, ಅತಿಥಿಗೃಹಗಳಲ್ಲಿರುವ ಕೊಠಡಿಗಳೆಲ್ಲ ಭರ್ತಿಯಾಗಿವೆ. ನಗರದಲ್ಲಿರುವ 425 ಹೋಟೆಲ್‌ಗಳಿದ್ದು, ಅಲ್ಲದೆ 10,500 ರೂಮ್‌ವುಳ್ಳ ವಸತಿಗಳು ಶನಿವಾರದಿಂದ ಶೇ.100ರಷ್ಟು ಭರ್ತಿಯಾಗಿವೆ. ನಗರ ಹೊರವಲಯದ ರಿಂಗ್ ರಸ್ತೆಯ ಅಕ್ಕ ಪಕ್ಕದ, ವಿವಿಧ ಬಡಾವಣೆಗಳಲ್ಲಿರುವ ಕೆಲವು ಸರ್ವೀಸ್ ಅಪಾರ್ಟ್‌ಮೆಂಟ್ ಹೋಮ್ ರೂಮ್‌ಗಳು ಗ್ರಾಹಕರಿಂದ ಬುಕ್ಕಿಂಗ್ ಆಗಿವೆ. ಸಾಲು ರಜೆ ಹಿನ್ನೆಲೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಆಗಮಿಸಿದ್ದಾರೆ.

ಮೈಸೂರಿನಲ್ಲಿ ದೇಶ, ವಿದೇಶದ ವಿಶಿಷ್ಟ ರೀತಿಯ ಶ್ವಾನಗಳ ಪ್ರದರ್ಶನ

● 47 ವಿವಿಧ ತಳಿಯ 700 ಶ್ವಾನಗಳು ಭಾಗಿ ● ಗಮನ ಸೆಳೆದ ಅಮೇರಿಕನ್ ಬುಲ್ಲಿ

● ದೇಶಿ ತಳಿಯ ಮುಧೋಳ, ರಾಜ್ಯಪಾಳ್ಯಂ ಆಕರ್ಷಣೆ ● ಸಣ್ಣ ಗಾತ್ರದ ಚಿವುವುವಾ ಹೈಲೈಟ್





ಮೈಸೂರು, ಅ.22(ಬಿಎಲ್‌ಯು)– ಅಪಾಯಕಾರಿ ಡೋಗೊ ಅರ್ಜೆಂಟೇನ್, ಜನ ಸ್ನೇಹಿ ಅಮೇರಿಕನ್ ಅಕಿಟಾ, ವೈರಿಯನ್ನು ಒಂದು ಬಾರಿ ಕಚ್ಚಿ ಹಿಡಿದರೆ ಬಿಡಿಸಿಕೊಳ್ಳಲು ಸಾಧ್ಯವಾಗದ ಅಮೇರಿಕನ್ ಬುಲ್ಲಿ, ಯುದ್ಧದ ಸಂದರ್ಭದಲ್ಲಿ ರಕ್ಷಣಾ ಪಡೆ ಬಳಸುವ ರಾಜ್ಯಪಾಳ್ಯಂ, ಬೆಲ್ಜಿಯನ್ ಮೆಲಿನೋಯಿಸ್, ಮಕ್ಕಳ ಪ್ರೀತಿಯ ಪೊಮೊರಿನ್.

ಇದು ಮೈಸೂರಿನ ಜೆ.ಕೆ.ಮೈದಾನದಲ್ಲಿ ಇಂದು ನಡೆದ ಶ್ವಾನ ಪ್ರದರ್ಶನದಲ್ಲಿ ಅತ್ಯಾಕರ್ಷಿಸಿದ ಶ್ವಾನಗಳು. ರೈತ ದಸರಾ ಉಪ ಸಮಿತಿ ಆಯೋಜಿಸಿದ್ದ ಶ್ವಾನ ಪ್ರದರ್ಶನವನ್ನು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಶ್ವಾನ ಪ್ರದರ್ಶನದಲ್ಲಿ 47 ವಿವಿಧ ತಳಿಯ 700 ಕ್ಕೂ ಹೆಚ್ಚು ಶ್ವಾನಗಳು, 60 ಬಗೆಯ ಬೆಕ್ಕುಗಳು ಹಾಗೂ 10 ವಿವಿಧ ಪಕ್ಷಿಗಳು ಭಾಗವಹಿಸಿತ್ತು. ತಳಿಯ ವೈಶಿಷ್ಟ್ಯತೆ ಹಾಗೂ ಆಕರ್ಷಣೆಯನ್ನು ಗುರುತಿಸಿ ಶ್ವಾನ, ಬೆಕ್ಕು ಹಾಗೂ ಪಕ್ಷಿಗಳಿಗೆ ಈ ವೇಳೆ ಬಹುಮಾನ ನೀಡಲಾಯಿತು.

ಪ್ರೀತಿಯಿಂದ ಸಾಕಿರುವ ಶ್ವಾನಗಳನ್ನು ಪ್ರಾಣಿ ಪ್ರಿಯರು ಇಂದಿನ ಶ್ವಾನ ಪ್ರದರ್ಶನದಲ್ಲಿ ಪ್ರದರ್ಶಿದರು. ಹಾಗೆಯೇ ದೇಶ–ವಿದೇಶದ ವಿಶಿಷ್ಟ ತಳಿಯ ಶ್ವಾನಗಳನ್ನು ಸಂತಾನೋತ್ಪತ್ತಿಗೊಳಿಸಿ ಮಾರಾಟ ಮಾಡುವ ಶ್ವಾನ ಮಾರಾಟಗಾರರು ಕೂಡ ಶ್ವಾನಗಳನ್ನು ಪ್ರದರ್ಶಿಸಿದರು. ಹೀಗೆ ಆಯೋಜಿಸುವ ಶ್ವಾನ ಪ್ರದರ್ಶನದಲ್ಲಿ ತಮ್ಮ ಶ್ವಾನ ಬಹುಮಾನ ಗಿಟ್ಟಿಸಿದರೆ ಆ ಶ್ವಾನಗಳ ಬೆಲೆ ಹೆಚ್ಚಾಗುತ್ತದೆ. ಈ ಹಿನ್ನೆಲೆ ತಮ್ಮ ವ್ಯವಹಾರವನ್ನು ದುಪ್ಪಟ್ಟು ಮಾಡಿಕೊಳ್ಳಲು ಬಹಳಷ್ಟು ಶ್ವಾನ ಮಾರಾಟಗಾರರು ತಾವು ಸಾಕಿರುವ ಶ್ವಾನಗಳನ್ನು ಇಂದಿನ ಪ್ರದರ್ಶನದಲ್ಲಿ ಪ್ರದರ್ಶಿಸಿ ಕೆಲವರು ಬಹುಮಾನ ಪಡೆದರು.

ಅಮೇರಿಕ ದೇಶದ ತಳಿ ಅಮೇರಿಕಾ ಬುಲ್ಲಿ ಪ್ರದರ್ಶನಗೊಂಡಿದ್ದ ಶ್ವಾನಗಳಲ್ಲಿ ವಿಶಿಷ್ಟವಾಗಿತ್ತು. ಇದರ ಬೆಲೆ 60 ಸಾವಿರದಿಂದ 1 ಲಕ್ಷ ರೂಪಾಯಿ ತನಕ ಇದ್ದು, ಇದು ಬಹಳ ಅಪಾಯಕಾರಿ ಶ್ವಾನವಾಗಿದೆ. ಕರುವಿನಂತೆ ದೇಹದಾರ್ಢ್ಯತೆ ಹೊಂದಿರುವ ಅಮೇರಿಕನ್ ಬುಲ್ಲಿ ಒಂದು ಬಾರಿ ಶತ್ರುವನ್ನು ಹಲ್ಲಿನಿಂದ ಬಲವಾಗಿ ಹಿಡಿದರೆ ಅದಕ್ಕೆ ದೊಣ್ಣೆಯಲ್ಲಿ ಹೊಡೆದರೂ ಬಿಡುವುದಿಲ್ಲ. ಅಷ್ಟರ ಮಟ್ಟಿಗೆ ಬಲಶಾಲಿಯಾದ ಶ್ವಾನವಾಗಿದೆ.

ಇದರ ಜೊತೆಗೆ ರಾಟ್ ವ್ಹೀಲರ್, ಪಿಟ್ ಬುಲ್, ಇಂಗ್ಲಿಷ್ ಮ್ಯಾಸ್ಟಿ, ಜರ್ಮನ್ ಷಪರ್ಡ್, ಡೋಗೊ ಅರ್ಜೆಂಟೇನ್ ಎಂಬ ವಿದೇಶ ತಳಿಯ ಅಪಾಯಕಾರಿ ಶ್ವಾನಗಳನ್ನು ಕೂಡ ಈ ವೇಳೆ ಪ್ರದರ್ಶಿಸಲಾಯಿತು.

ಅಮೇರಿಕನ್ ಅಕಿಟಾ, ಜಪಾನ್‌ನ ಅಚಿಕೊ ಎಂಬ ವಿದೇಶಿ ತಳಿಯ ಶ್ವಾನ ಕೂಡ ಗಮನ ಸೆಳೆಯಿತು. ಇದು ತಾನು ಸಾಕುವ ವ್ಯಕ್ತಿಯ ಜೊತೆ ಬಿಡಿಸಲಾಗದ ಒಡನಾಟ ಹಾಗೂ ಬಾಂಧವ್ಯ ಹೊಂದಿರುತ್ತದೆ. ಇದನ್ನು ಸಾಕುತ್ತಾ ಅದರ ಜೊತೆ ಒಂದು ಬಾರಿ ಒಡನಾಟ ಇಟ್ಟುಕೊಂಡರೆ ಒಂದು ಕ್ಷಣ ಕೂಡ ಅದನ್ನು ಬಿಟ್ಟು ಇರಲಾಗದಷ್ಟು ಬಾಂಧವ್ಯ ವೃದ್ಧಿಸುತ್ತದೆ.

ಕುದುರೆಗಳು, ಕುರಿ, ಮೇಕೆ ಸೇರಿದಂತೆ ಇತರೆ ಪ್ರಾಣಿಗಳನ್ನು ಮೈದಾನದಲ್ಲಿ ಹುಲ್ಲು ಮೇಯಲು ಬಿಟ್ಟಾಗ ಅವುಗಳ ಸಂರಕ್ಷಣೆಗೆ ಸಾಕುವ ಅಲಸ್ಕನ್ ವ್ಯಾಲಿಮ್ಯೂಟ್ ಕೂಡ ನೋಡುಗರನ್ನು ಅತ್ಯಾಕರ್ಷಿಸಿತು. ವರ್ಕಿಂಗ್ ಡಾಗ್ ಎಂಬ ಹೆಸರಿನಿಂದ ಪ್ರಖ್ಯಾತವಾಗಿರುವ ಈ ಶ್ವಾನ ಮನುಷ್ಯನ ಎಲ್ಲಾ ಕೆಲಸ ಕಾರ್ಯಗಳಲ್ಲಿ ಸಾಥ್ ನೀಡಲಿದೆ.

ಇವೆಲ್ಲವೂ ವಿದೇಶಿ ತಳಿಯ ಶ್ವಾನವಾದರೆ ಕರ್ನಾಟಕದ ಬಾಗಲಕೋಟೆಯ ಮುಧೋಳ ಹಾಗೂ ತಮಿಳುನಾಡಿನ ರಾಜ್ಯಪಾಳ್ಯಂ ಶ್ವಾನವನ್ನು ಕೂಡ ಪ್ರದರ್ಶಿಸಲಾಯಿತು. ಇದರ ಜೊತೆಗೆ ಬೆಲ್ಜಿಯಂ ಮೆಲಿನೋಯಿಸ್ ಹಾಗೂ ಮಿನ್ ಪಿನ್ ಎಂಬ ಶ್ವಾನ ಪ್ರದರ್ಶಿಸಲಾಯಿತು. ಮಿಲಿಟರಿ ಶ್ವಾನಗಳೆಂದೇ ಪ್ರಸಿದ್ಧ ಪಡೆದಿರುವ ಮುಧೋಳ, ರಾಜ್ಯಪಾಳ್ಯಂ, ಬೆಲ್ಜಿಯಂ ಮೆಲಿನೋಯಿಸ್ ಹಾಗೂ ಮಿನ್ ಪಿನ್ ಯುದ್ಧದ ಸಮಯದಲ್ಲಿ ರಕ್ಷಣಾ ಪಡೆಗಳಿಗೆ ಸಹಾಯಕ್ಕೆ ಧಾವಿಸುತ್ತವೆ. ಶತ್ರು ಪಡೆಯ ಬಗ್ಗೆ ಸಂಜ್ಞೆ ಮಾಡುತ್ತವೆ. ಜೊತೆಗೆ ಬಾಂಬ್ ಹುದುಗಿಸಿಟ್ಟಿರುವ ಬಗ್ಗೆ ಕೂಡ ಮಾಹಿತಿ ನೀಡುತ್ತವೆ.

ಶ್ವಾನಗಳಲ್ಲೆ ಭಾರೀ ಗಾತ್ರದ ಸೈಂಟ್ ಬರ್ನಾಡ್ ಹಾಗೂ ಎಲ್ಲಾ ಶ್ವಾನಗಳಿಗಿಂತ ಬೆಳವಣಿಗೆಯಲ್ಲಿ ಚಿಕ್ಕದಾದ ಮೆಕ್ಸಿಕನ್ ತಳಿ ಚಿವುವುವಾ ಹಾಗೂ ಮಿನ್ ಪಿನ್ ಶ್ವಾನ ವೀಕ್ಷಕರ ಕೇಂದ್ರಬಿಂದುವಾಗಿತ್ತು

ಎಸಿ, ಫ್ಯಾನ್ ಇಲ್ಲದಿದ್ದರೆ ಈ ಶ್ವಾನಗಳಿಗೆ ಬದುಕೇ ಇಲ್ಲ

ಬಹಳಷ್ಟು ಶ್ವಾನಗಳು ಐಷಾರಾಮಿಯಾಗಿ ಬದುಕುತ್ತವೆ. ಈ ಶ್ವಾನಗಳಿಗೆ ಯಾವಾಗಲೂ ಎಸಿ ಅಥವಾ ಫ್ಯಾನ್ ಇರಲೇಬೇಕು. ಹವಾ ನಿಯಂತ್ರಿತ ವಾತಾವರಣವಿಲ್ಲದಿದ್ದರೆ ಈ ಶ್ವಾನಗಳು ಬದುಕುವುದೇ ಇಲ್ಲ

ಇಂದಿನ ಶ್ವಾನ ಪ್ರದರ್ಶನದಲ್ಲಿ ತಂದಿದ್ದ ಬಹಳಷ್ಟು ಶ್ವಾನಗಳು ಸೂಕ್ಷ್ಮವಾಗಿವೆ. ಈ ಶ್ವಾನಗಳನ್ನು ಸಾಕುವ ಮಾಲೀಕರು ತಾವು ಎಸಿಯಲ್ಲಿ ಮಲಗುತ್ತಾರೊ ಇಲ್ಲವೊ ಗೊತ್ತಿಲ್ಲ. ಆದರೆ ಇವುಗಳನ್ನು ಎಸಿ ವಾತಾವರಣದಲ್ಲೇ ಸಾಕುತ್ತಾರೆ.

ಅಮೇರಿಕನ್ ಬುಲ್ಲಿ, ಅಮೇರಿಕನ್ ಅಕಿಟಾ, ಸೈಬೀರಿಯನ್ ಅಸ್ಕಿ, ಅಲಾಸ್ಕನ್ ಮೆನಾಮೋಟ್, ಇಂಗ್ಲಿಷ್ ಮ್ಯಾಸ್ಟಿಪ್ರೊ ಸೇರಿದಂತೆ ಹಲವು ನಾಯಿಗಳಿಗೆ ಎಸಿ ಬೇಕೆ ಬೇಕು.

ಈ ಶ್ವಾನಗಳನ್ನು ಇಂದಿನ ಪ್ರದರ್ಶನದ ವೇಳೆ ಸ್ವಲ್ಪ ಸಮಯ ಪೆಂಡಾಲ್ ಕೆಳಗೆ ನಿಲ್ಲಿಸಲಾಗಿತ್ತು. ಅವುಗಳ ವರ್ತನೆ ಗಮನಿಸಿದ ಶ್ವಾನಗಳ ಮಾಲೀಕರು ಏಕೊ ಇದಕ್ಕೆ ಸೆಖೆ ಆಗುತ್ತಿದೆ ಎಂದು ಗೊಣಗಿದರು. ತರುವಾಯ ಕಾರ್‌ಗೆ ಕರೆದೊಯ್ದು ಎಸಿ ವಾತಾವರಣದಲ್ಲಿ ಅವುಗಳನ್ನು ಕೂರಿಸಿದರು. ಎಸಿ ಅಥವಾ ಫ್ಯಾನ್ ಇಲ್ಲದಿದ್ದರೆ ಈ ಶ್ವಾನಗಳಿಗೆ ಬದುಕೆ ಇಲ್ಲ ಎಂದು ಶ್ವಾನಗಳ ಮಾಲೀಕರು ಹೇಳಿದರು. ಶ್ವಾನಗಳ ಐಷಾರಾಮಿ ಬದುಕು ನೋಡಿದ ಕೆಲವರು ಮೂಗಿನ ಮೇಲೆ ಬೆರಳಿಟ್ಟು ಆಶ್ಚರ್ಯ ವ್ಯಕ್ತಪಡಿಸಿದರು. ಬಹುತೇಕ ಎಲ್ಲಾ ಶ್ವಾನಗಳಿಗೆ ಮಾಂಸಾಹಾರವೇ ಹಾಕಬೇಕು. ಬೆಳಗ್ಗೆ ಚಿಕನ್ ರೈಸ್, ಎರಡು ಕೋಳಿ ಮೊಟ್ಟೆ, ಮಧ್ಯಾಹ್ನ ಒಂದು ಲೀಟರ್ ಮೊಸರು, ಸಂಜೆ ಮೊಸರನ್ನ ಹಾಗೂ ಎರಡು ಮೊಟ್ಟೆ, ರಾತ್ರಿ ಎರಡು ಕೆ.ಜಿ. ಹಸಿ ಚಿಕನ್ ಹಾಕಬೇಕು.

ಮನುಷ್ಯನಿಗೆ ಜ್ವರ ಬಂದರೆ ಹತ್ತಿಪ್ಪತ್ತು ರೂಪಾಯಿ ಮಾತ್ರೆಯಲ್ಲಿ ವಾಸಿಯಾಗುತ್ತದೆ. ಆದರೆ ಇವುಗಳ ಔಷಧಿ ಬಲು ದುಬಾರಿ. ಶ್ವಾನಗಳು ಅನಾರೋಗ್ಯಕ್ಕೀಡಾದಾಗ ಆಸ್ಪತ್ರೆಗೆ ಕರೆದೊಯ್ದರೆ ಕನಿಷ್ಠ ಒಂದೂವರೆ ಸಾವಿರ ರೂಪಾಯಿ ಬೇಕೆ ಬೇಕು ಎಂದು ಶ್ವಾನಗಳ ಮಾಲೀಕರು ತಿಳಿಸಿದರು.

ಕೆಲವು ಶ್ವಾನ ಅಪಾಯಕಾರಿ, ಮತ್ತೆ ಕೆಲವು ಶ್ವಾನಗಳು ದುಬಾರಿ, ಇನ್ನು ಕೆಲವು ಶ್ವಾನಗಳ ಸಾಕಾಣಿಕೆ ಸೂಕ್ಷ್ಮತೆಯಲ್ಲಿ ಸೂಕ್ಷ್ಮತೆ. ಆದರೂ ಪ್ರಾಣಿ ಪ್ರಿಯರು ಇವುಗಳನ್ನು ಸಾಕುತ್ತಾರೆ.

ಕೆಲವರು ಪ್ರೀತಿಗಾಗಿ ಶ್ವಾನ ಸಾಕಿದರೆ, ಮತ್ತೆ ಕೆಲವರು ಪ್ರತಿಷ್ಠೆಗಾಗಿ ದುಬಾರಿ ಶ್ವಾನಗಳನ್ನು ಸಾಕುತ್ತಾರೆ. ಇದನ್ನೆಲ್ಲಾ ನೋಡಿದಾಗ ಮನುಷ್ಯನಿಗಿಂತ ಶ್ವಾನಗಳೇ ಐಷಾರಾಮಿಯಾಗಿ ಬದುಕುತ್ತಿವೆ ಎಂಬುದು ಸ್ಪಷ್ಟ. ಯಾರೇ ಆಗಲಿ ಶ್ವಾನವನ್ನು ಇಷ್ಟೊಂದು ಪ್ರೀತಿಯಿಂದ ಸಾಕಲು ಕಾರಣವೆಂದರೆ ನಾಯಿಗಿರುವ ನಿಯತ್ತು ಮನುಷ್ಯನಿಗಿಲ್ಲ ಎಂಬ ಮಾತು.











ವಸ್ತುಪ್ರದರ್ಶನದಲ್ಲಿ ಉಚಿತ ಲಗೇಜ್ ಕೊಠಡಿ



ಮೈಸೂರು, ಅ.22(ಜಿಎ)–ದೂರದೂರಿಂದ ಬರುವ ಪ್ರವಾಸಿಗರಿಗೆ ಉಚಿತ ಲಗೇಜ್ ಕೊಠಡಿ ವ್ಯವಸ್ಥೆಯನ್ನು ವಸ್ತುಪ್ರದರ್ಶನ ಪ್ರಾಧಿಕಾರದಿಂದ ಈ ಬಾರಿ ಕಲ್ಪಿಸಲಾಗಿದೆ.

ರಾಜ್ಯದಲ್ಲಿ ತೀವ್ರ ಬರ ಎದುರಾಗಿರುವುದರಿಂದ ರಾಜ್ಯ ಸರ್ಕಾರ ಸಾಂಪ್ರಾದಾಯಿಕ ದಸರಾ ಮಾಡುತ್ತಿದ್ದು, ಕೆಲವೊಂದು ಕಾರ್ಯಕ್ರಮಗಳನ್ನು ಮಾತ್ರ ಕೈಬಿಟ್ಟಿದ್ದಾರೆ. ಆದರೆ, ಬಹುತೇಕ ಎಲ್ಲಾ ಕಾರ್ಯಕ್ರಮಗಳು ನಡೆಯುತ್ತಿವೆ. ಅದರಂತೆ ಪ್ರವಾಸಿಗರು ವಿಶ್ವವಿಖ್ಯಾತ ದಸರಾ ವೀಕ್ಷಣೆಗೆ ದೇಶ–ವಿದೇಶದ ನಾನಾ ಮೂಲೆಗಳಿಂದ ಮೈಸೂರಿಗೆ ಆಗಮಿಸಿದ್ದು, ಎತ್ತ ನೋಡಿದರೂ ಪ್ರವಾಸಿಗರೆ, ಕಾಣುತ್ತಿದ್ದಾರೆ.

ಮೈಸೂರಿನ ಪ್ರವಾಸಿ ತಾಣಗಳಾದ ಅರಮನೆ, ವಸ್ತುಪ್ರದರ್ಶನ, ಮೃಗಾಲಯ, ಚಾಮುಂಡಿ ಬೆಟ್ಟ ಸೇರಿದಂತೆ ದಸರಾ ಹಿನ್ನೆಲೆ ಆಯೋಜಿಸಿರುವ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದಾರೆ.

ರಾಜ್ಯ ಸರ್ಕಾರ ಮಹಿಳೆಯರಿಗಾಗಿ ಉಚಿತ ಬಸ್ ಶಕ್ತಿ ಯೋಜನೆ ಜಾರಿ ಮಾಡಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕರ್ನಾಟಕ ನಾನಾ ಭಾಗಗಳಿಂದ ಮೈಸೂರಿನ ದಸರಾ ವೈಭವವನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ. ಹಾಗೇ ದಸರಾ ವಸ್ತುಪ್ರದರ್ಶನ ವೀಕ್ಷಣೆಗೆ ನಿತ್ಯವೂ 35 ಸಾವಿರಕ್ಕೂ ಅಧಿಕ ಮಂದಿ ಪ್ರವಾಸಿಗರು ಭೇಟಿ ನೀಡುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಲಗೇಜ್ ಕೊಠಡಿಯನ್ನು ನಿರ್ಮಿಸಿದ್ದಾರೆ.

ಈ ಕೊಠಡಿಯಲ್ಲಿ ಪ್ರವಾಸಿಗರು ತಮ್ಮ ಲಗೇಜ್‌ಗಳನ್ನು ಇರಿಸಿ, ಇಡೀ ವಸ್ತು ಪ್ರದರ್ಶನವನ್ನು ಸುತ್ತಿಕೊಂಡು ಅಲ್ಲಿರುವ ತಿಂಡಿ–ತಿನಿಸು, ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ಮನ ರಂಜನೆ ಪಡೆದುಕೊಂಡು ನಂತರ ತಮ್ಮ ಲಗೇಜ್‌ಗಳನ್ನು ವಾಪಸ್ ತೆಗೆದುಕೊಳ್ಳಬಹುದಾಗಿದೆ.

> ಸರ್ಕಾರದಿಂದ ಉಚಿತ ಬಸ್ ಶಕ್ತಿ ಯೋಜನೆ ಇರುವುದರಿಂದ ದೂರದ ಊರುಗಳಿಂದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದು, ಲಗೇಜ್‌ಗಳನ್ನು ಹೊತ್ತಿಕೊಂಡು ಇಡೀ ವಸ್ತು ಪ್ರದರ್ಶನ ಸುತ್ತುವುದು ಕಷ್ಟಕರ. ಈ ಹಿನ್ನೆಲೆಯಲ್ಲಿ ಈ ಬಾರಿ ಉಚಿತವಾಗಿ ಲಗೇಜ್ ಕೊಠಡಿ ನಿರ್ಮಿಸಲಾಗಿದೆ.
> –ರಾಜೇಶ್.ಜಿ.ಗೌಡ, ಸಿಇಓ, ವಸ್ತುಪ್ರದರ್ಶನ ಪ್ರಾಧಿಕಾರ



ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ವತಿಯಿಂದ ಪಾರ್ಟಿಯ ಸಂಸ್ಥಾಪಕ ರಾಜ್ಯ ಅಧ್ಯಕ್ಷ ಡಾ. ಬಿ.ಶಿವಣ್ಣ ಅವರ ನೇತೃತ್ವದಲ್ಲಿ ರಸ್ತೆ ಬದಿಯ ವ್ಯಾಪಾರಿಗಳಿಗೆ ಕೈಗಾಡಿಗಳನ್ನು ವಿತರಿಸಲಾಯಿತು. ಈ ವೇಳೆ ಪಾರ್ಟಿಯ ಮೈಸೂರು ಜಿಲ್ಲಾ ನಗರ ಅಧ್ಯಕ್ಷ ಆರ್.ಶ್ರೀನಿವಾಸ್, ಸಂಚಾಲಕರಾದ ಡಿ.ಶಂಕರ್, ಭಾಗ್ಯಮ್ಮ, ತೊಣಚಿಕೊಪ್ಪಲ್ ಗುಡ್ಡಪ್ಪ ಜನತಾನಗರ ರಾಜು, ನಿವೃತ್ತ ಪೊಲೀಸ್ ಅಧಿಕಾರಿ ಶ್ರೀರಾಂಪುರದ ನಾಗಸುಂದರ್ ಹಾಗೂ ಗಂಗಡಹೊಸಹಳ್ಳಿಯ ಸಿದ್ದರಾಜು ಇನ್ನಿತರರಿದ್ದರು.

ಜಂಬೂಸವಾರಿಯಲ್ಲಿ ಸಾಗಲು ವೈವಿಧ್ಯಮಯ ಸ್ತಬ್ಧಚಿತ್ರಗಳು ಸಿದ್ಧ



ಮೈಸೂರು,ಅ.22(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿ ಮೆರವಣಿಗೆಯಲ್ಲಿ ಈ ಬಾರಿ ಅತ್ಯಾಕರ್ಷಕ ಸ್ತಬ್ಧಚಿತ್ರಗಳು ಸಾಗಲಿದ್ದು, ದಾರಿಯುದ್ದಕ್ಕೂ ರಸ್ತೆ ಬದಿಯಲ್ಲಿ ನೆರೆದಿರುವ ಜನರನ್ನು ಮುದಗೊಳಿಸಲಿದೆ ಎಂದು ಸ್ತಬ್ಧಚಿತ್ರ ಉಪಸಮಿತಿ ಅಧ್ಯಕ್ಷ ಅಹಿಂದ ಜವರಪ್ಪ ತಿಳಿಸಿದ್ದಾರೆ.

ಮೈಸೂರಿನ ಜಿ.ಪಂ ಕಚೇರಿಯ ನೂತನ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ದಸರಾ ಮಹೋತ್ಸವದಲ್ಲಿ ವೈವಿಧ್ಯಮಯ ಸ್ತಬ್ಧಚಿತ್ರ ಸಾಗಲಿದೆ. ಜಂಬೂಸವಾರಿಗೂ ಎರಡು ದಿನ ಮುನ್ನವೇ ಸ್ತಬ್ಧಚಿತ್ರಗಳು ಸಿದ್ಧಗೊಂಡಿವೆ. ಈ ಬಾರಿ ವೈವಿಧ್ಯಮಯ 49 ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ತೆರಳಲಿವೆ. ಎಲ್ಲಾ ಜಿಲ್ಲೆಗಳಿಂದ 31, ಸ್ತಬ್ಧಚಿತ್ರ ಉಪ ಸಮಿತಿಯಿಂದ 2 ಹಾಗೂ ವಿವಿಧ ಇಲಾಖೆಗಳಿಂದ 14 ಸ್ತಬ್ಧಚಿತ್ರಗಳು ಸಾಗಲಿವೆ. ಸಾರ್ವಜನಿಕರನ್ನು ಆಕರ್ಷಿಸಲು ಉತ್ತಮ ರೀತಿಯಲ್ಲಿ ಸ್ತಬ್ಧಚಿತ್ರ ತಯಾರು ಮಾಡಲಾಗುತ್ತಿದ್ದು, ಈಗಾಗಲೇ ಶೇ.90ರಷ್ಟು ಸಿದ್ಧತೆ ಕಾರ್ಯ ಪೂರ್ಣಗೊಂಡಿದೆ. ಸ್ತಬ್ಧಚಿತ್ರಗಳ ನಿರ್ಮಾಣಕ್ಕೆ ಮೈಸೂರಿನ ಬಂಡಿಪಾಳ್ಯದಲ್ಲಿರುವ ಎಪಿಎಂಸಿ ಆವರಣದಲ್ಲಿ ಅವಕಾಶ ನೀಡಲಾಗಿದ್ದು, ಆಯಾ ಜಿಲ್ಲೆಯ ಪ್ರಾಕೃತಿಕ, ಭೌಗೋಳಿಕ, ಐತಿಹಾಸಿಕ ವಿಶೇಷತೆಯನ್ನು ಪ್ರತಿಬಿಂಬಿಸುವಂತೆ ಸ್ತಬ್ಧಚಿತ್ರಗಳು ನಿರ್ಮಿಸಲಾಗಿದೆ ಎಂದರು.

ಎಲ್ಲಾ ಜಿಲ್ಲೆಗಳನ್ನು ಪ್ರತಿನಿಧಿಸುವ 31 ಸ್ತಬ್ಧಚಿತ್ರಗಳೊಂದಿಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಕೆಎಂಎಫ್, ವಾರ್ತಾ ಮತ್ತು ಪ್ರಚಾರ ಇಲಾಖೆ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಮುಲ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಪ್ರವಾಸೋದ್ಯಮ ಇಲಾಖೆ, ಕಾವೇರಿ ನಿರಾವರಿ ನಿಗಮ, ವಾಕ್–ಶ್ರವಣ ಸಂಸ್ಥೆ, ಡಾ. ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ಹಾಗೂ ಸ್ತಬ್ಧಚಿತ್ರ ಉಪ ಸಮಿತಿಯಿಂದ ಅರಮನೆ ವಾದ್ಯಗೋಷ್ಠಿಯ ತಂಡವುಳ್ಳ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಸಾಗಲಿದೆ ಎಂದು ತಿಳಿಸಿದರು.

ಸ್ತಬ್ಧಚಿತ್ರ ನಿರ್ಮಾಣಕ್ಕಾಗಿ ಸುಸಜ್ಜಿತ ಲಾರಿಗಳನ್ನೇ ಬಳಸಲಾಗಿದೆ. ಈ ಹಿಂದೆ ಮೆರವಣಿಗೆಯಲ್ಲಿ ಸ್ತಬ್ಧಚಿತ್ರದ ವಾಹನ ಕೆಟ್ಟು ನಿಂತಿರುವ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಈ ಬಾರಿ ಸುಸಜ್ಜಿತ ಲಾರಿಗಳನ್ನು ಬಳಸುವಂತೆ ಸೂಚನೆ ನೀಡಲಾಗಿದೆ. ಮೆರವಣಿಗೆಯಲ್ಲಿ ಒಂದು ಸ್ತಬ್ಧಚಿತ್ರದಿಂದ ಮತ್ತೊಂದು ಸ್ತಬ್ಧಚಿತ್ರದ ನಡುವೆ ಅಂತರ ಕಾಯ್ದುಕೊಳ್ಳಲು ಹಾಗೂ ಸ್ತಬ್ಧಚಿತ್ರಗಳಿಗೆ ಹೋಲುವ ಕಲಾತಂಡವನ್ನು ಮೆರವಣಿಗೆಯಲ್ಲಿ ಸಾಗುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸ್ತಬ್ಧಚಿತ್ರ ಉಪ ಸಮಿತಿಯ ಉಪಾಧ್ಯಕ್ಷರಾದ ಚೇತನ್ ಕುಮಾರ್, ಎನ್. ಭಾಸ್ಕರ್, ಉಮೇಶ್ ಯಾಕನೂರು, ಉಪ ವಿಶೇಷಾಧಿಕಾರಿ ಟಿ.ಆರ್. ರಾಜಗೋಪಾಲ್, ಕಾರ್ಯದರ್ಶಿ ರಾಘವೇಂದ್ರ, ಸದಸ್ಯರಾದ ಶಿವಕುಮಾರ್, ಚಂದ್ರಶೇಖರ್, ಪ್ರಶಾಂತ್, ರಾಜು ಉಕ್ಕಲಗೆರೆ, ನಂಜುಂಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅ.28ರಂದು ಮಹರ್ಷಿ ವಾಲ್ಮೀಕಿ ಜಯಂತಿ

ಮೈಸೂರು, ಅ. 22– ಜಿಲ್ಲಾಡಳಿತ, ಮೈಸೂರು ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗದ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 28ರಂದು ಮಧ್ಯಾಹ್ನ 12.30ಕ್ಕೆ ನಗರದ ಕರ್ನಾಟಕ ಕಲಾ ಮಂದಿರದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಘನ ಉಪಸ್ಥಿತಿಯಲ್ಲಿ, ಸಮಾಜ ಕಲ್ಯಾಣ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್‌ರವರ ಗೌರವ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಕೆ. ಹರೀಶ್ ಗೌಡ ವಹಿಸುವರು. ಮುಖ್ಯ ಅತಿಥಿಗಳಾಗಿ ಪಾಲಿಕೆಯ ಮಹಾಪೌರ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು.

ಕಲಾವಿದರ ಅಭಿವೃದ್ಧಿಗೆ ಪ್ರೋತ್ಸಾಹ ಅಗತ್ಯ ; ಸಚಿವ ವೆಂಕಟೇಶ್

ದಸರಾ ವಿವಿಧ ಕಾರ್ಯಕ್ರಮಗಳ ಸಮಾರೋಪ, ಬಹುಮಾನ ವಿತರಣೆ



ಮೈಸೂರು, ಅ.22(ಜಿಎ)–ಕಲಾವಿದರ ಅಭಿವೃದ್ಧಿಗೆ ಅವಕಾಶ ಸೃಷ್ಟಿಸುವ ಮೂಲಕ ಪ್ರೋತ್ಸಾಹ ನೀಡಬೇಕು ಎಂದು ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವರಾದ ಕೆ.ವೆಂಕಟೇಶ್ ಕರೆ ನೀಡಿದರು.

ಮೈಸೂರು ದಸರಾ ಮಹೋತ್ಸವ ಅಂಗವಾಗಿ ಲಲಿತ ಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ವತಿಯಿಂದ ನಗರದ ಕಲಾಮಂದಿರದಲ್ಲಿ ಹಮ್ಮಿಕೊಂಡಿದ್ದ ವಿವಿಧ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಲಾವಿದರ ಅಭಿರುಚಿಗೆ ತಕ್ಕಂತೆ ಅವಕಾಶ ಕಲ್ಪಿಸಿಕೊಡುವ ಜವಾಬ್ದಾರಿ ನಮಗಿದೆ ಎಂದರು.

ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಗೆ ಹೆಚ್ಚು ಉತ್ತೇಜನ ನೀಡಿರುವ ನಮ್ಮ ಮೈಸೂರು ಇಷ್ಟು ಅಭಿವೃದ್ಧಿಯಾಗುವಲ್ಲಿ ಮೈಸೂರು ಮಹಾರಾಜರ ಪಾತ್ರ ಬಹಳಷ್ಟಿದೆ. ಮೈಸೂರು ವಿಶ್ವ ವಿಖ್ಯಾತಿಯನ್ನು ಪಡೆದ ಸ್ಥಳಗಳಲ್ಲೊಂದಾಗಿದೆ. ಇಂತಹ ಮೈಸೂರು ದಸರಾ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಮಾಡಬೇಕಿತ್ತು. ಆದರೆ ಈ ಬಾರಿ ಬರಗಾಲದಿಂದ ಸಾಂಪ್ರದಾಯಿಕ ದಸರಾವನ್ನು ಆಚರಿಸಲಾಗುತ್ತಿದೆ. ರಾಜ್ಯದಲ್ಲಿ ಹಲವಾರು ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಲಾಗಿದ್ದು, ಮುಂದೆ ಮಳೆ ಬಾರದೆ ಇದ್ದರೆ ಮುಂಬರುವ ಅನಾಹುತಗಳ ಬಗ್ಗೆ ಆತಂಕ ಉಂಟಾಗುತ್ತಿದೆ ಎಂದರು.

ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ನೀಡುತ್ತಿರುವ ನಗದು ಬಹುಮಾನವನ್ನು ಹೆಚ್ಚಿಸಿ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ. ಹಿರಿಯ ಕರಕುಶಲ ಕರ್ಮಿಗಳನ್ನು ಕರೆಸಿ ಗೌರವಿಸಿದ ನಿಮ್ಮ ಈ ಕೆಲಸ ಮೆಚ್ಚುವಂಥದ್ದು. ನಿಮ್ಮಲ್ಲಿರುವ ಕಲಾಭಿಮಾನವನ್ನು ಹೀಗೆ ಮುಂದುವರಿಸುತ್ತಾ ಎಲ್ಲಾ ಕರಕುಶಲ ಕರ್ಮಿಗಳು ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

ಈ ವೇಳೆ ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ರಾಜ್ಯದಲ್ಲಿ ಕೇವಲ 1200 ಮಾತ್ರ ಕರಕುಶಲ ಕರ್ಮಿಗಳಿದ್ದು, ವರ್ಷದಿಂದ ವರ್ಷಕ್ಕೆ ಕರಕುಶಲಕರ್ಮಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಕಳೆದ ಬಾರಿ ಸಿದ್ದರಾಮಯ್ಯನವರ ಸರ್ಕಾರವಿದ್ದಾಗ ಕರಕುಶಲಕರ್ಮಿಗಳಿಗಾಗಿಯೇ ವಾಸಿಸಲು ಜಾಗವನ್ನು ನೀಡಲಾಗಿತ್ತು. ಕಲೆಯನ್ನು ಪ್ರೋತ್ಸಾಹಿಸುವ ಹಾಗೂ ನಿಮ್ಮ ಪ್ರಗತಿಗಾಗಿ ಶ್ರಮಿಸುವ ಮನಸ್ಸು ಸರ್ಕಾರಕ್ಕಿದೆ ಎಂದರು.

ಸಮಾರಂಭದಲ್ಲಿ ಮಕ್ಕಳಿಗಾಗಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಕಮಲ್ ಗೌಡ, ತನಿಷಾ ನಂದಿ, ಗೌರಿ ಅಂಬಾರ್‌ಗೆ ಬಹುಮಾನ ವಿತರಿಸಲಾಯಿತು. ರಾಜ್ಯಮಟ್ಟದ ಶಿಲ್ಪಕಲಾ ಮತ್ತು ಚಿತ್ರಕಲಾ ಪ್ರದರ್ಶನದಲ್ಲಿ ವೃತ್ತಿಪರ ಚಿತ್ರಕಲಾ ವಿಭಾಗದಲ್ಲಿ ಆಶಾರಾಣಿ ಬಾಣಡೋಣಿ, ಮಮತಾ ರಾಜೇಶ್ ಬೋರ, ಸೌಮ್ಯ ಎನ್, ವೃತ್ತಿಪರ ಶಿಲ್ಪಕಲೆ ವಿಭಾಗದಲ್ಲಿ ದಾನಯ್ಯ ಚೌಕಿಮಠ, ಚೇತನ್ ಕುಮಾರ್, ವಿಶಾಲ್ ಕವಟೇಕರ್, ವೃತ್ತಿಪರ ಛಾಯಾಚಿತ್ರ ವಿಭಾಗದಲ್ಲಿ ಜಿ.ಎಸ್.ರವಿಶಂಕರ್, ವರದನಾಯಕ ಟಿಪಿ, ಎಂ.ಎಸ್.ಬಸವಣ್ಣ, ವೃತ್ತಿಪರ ಗ್ರಾಫಿಕ್ಸ್ ಕಲೆ ವಿಭಾಗದಲ್ಲಿ ಹೆಚ್.ವಿ. ಜಾನ್, ನಾಗರಾಜು, ವಿವೇಕ್.ಹೆಚ್, ವೃತ್ತಿಪರ ಅನ್ವಯಿಕ ಕಲೆ ವಿಭಾಗದಲ್ಲಿ ಪಿ.ಸುನಿದ್, ತಿಲಕ್ ಕುಮಾರ್ ಅವರಿಗೆ ಪ್ರಶಸ್ತಿ ನೀಡಲಾಯಿತು.

ಸಾಂಪ್ರದಾಯಿಕ ಶಿಲ್ಪ ಕಲಾ ವಿಭಾಗದಲ್ಲಿ ಜಕಣಾಚಾರ್ಯ.ಬಿ ವಿಶ್ವಕರ್ಮ, ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಪ್ರಮೀಳಾದಾಸ್, ಹೇಮಾಮಾಲಿನಿ ಎಲ್, ಅನುಸೂಯ.ಹೆಚ್.ಈ, ಕರಕುಶಲ ಕಲೆ ವಿಭಾಗದಲ್ಲಿ ಶುಭ ಶಂಕರಿ ಶಾಸ್ತ್ರಿ, ವೆಂಕಟೇಶ ಜಿ, ಹವ್ಯಾಸಿ ಚಿತ್ರಕಲೆ ವಿಭಾಗದಲ್ಲಿ ಪವನ್ ಕುಮಾರ್ ಎಂಎಲ್, ಬಂಗಾರ ಟಿ.ಆರ್, ನಿಖಿತಾ ಪಿ.ಹುಲಿ ಗೌಡರ್, ಹವ್ಯಾಸಿ ಶಿಲ್ಪಕಲೆ ವಿಭಾಗದಲ್ಲಿ ಹರಳು ಪತ್ತಾರಿ ಪ್ರಮೋದ್ ಕುಮಾರ್, ಸ್ಮೃದುಲ್, ಸಂಕೇತ್, ಹವ್ಯಾಸಿ ಛಾಯಾಚಿತ್ರ ವಿಭಾಗದಲ್ಲಿ ಸುಧೀರ್ ಎನ್ ಜಿ, ಶಾರೀಕ ವಿ, ಅನುಪ್ ಆರ್ ಶಂಕರ್, ಹವ್ಯಾಸಿ ಗ್ರಾಫಿಕ್ ವಿಭಾಗದಲ್ಲಿ ಸಂದೀಪ್ ಕುಮಾರ್ ಡಿ, ಸಂಜನಾ ಡಿಸೋಜಾ, ನಿತ್ಯಶ್ರೀ ಎಂ ಪಿ, ಹವ್ಯಾಸಿ ಅನ್ವಯಿಕ ಕಲಾವಿಭಾಗದಲ್ಲಿ ಅಂಕಿತ ಚಂದ್ರ ಕೆ. ಅವರುಗಳಿಗೆ ಬಹುಮಾನ ವಿತರಣೆ ಮಾಡಿದರು. ಈ ವೇಳೆ ಲಲಿತ ಕಲೆ ಹಾಗೂ ಕರಕುಶಲ ಕಲೆ ಉಪ ಸಮಿತಿಯ ಉಪ ವಿಶೇಷಾಧಿಕಾರಿಗಳಾದ ದೇವರಾಜು.ಎ, ಕಾರ್ಯಾಧ್ಯಕ್ಷೆ ನಾಜಿಯ ಸುಲ್ತಾನ, ಕಾರ್ಯದರ್ಶಿ ರಶ್ಮಿ.ಬಿ ಸೇರಿದಂತೆ ಅಧ್ಯಕ್ಷೆ ಹೇಮಲತಾ, ಉಪಾಧ್ಯಕ್ಷ ಜಯಚಂದ್ರ, ಮಹಮ್ಮದ್ ಅಕ್ಬರ್ ಅಲಿ ಸೇರಿದಂತೆ ಸಮಿತಿಯ ಇತರ ಸದಸ್ಯರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 23 ಅಕ್ಟೋಬರ್ 2023



ನಾಳೆ ಮಡಿಕೇರಿ ದಸರಾ ಉತ್ಸವ

ದೇವಲೋಕವನ್ನೇ ಸೃಷ್ಟಿಸುವ ದಶಮಂಟಪಗಳ ಶೋಭಾಯಾತ್ರೆಗೆ ಸಿದ್ಧತೆ, ಸಾವಿರಾರು ಜನರು ಭಾಗವಹಿಸುವ ನಿರೀಕ್ಷೆ



ಮಡಿಕೇರಿ, ಅ.22– ಕೊಡಗನ್ನಾಳಿದ ಹಾಲೇರಿ ರಾಜವಂಶಸ್ಥರ ಅವಧಿಯಲ್ಲಿ ಆರಂಭಗೊಂಡು ಎರಡು ಶತಮಾನಕ್ಕೂ ಹೆಚ್ಚಿನ ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ಶೋಭಾಯಾತ್ರೆ ಮಂಗಳವಾರ (ಅ.24) ವಿಜೃಂಭಣೆಯಿಂದ ನಡೆಯಲಿದೆ.

ಕಾಲಿಡಲು ಸ್ಥಳವಿಲ್ಲದಂತೆ ಕಿಕ್ಕಿರಿದು ಜನ ಸೇರುವ ನಿರೀಕ್ಷೆಯಿದ್ದು, ಸಹಸ್ರಾರು ಪ್ರೇಕ್ಷಕರ ಸಮ್ಮುಖದಲ್ಲಿ ದಶ ಮಂಟಪಗಳು ದೇವ ಲೋಕವನ್ನೇ ಧರೆಗಿಳಿಸುವ ಮೂಲಕ 'ದುಷ್ಟ ಸಂಹಾರ ಶಿಷ್ಟ ಪರಿಪಾಲನೆಯ' ಸಂದೇಶ ಸಾರಲಿವೆ. ಆ ಮೂಲಕ ದಸರಾ ವೀಕ್ಷಣೆಗೆ ಆಗಮಿಸುವ ಸಹಸ್ರಾರು ಮಂದಿ ಮಡಿಕೇರಿ ದಸರಾ ವೈಭವವನ್ನು ಕಣ್ತುಂಬಿಕೊಂಡು ಸಂಭ್ರಮಿಸಲು ಕ್ಷಣಗಣನೆ ಆರಂಭವಾಗಿದೆ.

ಈ ಬಾರಿ ಸರ್ಕಾರದ ಅನುದಾನದೊಂದಿಗೆ ಅದ್ಧೂರಿಯ ಉತ್ಸವ ನಡೆಸಲು ಮಡಿಕೇರಿ ದಸರಾ ಸಮಿತಿ ಹಾಗೂ ದಶ ಮಂಟಪಗಳು ನಿರ್ಧರಿಸಿದ್ದರಿಂದ ದಸರಾ ಉತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಲಿದೆ. ಸಂಪ್ರದಾಯದಂತೆ ನಗರದ ಪೇಟೆ ಶ್ರೀ ರಾಮ ಮಂದಿರದ ಆಕರ್ಷಕ ಮಂಟಪಕ್ಕೆ ಮಂಗಳವಾರ ರಾತ್ರಿ ಚಾಲನೆ ನೀಡುವ ಮೂಲಕ ದಶ ಮಂಟಪಗಳ ಶೋಭಾಯಾತ್ರೆ ಆರಂಭ ಕಾಣಲಿದೆ. ಒಂದೂವರೆ ಶತಮಾನದ ಭವ್ಯ ಇತಿಹಾಸ ಹೊಂದಿರುವ ಪೇಟೆ ಶ್ರೀರಾಮಮಂದಿರದ 'ವೈಕುಂಠ ದರ್ಶನ' ಎಂಬ ಪೌರಾಣಿಕ ಕಥೆಯನ್ನಾಧರಿಸಿದ ಮಂಟಪ ನಾಲ್ಕು ಶಕ್ತಿ ದೇವತೆಗಳ ದೇಗುಲಕ್ಕೆ ತೆರಳುವ ಮೂಲಕ ಅಲ್ಲಿನ ಮಂಟಪಗಳನ್ನು ಶೋಭಾಯಾತ್ರೆಗೆ ಆಹ್ವಾನಿಸಲಿದೆ

ವಿಜೃಂಭಣೆಯ ಶೋಭಾಯಾತ್ರೆ: ಪೇಟೆ ಶ್ರೀ ರಾಮಮಂದಿರರ ಮಂಟಪದ ಆಗಮನದೊಂದಿಗೆ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯದಿಂದ ಆರಂಭಗೊಂಡ ಮಂಟಪ 'ಶ್ರೀ ದುರ್ಗಾ ಸಪ್ತಶತಿ ಪುರಾಣದ ಕದಂಬ ಕೌಶಿಕೆ' ಕಥಾ ಭಾಗವನ್ನಾಧರಿಸಿದ ಕಲಾಕೃತಿಗಳೊಂದಿಗೆ ಶೋಭಾಯಾತ್ರೆ ನಡೆಸಲಿದೆ. ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯದ ಮಂಟಪದಲ್ಲಿ ಈ ಬಾರಿ 'ಶಿವನಿಂದ ತ್ರಿಪುರಾಸುರರ ವಧೆ' ಎಂಬ ಕಥಾಹಂದರವನ್ನು ಮಂಟಪದಲ್ಲಿ ಅಳವಡಿಸಲಾಗುತ್ತಿದೆ. ಶ್ರೀ ಕೋಟೆ ಮಾರಿಯಮ್ಮ ದೇವಾಲಯ 'ಪಂಚಮುಖಿ ಆಂಜನೇಯನಿಂದ ಅಹಿರಾವಣ–ಮಹಿರಾವಣ ವಧೆ' ಎಂಬ ಪೌರಾಣಿಕ ಹಿನ್ನೆಲೆಯ ಮಂಟಪ ಸಿದ್ಧಪಡಿಸಿ ಶೋಭಾಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದು, ಶ್ರೀ ದಂಡಿನ ಮಾರಿಯಮ್ಮ ದೇವಾಲಯದ 'ಶಿವನಿಂದ ಜಲಂಧರನ ಸಂಹಾರ' ಎಂಬ ಕಥಾಭಾಗವನ್ನು ಮಂಟಪದಲ್ಲಿ ಅಳವಡಿಸಿ, ಶೋಭಾಯಾತ್ರೆ ನಡೆಸಲಿದೆ.

ಶ್ರೀಕೋಟೆ ಮಹಾಗಣಪತಿ ದೇವಾಲಯ ಮಂಟಪದಲ್ಲಿ 'ಮಹಾಗಣಪತಿಯಿಂದ ಶತಮಹಿಷಿಯ ಸಂಹಾರ' ಎಂಬ ಕಥಾ ಸಾರಾಂಶವನ್ನು ಅಳವಡಿಸಲಾಗುತ್ತಿದೆ. ಶ್ರೀ ಕೋದಂಡರಾಮ ದೇವಾಲಯ 'ಮಣಿಕಂಠನಿಂದ ಮಹಿಷಿಯ ಶಾಪ ವಿಮೋಚನೆ' ಎಂಬ ಸಾರಾಂಶ ಹೊಂದಿದ್ದರೆ, ಶ್ರೀಕರವಲೆ ಭಗವತಿ ಮಹಿಷ ಮರ್ಧಿನಿ ದೇವಾಲಯದ 'ಉಗ್ರ ನರಸಿಂಹನಿಂದ ಹಿರಣ್ಯಕಶ್ಯಪ ಸಂಹಾರ' ದೇಚೂರು ಶ್ರೀ ರಾಮ ಮಂದಿರದ 'ವಿಷ್ಣುವಿನಿಂದ ಮಧುಕೈಟಬರ ಸಂಹಾರ', ಶ್ರೀ ಚೌಡೇಶ್ವರಿ ದೇವಾಲಯದ ಮಂಟಪದಲ್ಲಿ 'ಶ್ರೀ ಕಟೀಲು ಕ್ಷೇತ್ರ ಮಹಾತ್ಮೆ' ಕಥಾಭಾಗವನ್ನು ಹೊಂದಿದ ಮಂಟಪಗಳು ಜನ ಮನವನ್ನು ಸೂರೆಗೊಳ್ಳಲಿವೆ. ಎಲ್ಲಾ 10 ಮಂಟಪಗಳಲ್ಲೂ ಪೌರಾಣಿಕ ಕಥಾಹಂದರಕ್ಕೆ ತಕ್ಕಂತೆ ಕಲಾಕೃತಿಗಳನ್ನು ಅಳವಡಿಸಲಾಗುತ್ತಿದ್ದು, ಆಕರ್ಷಕ ದಿಂಡಿಗಲ್ ಲೈಟ್ ಬೋರ್ಡ್, ಕಥಾ ಸಾರಾಂಶದ ಕಲಾಕೃತಿಗಳ ಚಲನವಲನ ಆಧರಿಸಿ ಸ್ಪಾಟ್‌ಲೈಟ್‌ಗಳು, ಕೂಲ್ ಫಯರ್, ದೇವಾನು ದೇವತೆಗಳು ಹಾಗೂ ದುಷ್ಟ ಶಕ್ತಿಗಳ ನಡುವಿನ ಸಂಹಾರ ಯುದ್ಧದ ಸನ್ನಿವೇಶಗಳಲ್ಲಿ ಸಂಭಾಷಣೆಗೆ ಹೊಂದಿಕೆಯಾಗುವ ಧ್ವನಿವರ್ಧಕಗಳನ್ನು ಅಳವಡಿಸಲಾಗುತ್ತಿದೆ.

ಮುಂಡಚಾಡೀರ ತಂಡಕ್ಕೆ ಕೊಡವ, ಅಮ್ಮಕೊಡವ ವಾಲಿಬಾಲ್ ಚಾಂಪಿಯನ್ ಪ್ರಶಸ್ತಿ



ಗೋಣಿಕೊಪ್ಪ, ಅ.22– ಮಾಯಮುಡಿ ಮಾನಿಲ್ ಅಯ್ಯಪ್ಪ ಸೇವಾ ಸಮಿತಿ ಹಾಗೂ ಮಾನಿಲ್ ಅಯ್ಯಪ್ಪ ಯುವಕ ಸಂಘದ ಸಹಯೋಗದಲ್ಲಿ ಮಾನಿಲ್ ಅಯ್ಯಪ್ಪ ಮೈದಾನದಲ್ಲಿ ನಡೆದ 10 ನೇ ವರ್ಷದ ಕೊಡವ, ಅಮ್ಮ ಕೊಡವ ವಾಲಿಬಾಲ್ ಟೂರ್ನಿಯಲ್ಲಿ ಮುಂಡ ಚಾಡೀರ ತಂಡ ಚಾಂಪಿಯನ್ ಸ್ಥಾನ ಅಲಂಕರಿಸಿತು. ಫೈನಲ್‌ನಲ್ಲಿ ಸೋಲನುಭವಿಸಿದ ಮಂಡುವಂಡ ರನ್ನರ್ ಅಪ್‌ಗೆ ತೃಪ್ತಿ ಪಟ್ಟುಕೊಂಡಿತು. ಮೂರನೇ ತಂಡವಾಗಿ ಮಲ್ಲಮಾಡ, ನಾಲ್ಕನೇ ತಂಡವಾಗಿ ಚೆರಿಯಪಂಡ ಹೊರಹೊಮ್ಮಿತು. ಫೈನಲ್ ಹಣಾಹಣಿಯಲ್ಲಿ ಮುಂಡ ಚಾಡೀರ 24–22, 11–15, 21–8 ಸೆಟ್‌ಗಳಿಂದ ಜಯಿಸಿತು. 17 ತಂಡಗಳು ಟೂರ್ನಿಯಲ್ಲಿ ಪಾಲ್ಗೊಂಡವು.

ಕಾಫಿ ಬೆಳೆಗಾರರಾದ ರಾಧಾ ಅಚ್ಚಯ್ಯ, ಪಾಂಡಂಡ ರವಿ, ದಾನಿ ಶ್ರೀಪತಿ, ಸಮಿತಿ ಗೌ. ಅಧ್ಯಕ್ಷ ಸಣ್ಣುವಂಡ ಬಿ. ರಮೇಶ್, ಅಧ್ಯಕ್ಷ ಸಣ್ಣುವಂಡ ವಿನು ವಿಶ್ವನಾಥ್, ಯುವಕ ಸಂಘ ಅಧ್ಯಕ್ಷ ಚೆಪ್ಪುಡೀರ ಪ್ರದೀಪ್ ಪೂವಯ್ಯ ಬಹುಮಾನ ವಿತರಿಸಿದರು.

ಅಖಿಲ ಕೊಡವ ಸಮಾಜದ ಮಾಜಿ ಅಧ್ಯಕ್ಷ ಮಾತಂಡ ಮೊಣ್ಣಪ್ಪ ಅಂತ್ಯಕ್ರಿಯೆ





ವಿರಾಜಪೇಟೆ, ಅ.22– ಶನಿವಾರ ಬೆಂಗಳೂರಿನ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾದ ಅಖಿಲ ಕೊಡವ ಸಮಾಜದ ಸಂಸ್ಥಾಪಕ ಅಧ್ಯಕ್ಷ ಮಾತಂಡ ಮೊಣ್ಣಪ್ಪ (76) ಅವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ವಿರಾಜಪೇಟೆ ಕೊಡವ ಸಮಾಜದ ರುದ್ರಭೂಮಿಯಲ್ಲಿ ನಡೆಯಿತು.

ವಿರಾಜಪೇಟೆ ತಾಲೂಕಿನ ಕೆದಮುಳ್ಳೂರು ಗ್ರಾಮದ ತೋರದಲ್ಲಿರುವ ಮಾತಂಡ ಮೊಣ್ಣಪ್ಪ ಅವರ ನಿವಾಸದಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಮಧ್ಯಾಹ್ನದವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಈ ವೇಳೆ ಕೊಡಗು–ಮೈಸೂರು ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಕೆ.ಜಿ. ಬೋಪಯ್ಯ, ಶಾಸಕ ಎ.ಎಸ್. ಪೊನ್ನಣ್ಣರವರ ಸಹೋದರ ನರೇನ್ ಕಾರ್ಯಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ದರ್ಮಜ ಉತ್ತಪ್ಪ, ಜಿ.ಪಂ. ಮಾಜಿ ಸದಸ್ಯ ಅಚ್ಚಪಂಡ ಮಹೇಶ್, ಬಿಜೆಪಿ ಜಿಲ್ಲಾ ಅಧ್ಯಕ್ಷ ರಾಬಿನ್ ದೇವಯ್ಯ, ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ, ಕಾರ್ಯದರ್ಶಿ ಕೀತಿಯಂಡ ವಿಜಯಕುಮಾರ್, ಯೂತ್ ವಿಂಗ್ ಅಧ್ಯಕ್ಷ ಚಮ್ಮಟ್ಟಿರ ಪ್ರವೀಣ್, ಕೊಡವ ಸಮಾಜದ ಗೌರವ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಕೊಡಗು ಏಕೀಕರಣ ರಂಗ ಹಾಗೂ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಸೇರಿದಂತೆ ಗ್ರಾಮಸ್ಥರು ಹಾಗೂ ಇತರೆಡೆಗಳಿಂದ ಆಗಮಿಸಿದ್ದ ಸಾರ್ವಜನಿಕರು ಅಂತಿಮ ದರ್ಶನ ಪಡೆದರು.

ನಾಳೆಯಿಂದ ಮದ್ಯ ಮಾರಾಟ ನಿಷೇಧ

ಮಡಿಕೇರಿ, ಅ.22– ನಾಡಹಬ್ಬ ದಸರಾ ಆಚರಣೆ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತಾಸಕ್ತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಅ.24 ರ ಬೆಳಗ್ಗೆ 6 ಗಂಟೆಯಿಂದ ಅ.25 ರ ಬೆಳಗ್ಗೆ 10 ಗಂಟೆಯವರೆಗೆ ಮಡಿಕೇರಿ ನಗರ ಠಾಣಾ ಸರಹದ್ದಿನ ಸುತ್ತಮುತ್ತ 10 ಕಿ.ಮೀ ವ್ಯಾಪ್ತಿಯಲ್ಲಿ ಮತ್ತು ಗೋಣಿಕೊಪ್ಪ, ಪೊನ್ನಂಪೇಟೆ ಠಾಣಾ ಸರಹದ್ದಿನ ಸುತ್ತಮುತ್ತ 10 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಮದ್ಯದ ಅಂಗಡಿ, ಬಾರ್, ಹೋಟೆಲ್, ರೆಸ್ಟೋರೆಂಟ್ ಮತ್ತು ಕ್ಲಬ್‌ಗಳಲ್ಲಿ ಎಲ್ಲಾ ವಿಧದ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ವೆಂಕಟರಾಜಾ ಅವರು ಆದೇಶ ಹೊರಡಿಸಿದ್ದಾರೆ.

ನಿರಂತರ ಪರಿಶ್ರಮದಿಂದ ಕಬಡ್ಡಿಯಲ್ಲಿ ಸಾಧನೆ ಸಾಧ್ಯ

'ಮ್ಯಾಟ್ ಕಬ್ಬಡಿ'ಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಭಿಪ್ರಾಯ



ಮಡಿಕೇರಿ, ಅ.22– ಮಡಿಕೇರಿ ದಸರಾ ಜನೋತ್ಸವದ ಭಾಗವಾಗಿ ಕ್ರೀಡಾ ಸಮಿತಿ ವತಿಯಿಂದ ಇಲ್ಲಿನ ಗಾಂಧಿ ಮೈದಾನದಲ್ಲಿ ಆಯೋಜಿತ 'ಮ್ಯಾಟ್ ಕಬಡ್ಡಿ'ಯನ್ನು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ ರಾಜ್ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಸುಂದರರಾಜ್, ದೈಹಿಕ ಸಾಮರ್ಥ್ಯ ಬಯಸುವ ಕಬಡ್ಡಿ ಕ್ರೀಡೆಯಲ್ಲಿ ಸಾಧನೆ ಮಾಡಲು ನಿರಂತರ ಪರಿಶ್ರಮ ಅಗತ್ಯ. ಕಠಿಣ ಪರಿಶ್ರಮದಿಂದ ಏನನ್ನೂ ಸಾಧಿಸಬಹುದಾಗಿದೆ. ದಸರಾ ಕ್ರೀಡಾ ಸಮಿತಿ ಉತ್ಸವದ ಅಂಗವಾಗಿ ವಿವಿಧ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯವೆಂದು ನುಡಿದರು.

ದಸರಾ ಸಾಂಸ್ಕೃತಿಕ ಸಮಿತಿಯ ಸಂಚಾಲಕ ತೆನ್ನೀರ ಮೈನ ಮಾತನಾಡಿ, ಕ್ರೀಡೆಯಲ್ಲಿ ಜಾತಿ, ಮತ ಭೇದಗಳಿಲ್ಲ. ಇಲ್ಲಿ ಎಲ್ಲರೂ ಸಮಾನರಾಗಿದ್ದು, ಆಸಕ್ತಿ ಉತ್ಸಾಹ ಇರುವ ಯಾರೂ ಕೂಡ ಕ್ರೀಡೆಗಳಲ್ಲಿ ಪಾಲ್ಗೊಳ್ಳಬಹುದಾಗಿದೆ. ಈ ಹಿನ್ನೆಲೆ ಪರಸ್ಪರ ಸೌಹಾರ್ದತೆ ಮೂಡಿಸುವ ಕ್ರೀಡಾಂಗಣವಾಗಿ ನಮ್ಮ ಸಮಾಜ ರೂಪುಗೊಳ್ಳಲಿ ಎಂದು ಹಾರೈಸಿದರು.

ಶಕ್ತಿ ದಿನಪತ್ರಿಕೆಯ ಸಂಪಾದಕ ಜಿ. ಚಿದ್ವಿಲಾಸ್ ಮಾತನಾಡಿ, ಜಾತಿ ಮತಗಳ ಎಲ್ಲೆಯನ್ನು ಮೀರಿದ ಕ್ಷೇತ್ರ ಕ್ರೀಡಾ ಕ್ಷೇತ್ರವಾಗಿದೆ. ಇಂತಹ ಕ್ರೀಡಾ ಚಟುವಟಿಕೆಗಳನ್ನು ದಸರಾ ಕ್ರೀಡಾ ಸಮಿತಿ ಆಯೋಜಿಸುವ ಮೂಲಕ ಕ್ರೀಡಾ ಪ್ರತಿಭೆಗಳ ಅನಾವರಣಕ್ಕೆ ವೇದಿಕೆಯನ್ನು ಕಲ್ಪಿಸುತ್ತಿರುವುದು ಶ್ಲಾಘನೀಯವೆಂದು ಮೆಚ್ಚುಗೆಯ ನುಡಿಗಳನ್ನಾಡಿದರು.

ಇದೇ ಸಂದರ್ಭ ಹಿರಿಯ ಕಬಡ್ಡಿಪಟು, ಪ್ರಸ್ತುತ ಕ್ರೀಡಾ ತೀರ್ಪುಗಾರರಾಗಿರುವ ಕೃಷ್ಣ, ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್‌ನ ಮಾಜಿ ಜಂಟಿ ಕಾರ್ಯದರ್ಶಿ ಹೆಚ್.ಎಸ್.ಉತ್ತಪ್ಪ, ಮಡಿಕೇರಿ ದಸರಾ ಕ್ರೀಡಾ ಸಮಿತಿ ಅಧ್ಯಕ್ಷ ಪ್ರದೀಪ್ ಕರ್ಕೇರ, ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ಮಂಟಪ ಸಮಿತಿ ಅಧ್ಯಕ್ಷ ಕೆ.ಆರ್.ರವಿ ಅವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಡಿವೈಎಸ್‌ಪಿ ಜಗದೀಶ್, ಪೊಲೀಸ್ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸತೀಶ್, ಸದಸ್ಯರಾದ ಮನ್ಸೂರ್, ರಘು ಚಂಗಪ್ಪ, ಶಶಿ, ಮಣಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು..

ಪೊಲೀಸ್ ತಂಡಕ್ಕೆ ಗೆಲುವು: ಪಂದ್ಯಾವಳಿಯ ಮೊದಲ ಪಂದ್ಯದಲ್ಲಿ ಕೊಡಗು ಪೊಲೀಸ್ ತಂಡ ಎದುರಾಳಿ ಭಾಗಮಂಡಲದ ಗಜಾನನ ತಂಡವನ್ನು ಪರಾಭವಗೊಳಿಸಿತು. ಪಂದ್ಯಾವಳಿಯಲ್ಲಿ ಒಟ್ಟು 15 ತಂಡಗಳು ಪಾಲ್ಗೊಂಡಿದ್ದವು.

ಆನೆ ದಂತ ಸಾಗಿಸುತ್ತಿದ್ದ ಮೂವರ ಸೆರೆ



ಕೊಳ್ಳೇಗಾಲ, ಅ.22– ಕಾರಿನಲ್ಲಿ ಅಕ್ರಮವಾಗಿ ಆನೆ ದಂತಗಳನ್ನು ಸಾಗಿಸುತ್ತಿದ್ದ ಮೂವರನ್ನು ಪೊಲೀಸ್ ಅರಣ್ಯ ಸಂಚಾರಿ ದಳದವರು ಬಂಧಿಸಿರುವ ಘಟನೆ ಹನೂರು ತಾಲ್ಲೂಕಿನ ಪಿ.ಜಿ.ಪಾಳ್ಯ ಬಳಿ ಜರುಗಿದೆ.

ಚಾಮರಾಜನಗರ ತಾಲೂಕಿನ ಅಂಕನಶೆಟ್ಟಿಪುರ ಗ್ರಾಮದ ಶಿವಮೂರ್ತಿ(57) ತಮಿಳುನಾಡಿನ ತಿರುಪೂರು ಜಿಲ್ಲೆಯ ರವನಪುರಂ ಗ್ರಾಮದ ಶಿವಕುಮಾರ್(44), ಅಂಡಿಪಾಳ್ಯಂ ಚಿನ್ನಕವುಂಡನ್ ಅಂತೋಣಿ(46) ಬಂಧಿತ ಆರೋಪಿಗಳು. ಇವರುಗಳಿಂದ ಆನೆಯ ಎರಡು ದಂತಗಳು ಹಾಗೂ ಸಾಗಾಣಿಕೆಗೆ ಬಳಸಿದ್ದ ಹುಂಡೈ ಕಂಪನಿಯ ಕ್ರೇಟಾ ಕಾರ್ (ಟಿ.ಎನ್.59 ಸಿಆರ್1273) ಜಪ್ತಿ ಮಾಡಲಾಗಿದೆ.

ಇವರುಗಳು ಹನೂರು ತಾಲೂಕಿನ ಪಿ.ಜಿ ಪಾಳ್ಯ – ಕೊಳ್ಳೇಗಾಲ ಅಡ್ಡರಸ್ತೆ ಬಸ್ ನಿಲ್ದಾಣದ ಹತ್ತಿರ ಕಾರಿನಲ್ಲಿ ಆನೆಯ ದಂತಗಳನ್ನು ಸಾಗಾಣಿಕೆ ಮಾಡುತ್ತಿರುವುದರ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸ್ ಅರಣ್ಯ ಸಂಚಾರಿ ದಳದ ಎಸ್‌ಐ ವಿಜಯರಾಜ್ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿ ಆರೋಪಿಗಳನ್ನು ಆನೆ ದಂತಗಳ ಸಮೇತ ಬಂಧಿಸಿದ್ದಾರೆ.

ಈ ಸಂಬಂಧ ಪಟ್ಟಣದ ಎಫ್.ಎಂ.ಎಸ್ ಕಚೇರಿಯಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಬಂಧಿತ ಆರೋಪಿಗಳನ್ನು ನ್ಯಾಯಾಂಗ ಮುಂದೆ ಹಾಜರುಪಡಿಸಿದರು. ದಾಳಿಯಲ್ಲಿ ಎಫ್.ಎಂ.ಎಸ್ ಮುಖ್ಯಪೇದೆಗಳು ಶಂಕರ್.ಕೆ, ಬಸವರಾಜು.ಎಂ, ರಾಮಚಂದ್ರ.ಎಂ, ಸ್ವಾಮಿ.ಪಿ, ಲತಾ.ಕೆ, ಪೇದೆ ಬಸವರಾಜು, ಚಾಲಕ ಪ್ರಭಾಕರ್ ಇದ್ದರು.

ಗಂಡ–ಹೆಂಡಿರ ಜಗಳ ಕೊಲೆಯಲ್ಲಿ ಅಂತ್ಯ; ಅನಾಥವಾದ 10 ತಿಂಗಳ ಮಗು



ಸಂತೇಮರಹಳ್ಳಿ, ಅ.22– ಸಮೀಪದ ಮಂಗಲ ಹೊಸೂರಿನಲ್ಲಿ ಶನಿವಾರ ರಾತ್ರಿ ಗಂಡ ಹೆಂಡತಿಯರ ನಡೆದ ಜಗಳ ಕೊಲೆಯಲ್ಲಿ ಅಂತ್ಯಗೊಂಡಿದ್ದು, 10 ತಿಂಗಳ ಮಗು ಅನಾಥವಾಗಿದೆ.

ಮಂಗಲ ಹೊಸೂರಿನ ನಿವಾಸಿ ರಾಧಿಕಾ (35) ಕೊಲೆಯಾದ ಮಹಿಳೆ. ತಮಿಳುನಾಡು ಮೂಲದವರಾದ ಕಾರ್ತಿಕ್ ಹಾಗೂ ರಾಧಿಕಾ ಗ್ರಾಮದಲ್ಲಿ ಜಮೀನು ಗುತ್ತಿಗೆ ಪಡೆದು ವ್ಯವಸಾಯ ಮಾಡುತ್ತಿದ್ದರು. ಗಂಡ–ಹೆಂಡತಿ ನಡುವೆ ಜಗಳ ಶುರುವಾದಾಗ ಗಂಡ ಪತ್ನಿಗೆ ಆಯುಧದಿಂದ ತಲೆಗೆ ಹೊಡೆದಿದ್ದಾನೆ. ಇದರಿಂದ ತೀವ್ರವಾಗಿ ಗಾಯಗೊಂಡ ರಾಧಿಕ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಡಿವೈಎಸ್ಪಿ ಲಕ್ಷ್ಮಯ್ಯ, ಸರ್ಕಲ್ ಇನ್‌ಸ್ಪೆಕ್ಟರ್ ಬಸವರಾಜು, ಪಿಎಸ್‌ಐಗಳಾದ ಹನುಮಂತ ಉಪ್ಪಾರ ಹಾಗೂ ಟಿ.ಎಂ.ತಾಜುದ್ದೀನ್ ಭೇಟಿ ನೀಡಿ ಪರಿಶೀಲಿಸಿದರು. ಆರೋಪಿ ಕಾರ್ತಿಕ್‌ನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆಯುಧಪೂಜೆ, ವಿಜಯದಶಮಿಗೆ ಭರ್ಜರಿ ವ್ಯಾಪಾರ

ಮಾರುಕಟ್ಟೆಗೆ ಮುಗಿಬಿದ್ದ ಗ್ರಾಹಕರು, ಗಗನಕ್ಕೇರಿದ ಹೂ-ಹಣ್ಣು ಬೆಲೆ



ಚಾಮರಾಜನಗರ, ಅ.22– ಆಯುಧಪೂಜೆ ಹಾಗೂ ವಿಜಯದಶಮಿ ಹಿನ್ನೆಲೆಯಲ್ಲಿ ನಗರದ ಮಾರುಕಟ್ಟೆಯಲ್ಲಿ ಮುನ್ನಾ ದಿನವಾದ ಭಾನುವಾರ ವ್ಯಾಪಾರ–ವಹಿವಾಟು ಚುರುಕಾಗಿತ್ತು. ಪೂಜಾ ಸಾಮಗ್ರಿಗಳು ಹಾಗೂ ವಾಹನಗಳ ಅಲಂಕಾರಿಕ ವಸ್ತುಗಳಿಗೆ ಸಾಕಷ್ಟು ಬೇಡಿಕೆ ಕಂಡು ಬಂತು.

ಆಯುಧಪೂಜೆಗೆ ಅಗತ್ಯವಾದ ಪೂಜೆ ಸಾಮಗ್ರಿ, ಹಣ್ಣು, ಹಂಪಲು, ಬಾಳೆ ದಿಂಡು, ಮಾವಿನ ಸೊಪ್ಪನ್ನು ಖರೀದಿಸಲು ಗ್ರಾಹಕರು ಮುಗಿ ಬಿದ್ದರು. ಹೂವಿಗೆ ಭಾರಿ ಪ್ರಮಾಣದ ಬೇಡಿಕೆ. ಎಲ್ಲೆಂದರಲ್ಲಿ ಹೂವು ಮಾರಾಟ ಕಂಡು ಬಂತು. ವಸತಿ ಪ್ರದೇಶಗಳಲ್ಲೂ ಹೂವಿನ ಮಾರಾಟ ಭರ್ಜರಿಯಾಗಿತ್ತು. ಭಾನುವಾರ ಸಂಜೆಯಿಂದಲೇ ಸೈಕಲ್‌ನಲ್ಲಿ ಬುಟ್ಟಿ ಇಟ್ಟುಕೊಂಡು ಮನೆ–ಮನೆಗೆ ಹೋಗಿ ಹೂವು ಮಾರಾಟ ಹುಡುಗರು ಸಾಕಷ್ಟು ಸಂಖ್ಯೆಯಲ್ಲಿ ಕಂಡು ಬಂದರು. ದೊಡ್ಡಂಗಡಿ ಬೀದಿಯ ಅಂಗಡಿಗಳಲ್ಲಿ ಬಣ್ಣ, ಬಣ್ಣದ ಕಾಗದ, ಅಲಂಕಾರಿಕ ವಸ್ತುಗಳನ್ನು ಹೆಚ್ಚಾಗಿ ಮಾರಾಟಕ್ಕೆ ಇಡಲಾಗಿತ್ತು.

ಗಗನಕ್ಕೇರಿದ ಹಣ್ಣು– ಹೂ ಬೆಲೆ: ಆಯುಧಪೂಜೆಗೆ ಮುಖ್ಯವಾಗಿ ಹೂ– ಹಣ್ಣು ಅಗತ್ಯವಾಗಿದ್ದು, ಹಬ್ಬದ ಅಂಗವಾಗಿ ಬೇಡಿಕೆ ಹೆಚ್ಚು ಕಂಡು ಬಂದಿತ್ತು. ಮಲ್ಲಿಗೆ ಮೀಟರ್‌ಗೆ 120 ರೂ., ಕಾಕಡ 80ರೂ., ಕನಕಾಂಬರ 80ರೂ., ಸೇವಂತಿ 40ರೂ., ಚೆಂಡು 10ರೂ., ಗುಲಾಬಿ ಒಂದಕ್ಕೆ 6ರಿಂದ 10ರೂ.ಗೆ ಮಾರಾಟ ವಾಗುತ್ತಿದೆ. ದೊಡ್ಡ ಚೆಂಡ ಹೂ ಹಾರ 150ರಿಂದ 200ರೂ., ಏಲಕ್ಕಿ ಬಾಳೆಹಣ್ಣು ಕೆ.ಜಿ.ಗೆ 80ರೂ., ಪಚ್ಚ ಬಾಳೆ ಹಣ್ಣು 40ರಿಂದ 50ರೂ., ಕಿತ್ತಳೆ 80ರೂ., ದ್ರಾಕ್ಷಿ 120ರೂ., ಸೇಬು 120ರಿಂದ 140ರೂ. ಧಾರಣೆಯಿತ್ತು.

ಮಾರುಕಟ್ಟೆಯಲ್ಲಿ ತರಕಾರಿ ಬೆಲೆಯಲ್ಲಿ ಏರಿಳಿತ ಕಂಡು ಬಂದಿದ್ದು, ಕ್ಯಾರೇಟ್, ಬೀಟ್‌ರೂಟ್ ಕೆಜಿಗೆ 50ರಿಂದ 60ರೂ., ಈರೇಕಾಯಿ 40ರೂ., ನಿಂಬೆಹಣ್ಣು ಒಂದಕ್ಕೆ 5ರಿಂದ 13ರೂ.ವರೆಗೆ ಮಾರಾಟವಾಗುತ್ತಿದೆ. ಬೂದುಗುಂಬಳ ಕಾಯಿಗೆ ಕೆಜಿಗೆ 20ರಿಂದ 30ರೂ., ಬಾಳೆ ಕಂದ ಜೋಡಿ 40ರೂ., ಮಾವಿನ ಸೊಪ್ಪು ಒಂದು ಕಟ್ಟಿಗೆ 10ರೂ., ಮಾರಾಟವಾಗುತ್ತಿದೆ.

ಅಲಂಕಾರಿಕ ವಸ್ತುಗಳಿಗೆ ಡಿಮ್ಯಾಂಡ್: ಆಯುಧಪೂಜೆ ಅಂಗವಾಗಿ ನಗರದ ಮಾರುಕಟ್ಟೆಯಲ್ಲಿ ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಕಂಡು ಬಂದಿತ್ತು. ಬಣ್ಣ–ಬಣ್ಣದ ಪ್ಲಾಸ್ಟಿಕ್ ಹೂ ಸೇರಿದಂತೆ ಅಂಗಡಿಗಳು ಹಾಗೂ ವಾಹನಗಳಿಗೆ ಅಲಂಕಾರಿಸುವ ವಸ್ತುಗಳನ್ನು ಖರೀದಿಸಲು ಗ್ರಾಹಕರು ಮುಗ್ಗಿಬಿದ್ದಿದ್ದರು. ಸೋಮವಾರ ಆಯುಧಪೂಜೆ ಹಾಗೂ ಮಂಗಳವಾರವೂ ವಿಜಯ ದಶಮಿ ಹಿನ್ನೆಲೆಯಲ್ಲಿ ಸರ್ಕಾರಿ ರಜೆ ಇರುವುದರಿಂದ ಭಾನುವಾರ ಸಂಜೆಯಿಂದಲೇ ಹಬ್ಬದ ಸಡಗರ, ಸಂಭ್ರಮ ಕಂಡು ಬಂತು.

ಹೆಚ್ಚಿನ ಮಂದಿ ಮಾರುಕಟ್ಟೆಯಲ್ಲಿ ಅಡ್ಡಾಡಿ ಪೂಜಾ ಸಾಮಗ್ರಿಗಳನ್ನು ಖರೀದಿಸುವಲ್ಲಿ ನಿರತರಾಗಿದ್ದರು. ಅಂಗಡಿ ಬೀದಿಯಲ್ಲದೇ ಬಿ. ರಾಚಯ್ಯ ಜೋಡಿ ರಸ್ತೆ, ಹೌಸಿಂಗ್ ಬೋರ್ಡ್ ಕಾಲೋನಿಗೆ ತೆರಳುವ ಮಾರ್ಗದಲ್ಲೂ ಬಾಳೆ ದಿಂಡು, ಮಾವಿನ ಸೊಪ್ಪು, ನಿಂಬೆ ಹಣ್ಣಿನ ಹಾಗೂ ಹೂವು ಮಾರಾಟ ಕಂಡು ಬಂತು.

ಇನ್ನು ಅಲ್ಲಲ್ಲಿ ಅಂಗಡಿಗಳನ್ನು ಸ್ವಚ್ಛಗೊಳಿಸುವ ದೃಶ್ಯ ಸಾಮಾನ್ಯವಾಗಿತ್ತು. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದರೂ ಅದರ ಬಿಸಿ ಹಬ್ಬದ ಸಡಗರದ ಮುಂದೆ ಗೌಣವಾಯಿತು. ಸಾಕಷ್ಟು ಅಂಗಡಿಗಳಲ್ಲಿ ಇಂದೇ ಆಯುಧಪೂಜೆ ಕಾರ್ಯಗಳು ನಡೆದವು. ದ್ವಿಚಕ್ರವಾಹನ ಸೇರಿದಂತೆ ಇತರೆ ವಾಹನಗನ್ನು ತೊಳೆಯುವ ವಾಟರ್ ಸರ್ವೀಸ್ ಕೇಂದ್ರಗಳಿಗೂ ಬೇಡಿಕೆ ಕಂಡು ಬಂತು. ಒಟ್ಟಾರೆ ನಗರದಲ್ಲಿ ಅವಳಿ ಹಬ್ಬಗಳ ಸಂಭ್ರಮ ಕಳೆಗಟ್ಟಿತ್ತು.



ಕಾವೇರಿ: ಚಾಕಲೇಟ್ ಪ್ರದರ್ಶಿಸಿ ವಿನೂತನ ಪ್ರತಿಭಟನೆ



ಚಾಮರಾಜನಗರ, ಅ.22– ರಾಜ್ಯ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ಮುಂದುವರೆದಿದ್ದು, ಇಂದು ಕೂಡ ಚಾಕಲೇಟ್ ಪ್ರದರ್ಶಿಸಿ ಸರ್ಕಾರಗಳು ಮೋಸ ಮಾಡಿವೆ ಎಂದು ಆರೋಪಿಸಿ ವಿನೂತನ ಪ್ರತಿಭಟನೆ ನಡೆಸಲಾಯಿತು

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಚಾಕಲೇಟ್ ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆತಡೆ ನಡೆಸಿ, ಕೇಂದ್ರ ಸರ್ಕಾರ, ತಮಿಳುನಾಡು ಸರ್ಕಾರ, ಕರ್ನಾಟಕ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ತಮಿಳುನಾಡು ಒತ್ತಡಕ್ಕೆ ಮಣಿದು, ಕಾವೇರಿ ನ್ಯಾಯಾಧೀಕರಣ ತಮಿಳುನಾಡಿನ ಏಜೆಂಟ್ ರೀತಿ ವರ್ತನೆ ಮಾಡುತ್ತಿದೆ. ನಮ್ಮ ನೀರಿಗೆ ಅತ್ಯಂತ ತೊಂದರೆ ಉಂಟು ಮಾಡುತ್ತಿದೆ ಇದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ಸತತವಾಗಿ ಕಳೆದ 39 ದಿನಗಳಿಂದ ವಿನೂತನ ಪ್ರತಿಭಟನೆ ನಡೆಸಿಕೊಂಡು ಬಂದಿದೆ ಎಂದರು. ಪ್ರತಿಭಟನೆಯಲ್ಲಿ ಶಾ.ಮುರಳಿ,ಚಾ.ವೆಂ.ರಾಜ್ ಗೋಪಾಲ್, ಚಾ.ಹ.ರಾಮು,ರಾಚಪ್ಪ,ಲಿಂಗರಾಜು, ಹೆಗ್ಗೋಠಾರ ಶಿವಸ್ವಾಮಿ, ಆರಾಧ್ಯ, ಪ್ರಕಾಶ್ ಮೂಡ್ಲುಪುರ ಭಾಗವಹಿಸಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆಗೆ ಶಾಸಕರಿಂದ ಶುಭ ಕೋರಿಕೆ



ಚಾಮರಾಜನಗರ, ಅ. 22– ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕೈಗೊಂಡಿರುವ 2023–24ನೇ ಸಾಲಿನ ಮಹಾರಾಷ್ಟ್ರದ ನಾಗಪುರದಲ್ಲಿನ ಡಾ.ಬಿ.ಆರ್.ಅಂಬೇಡ್ಕರ್‌ರವರ ದೀಕ್ಷಾಭೂಮಿ ಯಾತ್ರೆಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ, ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾಲಾರ್ಪಣೆ ಮಾಡಿ ಬೀಳ್ಕೊಟ್ಟು ಶುಭ ಕೋರಿದರು.

ಬಳಿಕ ಮಾತನಾಡಿದ ಶಾಸಕರು, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯು ಡಾ.ಬಿ.ಆರ್. ಅಂಬೇಡ್ಕರ್ ಅವರು ದೀಕ್ಷಾ ಪಡೆದಂತಹ ಮಹಾರಾಷ್ಟ್ರದ ನಾಗಪುರದ ದೀಕ್ಷಾ ಭೂಮಿ ಯಾತ್ರೆ ಹಮ್ಮಿಕೊಂಡಿದ್ದು ಸರ್ಕಾರ, ಸಚಿವರು 356 ಯಾತ್ರಿಗಳಿಗೆ ಅವಕಾಶ ಕಲ್ಪಿಸಿದ್ದು, ಎಲ್ಲಾ ಯಾತ್ರಿಗಳು ಕೆಎಸ್‌ಆರ್‌ಟಿಸಿ ಐರಾವತ್ ಬಸ್ ನಲ್ಲಿ ತೆರಳುತ್ತಿರುವ ಎಲ್ಲಾ ಯಾತ್ರಿಗಳಿಗೆ ಶುಭವಾಗಲಿ. ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರ ಚಿಂತನೆಗಳನ್ನು ಅಳವಡಿಸಿಕೊಂಡು ಅವರ ಹಾದಿಯಲ್ಲಿ ಸಾಗಲಿ ಎಂದರು.

ಇದಕ್ಕೂ ಮೊದಲು ಯಾತ್ರಿಗಳು ಅಂಬೇಡ್ಕರ್ ಪುತ್ಥಳಿ ಬಳಿಯಲ್ಲಿ ಸಾಮೂಹಿಕ ಬುದ್ಧ ವಂದನೆ ಸಲ್ಲಿಸಿ ಜಿಲ್ಲಾಡಳಿತ ಭವನದಿಂದ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಭುವನೇಶ್ವರಿ ವೃತ್ತದ ಕಡೆಯಿಂದ ವಾಪಸ್ ಜಿಲ್ಲಾಡಳಿತ ಭವನದವರೆಗೆ ಮೆರವಣಿಗೆ ನಡೆಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ, ನಗರಸಭಾ ಸದಸ್ಯರಾದ ರಾಜಪ್ಪ, ಎಂ.ಮಹೇಶ್, ದಲಿತ ಸಂಘರ್ಷ ಸಮಿತಿ ಡಿ.ಜಿ. ಸಾಗರ್ ಬಣದ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ, ಜಿಲ್ಲಾ ಸಂಚಾಲಕ ಕೆ.ಎಂ.ನಾಗರಾಜು, ಸಿ.ಎಂ. ಕೃಷ್ಣಮೂರ್ತಿ, ಚಿಕ್ಕಮಹದೇವು, ಕಾಗಲವಾಡಿಚಂದ್ರು ಇತರರು ಹಾಜರಿದ್ದರು.

ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಂ ಹೆಬ್ಬಸೂರು ಶಾಖಾ ಮಠದಲ್ಲಿ ಮಹಾಲಯ ಅಮಾವಾಸ್ಯೆ, ಶರನ್ನವರಾತ್ರಿ ಉತ್ಸವ ಆಚರಣೆ

ಚಾಮರಾಜನಗರ, ಅ.22– ಶೃಂಗೇರಿಯ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ, ಚಾಮರಾಜನಗರ ತಾಲೂಕು ಹೆಬ್ಬಸೂರು ಶಾಖಾ ಮಠದಲ್ಲಿ ಅ.14 ರಿಂದ 22ರವರೆಗೆ ಮಹಾಲಯ ಅಮಾವಾಸ್ಯೆ ಹಾಗೂ ಶರನ್ನವರಾತ್ರಿ ಉತ್ಸವವು ವೈಭವದಿಂದ ನಡೆಯಿತು.

ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳು ಹಾಗೂ ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಗಳ ಆದೇಶಾನುಗ್ರಹದಂತೆ ಹೆಬ್ಬಸೂರು ಮಠದಲ್ಲಿ ಪ್ರತಿ ದಿನ ಉತ್ಸವಗಳು ಅತ್ಯಂತ ವೈಭವದಿಂದ ನಡೆದವು. ಮೊದಲ ದಿನ ಶ್ರೀ ಶಾರದಾಂಬೆಗೆ ಮಹಾಭಿಷೇಕ ನಡೆಯಿತು. ಅ.15ರಂದು ಆಶ್ವಯುಜ ಶುದ್ಧ ಪಾಡ್ಯ ಅಂಗವಾಗಿ ಮಹಾಗಣಪತಿ ಹೋಮ, ಲಕ್ಷಾರ್ಚನೆ, ಮಹಾಮಂಗಳಾರತಿ, ಅನ್ನಸಂತರ್ಪಣೆ ನಡೆಯಿತು.

ಪ್ರತಿ ದಿನವೂ ದುರ್ಗಾ ಸಪ್ತಶತಿ ಪಾರಾಯಣ ನಡೆಯಿತು. ಇದರೊಂದಿಗೆ ಶ್ರೀ ಶಾರದಾ ಮಹಿಳಾ ಸಂಘದವರಿಂದ ನಡೆದ ಭಜನೆ ಕಾರ್ಯಕ್ರಮ ಭಕ್ತರ ಮನ ಗೆದ್ದಿತು. ಅ.21ರಂದು ಸರಸ್ವತಿ ಹೋಮ, ಅ.22ರಂದು ದುರ್ಗಾ ಹೋಮ, ಮಹಾಮಂಗಳಾರತಿ, ಅನ್ನಸಂತರ್ಪಣೆ ಕಾರ್ಯಕ್ರಮಗಳು ಜರುಗಿದವು. ಅ.24ರಂದು ಬೆಳಗ್ಗೆ ನವಚಂಡಿಕಾ ಯಾಗ ನಡೆಯಲಿದೆ.

ಅ.28ರಂದು ಶ್ರೀರಾಮ ದೇವರಿಗೆ ವಿಶೇಷ ಪೂಜೆ ನಡೆಯಲಿದೆ. ಪ್ರತಿ ದಿನದ ಪೂಜೆಯಲ್ಲಿ ಮಠದ ಪದಾಧಿಕಾರಿಗಳು, ಭಕ್ತಾದಿಗಳು ಮತ್ತು ವಿಪ್ರ ಬಾಂಧವರು ಸೇರಿದಂತೆ ಸಾವಿರಾರು ಮಂದಿ ಪಾಲ್ಗೊಂಡಿದ್ದು ವಿಶೇಷ.

ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಲಿ ಎಂದು ಚಾಮುಂಡೇಶ್ವರಿಯಲ್ಲಿ ಪ್ರಾರ್ಥನೆ

ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತಿ ದೇವಿಯ ದರ್ಶನ ಪಡೆದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ



ಮೈಸೂರು,ಅ.22(ಎಂಕೆ)– ಮುಂದಿನ ದಸರಾದ ಹೊತ್ತಿಗೆ ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿ ಆಗಬೇಕು ಎಂದು ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥನೆ ಮಾಡುತ್ತೇನೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನಾಡಹಬ್ಬ ದಸರಾ ಮಹೋತ್ಸವ ಹಿನ್ನೆಲೆ ಭಾನುವಾರ ಸಂಜೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಅವರು, ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತಿ ಶಕ್ತಿ ದೇವತೆ ಚಾಮುಂಡೇಶ್ವರಿ ದರ್ಶನ ಪಡೆದರು. ಇದಕ್ಕೂ ಮುನ್ನ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪ್ರತಿ ವರ್ಷ ಉಪವಾಸವಿದ್ದು ಮೆಟ್ಟಿಲು ಹತ್ತಿ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವಂತೆ ಈ ಬಾರಿಯೂ ದೇವಿಯ ದರ್ಶನಕ್ಕೆ ಬಂದಿದ್ದೇನೆ. ಈ ಬಾರಿ ರಾಜ್ಯದಲ್ಲಿ ಬರಗಾಲ ಎದುರಾಗಿದೆ. ಮಳೆ ಬಂದು ಎಲ್ಲಾ ಜಲಾಶಯಗಳು ಭರ್ತಿಯಾಗಬೇಕು ಹಾಗೂ ಮುಂದಿನ ದಸರಾದ ಹೊತ್ತಿಗೆ ಮೋದಿ ಅವರು ಮೂರನೇ ಬಾರಿ ಪ್ರಧಾನಿ ಆಗಬೇಕು ಎಂದು ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥನೆ ಮಾಡುತ್ತೇನೆ ಎಂದು ತಿಳಿಸಿದರು.

ರಾಜಕೀಯ ಇದೆ: ಪ್ರೊ.ಭಗವಾನ್ ಒಕ್ಕಲಿಗರ ಬಗ್ಗೆ ಯಾಕೆ ಮಾತಾಡುತ್ತಾ ಇದ್ದಾರೋ ಗೊತ್ತಿಲ್ಲ. ಅವರ ಮಾತಿನ ಹಿಂದೆ ರಾಜಕೀಯ ಇದೆ. ಯಾರದ್ದೋ ಕುಮ್ಮಕ್ಕಿನಿಂದಲೇ ಮಾತನಾಡುತ್ತಾ ಇದ್ದಾರೆ ಎಂದು ಕಿಡಿಕಾರಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ ಇದ್ದರು.

ರಾಜ್ಯ ಸರ್ಕಾರ ವಿಕೃತಿ ಮಾಡುತ್ತಿದೆ...!

ಮೈಸೂರು ದಸರಾ ಮಹೋತ್ಸವಕ್ಕೆ ತನ್ನದೇ ಇತಿಹಾಸವಿದೆ. ಆದರೆ, ರಾಜ್ಯ ಸರ್ಕಾರ ಈ ಬಾರಿ ವಿಕೃತಿಯನ್ನು ಮಾಡುತ್ತಿದೆ. ಮಹಿಷ ದಸರಾ ಮಾಡಲು ಸರ್ಕಾರ ಬಿಟ್ಟಿದೆ. ದೀಪಾಲಂಕಾರದಲ್ಲಿ ಚಾಮುಂಡೇಶ್ವರಿಯ ಚಿತ್ರ ಮಾತ್ರ ಇದ್ದು, ಮಹಿಷನನ್ನು ಕೊಲ್ಲುವ ದೃಶ್ಯವಿಲ್ಲ. ಮಹಿಷ ಮರ್ದಿನಿಗೆ ಈ ಮೂಲಕ ರಾಜ್ಯ ಸರ್ಕಾರ ಅವಮಾನ ಮಾಡುತ್ತಿದೆ. ಸಿದ್ದರಾಮಯ್ಯ ಸರ್ಕಾರ ಮೈಸೂರಿನಲ್ಲಿ ಜಾತಿಯ ವಿಷ ಬೀಜ ಬಿತ್ತುತ್ತಿದೆ. ಚಾಮುಂಡೇಶ್ವರಿಗೆ ರಾಜ್ಯ ಸರ್ಕಾರ ಅವಮಾನ ಮಾಡಿದೆ. ರಾಜ್ಯದಲ್ಲಿ ಮಹಿಷ ದಸರಾ ಮಾಡಲು ಸರ್ಕಾರವೇ ಕುಮ್ಮಕ್ಕು ಕೊಡುತ್ತಿದ್ದು, ಒಂದು ಧರ್ಮದ ಪರವಾಗಿ ಸರ್ಕಾರ ಇದೆ. ಇದರಿಂದಲೇ ರಾಜ್ಯದ ಕೆಲವೆಡೆ ಮಹಿಷ ದಸರಾ ಆಚರಣೆ ಮಾಡಲು ಕೆಲವರು ಮುಂದಾಗಿದ್ದಾರೆ. **– ಶೋಭಾ ಕರಂದ್ಲಾಜೆ, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಖಾತೆ ಸಚಿವೆ**

ಪ್ರೇಕ್ಷಕರಿಗೆ ಮುದ ನೀಡಿದ ಸಾಂಸ್ಕೃತಿಕ ಕಾರ್ಯಕ್ರಮಗಳು



ಮೈಸೂರು, ಅ.22(ಎಂಕೆ)– ಆಯುಧ ಪೂಜೆ ಖರೀದಿ ಭರಾಟೆಯ ನಡುವೆ ಜಾನಪದ ಗಾಯನ, ನೃತ್ಯ ಹಾಗೂ ಸ್ಯಾಕ್ಸೊಫೋನ್ ವಾದನದ ಇಂಪು ಕೇಳುಗರ ಮನಸ್ಸಿಗೆ ಮುದ ನೀಡಿತು.

ನಾಡಹಬ್ಬ ಮೈಸೂರು ದಸರಾ ಹಿನ್ನೆಲೆ ವಿವಿಧ ವೇದಿಕೆಗಳಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜನ ಜಂಗುಳಿಯ ನಡುವೆ ಜಾನಪದ ಕಲಾ ಪ್ರಕಾರಗಳ ಸಂಗೀತ–ನಿನಾದ ಗಮನ ಸೆಳೆಯಿತು. ಚಿಕ್ಕಗಡಿಯಾರ ಸಾಂಸ್ಕೃತಿಕ ವೇದಿಕೆಯಲ್ಲಿ ಹರಿಯಾಣ ಕಲಾವಿದರ ಜಾನಪದ ನೃತ್ಯ ಎಲ್ಲರ ಆಕರ್ಷಣೆಯಾಯಿತು. ಕಲಾವಿದ ರೋಹಿತ್ ಗುಲ್ ನೇತೃತ್ವದ ತಂಡದ ಜಾನಪದ ನೃತ್ಯ ವಿಶೇಷವೆನಿಸಿತು. ಇದೇ ವೇಳೆ ಮಂಡ್ಯದ ಡಿ.ವಿ. ರುದ್ರಸ್ವಾಮಿ ಮತ್ತು ತಂಡದ ವೀರಭದ್ರ ಕುಣಿತ, ಚನ್ನರಾಯಪಟ್ಟಣದ ಅನಿತಾ ಮತ್ತು ತಂಡದ ಕೋಲಾಟ, ಹುಯಿಲಾಳು ಶ್ರೀ ಮಲ್ಲೇಶ್ವರ ವೀರಮಕ್ಕಳ ಕಲಾ ತಂಡದ ವೀರಮಕ್ಕಳ ಕುಣಿತ, ಮಹದೇವಮ್ಮ ಮತ್ತು ತಂಡ ಹಾಗೂ ಸಪ್ತಸ್ವರ ಸಾಂಸ್ಕೃತಿಕ ಟ್ರಸ್ಟ್‌ನ ಜಾನಪದ ಗೀತೆಗಳ ಗಾಯನ ಕಲಾಭಿಮಾನಿಗಳಿಗೆ ಉಲ್ಲಾಸ ನೀಡಿತು.

ಪುರಭವನ: ರಂಗಭೂಮಿ ಕಲಾಪ್ರೇಮಿಗಳ ಆಕರ್ಷಣೆಯಾದ ಪೌರಾಣಿಕ ನಾಟಕಗಳು ಪುರಭವನ ಸಾಂಸ್ಕೃತಿಕ ವೇದಿಕೆಯಲ್ಲಿ ಪ್ರಸ್ತುತವಾದವು. ಮೈಸೂರಿನ ಹೆಚ್.ಎಸ್.ಶೇಷಾಚಲ ಮತ್ತು ತಂಡದಿಂದ 'ಮುದುಕನ ಮದುವೆ' ಹಾಸ್ಯ ನಾಟಕ, ಹಾಸನದ ಶ್ರೀ ಶಾರದ ಕಲಾಸಂಘದಿಂದ 'ಕುರುಕ್ಷೇತ್ರ' ಪೌರಾಣಿಕ ನಾಟಕ ಹಾಗೂ ಏಕಲವ್ಯ ಸಾಂಸ್ಕೃತಿಕ ಕಲಾ ಸಂಘದ ವತಿಯಿಂ 'ಮರಳಿ ಪಡೆದ ಮಾಂಗಲ್ಯ' ಸಾಮಾಜಿಕ ನಾಟಕ ಪ್ರದರ್ಶನ ಅಚ್ಚುಕಟ್ಟಾಗಿ ಮೂಡಿಬಂದಿತು.



ಸ್ಯಾಕ್ಸೋಫೋನ್ ಇಂಪು: ಜಗನ್ಮೋಹನ ಅರಮನೆ ವೇದಿಕೆಯಲ್ಲಿ ಎಂ.ಟಿ. ವಿದ್ಯಾಧರ ಮಾಣಿಕ್ಯ ಮತ್ತು ತಂಡದ ಸ್ಯಾಕ್ಸೋಫೋನ್ ವಾದನ ಕೇಳುಗರ ಕಿವಿಗೆ ಇಂಪು ನೀಡಿತು. ಶಾಸ್ತ್ರೀಯ ಸಂಗೀತದ ಹಾಡುಗಳನ್ನು ಸುಮಧುರವಾಗಿ ನುಡಿಸಿದ ಅವರು, ನೆರೆದಿದ್ದ ಪ್ರೇಕ್ಷಕರಿಂದ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.

ಹಾಗೆಯೇ ಹೆಚ್.ಡಿ.ಕೋಟೆಯ ಜಿ.ಡಿ. ರಾಜಗೋಪಾಲ್ ಮತ್ತು ತಂಡದ ಸುಗಮ ಸಂಗೀತ, ಬಿದನೂರಿನ ಪಂ.ಭೀಮಾ ಶಂಕರ ಅವರ ಸಪ್ತ ತಬಲ ವಾದನ, ಬೆಂಗಳೂರಿನ ಅಶ್ವಿನಿ ಸುರೇಶ್ ಅವರ ಮನಮೋಹಕ ಭರತನಾಟ್ಯ ಪ್ರದರ್ಶನ ಹಾಗೂ ಹೇಮಲತಾ ಕುಮಾರಸ್ವಾಮಿ ಅವರ ಶಾಸ್ತ್ರೀಯ ಸಂಗೀತ ಮುಸ್ಸಂಜೆ ವೇಳೆಯಲ್ಲಿ ಅಭಿಮಾನಿಗಳನ್ನು ಪುಳಕಗೊಳಿಸಿತು. ವೇದಿಕೆಯಲ್ಲಿ ಕಲಾರಸಿಕರನ್ನು ರಂಜಿಸಿದ ಕಲಾವಿದರಿಗೆ ಸಾಂಸ್ಕೃತಿಕ ಉಪ ಸಮಿತಿ ಉಪಾಧ್ಯಕ್ಷ ಎನ್.ಆರ್.ನಾಗೇಶ್ ಇನ್ನಿತರರು ನೆನಪಿನ ಸ್ಮರಣಿಕೆ ನೀಡಿ ಅಭಿನಂದಿಸಿದರು.

ಇತಿಹಾಸದ ಪ್ರಕಾರ ಡಾ.ಬಿ.ಆರ್.ಅಂಬೇಡ್ಕರ್ ಜ್ಞಾನದ ಸಂಕೇತ: ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ



ಮೈಸೂರು, ಅ.22(ಎಸ್‌ಪಿಎನ್)– ಪುರಾಣದ ಪ್ರಕಾರ ಸರಸ್ವತಿ ಜ್ಞಾನದ ದೇವತೆ,ಬದಲಾಗಿ ಇತಿಹಾಸದ ಪ್ರಕಾರ ಜಗತ್ತಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಜ್ಞಾನದ ಸಂಕೇತ ಎಂದು ಜನರು ಭಾವಿಸಿದ್ದಾರೆ ಎಂದು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಓವೆಲ್ ಮೈದಾನದಲ್ಲಿ ಕರ್ನಾಟಕ ಜಾನಪದ, ಸಾಹಿತ್ಯ, ಯಕ್ಷಗಾನ, ನಾಟಕ, ಸಂಗೀತ, ನೃತ್ಯ, ಶಿಲ್ಪಕಲಾ ಹಾಗೂ ಲಲಿತಾಕಲಾ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ದಸರಾ ಮಹೋತ್ಸವ–2023ರ ಎಂಟನೇ ದಿನದ 'ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ'ದಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾನು ಚಿಕ್ಕವನಿದ್ದಾಗ ದಸರಾ ಸಂದರ್ಭದಲ್ಲಿ ಪುಸ್ತಕಗಳನ್ನು ಜೋಡಿಸಿ, ಪುರಾಣದ ಪ್ರಕಾರ ಸರಸ್ವತಿಯನ್ನು ಪೂಜಿಸುತ್ತೇವೆ ಎಂದ ಅವರು, ಲೇಖಕರನ್ನು ಸರಸ್ವತಿ ಪುತ್ರರು ಎಂದು ಕರೆಯುತ್ತಾರೆ. ಈ ರೀತಿ ಕರೆಯುವುದು ನನ್ನ ಪ್ರಕಾರ ತಪ್ಪು ಎಂದು ಭಾವಿಸುತ್ತೇನೆ. ಏಕೆಂದರೆ, ಲೇಖಕ ಒಬ್ಬನೇ ಸರಸ್ವತಿ ಪುತ್ರನಾಗಲೂ ಸಾಧ್ಯವಿಲ್ಲ. ಈ ಸಾಲಿನಲ್ಲಿ ಪ್ರಕಾಶಕ, ಮುದ್ರಕರೂ ಟ್ಯಾಗ್ ಲೈನ್‌ನಲ್ಲಿ ಬರುತ್ತಾರೆ ಎಂದು ತಿಳಿಸಿದರು.

ಓರ್ವ ಲೇಖಕ ತಾನು ಬರೆದ ಪುಸ್ತಕವನ್ನು ಮುದ್ರಿಸಿ, ಗೂಡಿನಲ್ಲಿಟ್ಟರೆ, ಏನು ಪ್ರಯೋಜನ. ಹಾಗಾಗಿ ಒಂದು ಪುಸ್ತಕವನ್ನು ಲೇಖಕ ಬರೆದ ಮೇಲೆ, ಅದನ್ನು ಅದಕ್ಕೆ ತಕ್ಕಂತೆ ಮುದ್ರಿಸಿ, ಒಂದು ಸುಂದರ ಪುಸ್ತಕವನ್ನು ಓದುಗನಿಗೆ ತಲುಪಿಸುವವರೂ ಸರಸ್ವತಿ ಪುತ್ರ ಟ್ಯಾಗ್ ಲೈನೊಳಗೆ ಬರುತ್ತಾರೆ ಎಂದು ಸಮರ್ಥಿಸಿದರು.

ಲೇಖಕರು ತಮಗೆ ಆರು ಬೆರಳು ಎಂದು ಭಾವಿಸುತ್ತಾರೆ ಏಕೆಂದರೆ, ಲೇಖನಿ ಸೇರಿದರೆ ಲೇಖಕ ಆರು ಬೆರಳು ಅಂದುಕೊಳ್ಳುತ್ತಾನೆ. ಮತ್ತೊಬ್ಬರು 5 ಬೆರಳು ಇದೆ ಎಂದುಕೊಳ್ಳುತ್ತಾರೆ. ಇನ್ನು 6 ಬೆರಳಿನ ಲೇಖಕರು ಎಂದರೆ, ತಾವು ಬರೆದ ಪುಸ್ತಕಗಳು ಮುಂದೆ ಸಾರ್ವತ್ರಿಕವಾಗಿರಬೇಕು ಅಂದು ಕೊಳ್ಳುವವರು. ಇನ್ನು 5ನೇ ಬೆರಳಿನ ಸಾಲಿಗೆ ಸೇರುವವರು ವರ್ತಮಾನಕ್ಕೆ ಸಾಕು ಎನ್ನುತ್ತಾರೆ. 4 ಬೆರಳಿನ ಲೇಖಕರು ಎಂದರೆ, ಹಿಂದಕ್ಕೆ ಸರಿಯುವವರು ಎಂಬ ಭಾವನೆ ಸಮಾಜದಲ್ಲಿದೆ ಎಂದರು.

ನಾನು ಮೊದಮೊದಲು ತನ್ನದೇ ಆದ 'ಶೈಲಾ' ಹೆಸರಿನ ಪ್ರಕಾಶನ ಹೊಂದಿದ್ದು, ಈ ಪ್ರಕಾಶನದಿಂದ ಸುಮಾರು 22 ಪುಸ್ತಕಗಳನ್ನು ಪ್ರಕಟ ಮಾಡಿದ್ದೆ. ನಾನು ಎಲ್ಲೇ ಭಾಷಣಕ್ಕೆ ಹೋಗುವಾಗ ಈ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಉಚಿತವಾಗಿ ಹಂಚುತ್ತಿದ್ದೆ. ಆ ಸಂದರ್ಭದಲ್ಲಿ ಓದುಗರು ಪುಸ್ತಕದ ಬೆಲೆಗಿಂತ ಹೆಚ್ಚು ಹಣ ಜೇಬಿಗಿಸಿದ ಪ್ರಸಂಗವನ್ನು ಎಳೆಎಳೆಯಾಗಿ ವಿವರಿಸಿದರಲ್ಲದೆ, ಕನ್ನಡಿಗರು ಸ್ವಾಭಿಮಾನಿಗಳು, ಪುಸ್ತಕ ಪ್ರೇಮಿಗಳು ಎಂದು ಕೊಂಡಾಡಿದರು.

ನಮ್ಮ ಮಕ್ಕಳಿಗೆ ವಿಜ್ಞಾನ ಪಠ್ಯವನ್ನು ಮಾತೃಭಾಷೆಯಲ್ಲಿ ಕಲಿಸದ ಹೊರತು ವಿಜ್ಞಾನ ನಮ್ಮದಾಗುವುದಿಲ್ಲ. ದೇಶ ಪ್ರಗತಿ ಹೊಂದುವುದಿಲ್ಲ. ಏಕೆಂದರೆ, ವಿಜ್ಞಾನದ ಎಷ್ಟೋ ಪದಗಳನ್ನು ಮಾತೃಭಾಷೆಯಲ್ಲಿ ಉಚ್ಛರಿಸಿದಾಗ ಮಾತ್ರ ಅದರ ಕ್ರಿಯೆ ವಿದ್ಯಾರ್ಥಿಗೆ ಅರ್ಥವಾಗುತ್ತದೆ. ಇದು ನನ್ನ ಅನುಭವದ ಮಾತು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಪ್ರಯತ್ನ ಆಗದಿರುವುದು ಬೇಸರದ ಸಂಗತಿ. **–ಜಗನ್ನಾಥ್, ಇಸ್ರೋ ನಿವೃತ್ತ ವಿಜ್ಞಾನಿ**

ಇತ್ತೀಚೆಗೆ ಸೋಷಿಯಲ್ ಮಿಡಿಯಾಗಳಲ್ಲಿ ವೀಡಿಯೋ ಬಂದಿತ್ತು 'ಬಾ ಗುರು ಪುಸ್ತಕ ಕೊಂಡುಕೊ' ಈ ವೀಡಿಯೋ ಕುರಿತು ತುಂಬಾ ಆಕರ್ಷಣೆಗೊಳಗಾದ ಪ್ರಸಂಗವನ್ನು ವಿವರಿಸಿದರು. ನಂತರ ಪುಸ್ತಕ ಮೇಳದ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ, ತಮಗಿಷ್ಟದ ಪುಸ್ತಕಗಳನ್ನು ತಿರುವಿ ಹಾಕಿದರು.

ದಸರಾ ಸಮ್ಮೇಳನ ನಡೆಯುವ ಸಂದರ್ಭದಲ್ಲಿ ಪುಸ್ತಕ ಮೇಳ ಆಯೋಜನೆಗೊಂಡಿದೆ. ಅದೇ ವೇಳೆ ಜರ್ಮನಿಯಲ್ಲೂ ಪುಸ್ತಕ ಮೇಳ ಆಯೋಜನೆಗೊಂಡಿರುವ ಕುರಿತು ಮಾಧ್ಯಮಗಳಲ್ಲಿ ಪ್ರಕಟಣೆಗೊಂಡಿದೆ. ಸಂವಹನ ಪ್ರಕಾಶನದ ಲೋಕಪ್ಪ ಅವರು ಪ್ರಕಾಶಕರನ್ನು ಒಗ್ಗೂಡಿಸಿ, ಜರ್ಮನಿಯಲ್ಲಿ ನಡೆಯುವ ಬೃಹತ್ ಪುಸ್ತಕ ಮೇಳಕ್ಕೆ ಕರೆದುಕೊಂಡು ಹೋಗಲು ಸಂಘಟಿಸುವಂತೆ ಸಂಸ್ಕೃತಿ ಪ್ರಕಾಶನದ ಸಂಸ್ಕೃತಿ ಸುಬ್ರಹ್ಮಣ್ಯ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಾನಪದ ಗಾಯಕ ಕನ್ನಡ ಗೀತೆಗಳನ್ನು ಹಾಡಿ, ಎಲ್ಲರ ಮನಸೆಳೆದರು.

ಮತ್ತೊಂದು ಚುನಾವಣಾ ಟಿಕೆಟ್ ವಂಚನೆ ಪ್ರಕರಣ ಬೆಳಕಿಗೆ: 2.55 ಕೋಟಿ ರೂ. ಪಂಗನಾಮ

ಬೆಂಗಳೂರು: ಹಿಂದೂಪರ ಸಂಘಟನೆ ಕಾರ್ಯಕರ್ತೆಯೊಬ್ಬರ ವಿರುದ್ಧದ ಚುನಾವಣಾ ಟಿಕೆಟ್ ವಂಚನೆ ಪ್ರಕರಣ ಹಸಿರಾಗಿರುವಂತೆಯೇ ಇತ್ತ ರಾಜ್ಯದಲ್ಲಿ ಮತ್ತೊಂದು ಚುನಾವಣಾ ಟಿಕೆಟ್ ವಂಚನೆ ಪ್ರಕರಣ ಬೆಳಕಿಗೆ ಬಂದಿದ್ದು, ನಾಲ್ವರ ವಿರುದ್ಧ ಪೊಲೀಸ್ ಎಫ್‌ಐಆರ್ ದಾಖಲಾಗಿದೆ.

ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಕೋಟಿ ಕೋಟಿ ವಂಚನೆ ಮಾಡಿರುವ ಪ್ರಕರಣ ಇದಾಗಿದ್ದು, ಕೊಟ್ಟೂರು ನಿವಾಸಿ, ನಿವೃತ್ತ ಎಂಜಿನಿಯರ್ ನೀಡಿರುವ ದೂರಿನ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಹಗರಿಬೊಮ್ಮನಹಳ್ಳಿ ಎಸ್‌ಸಿ ಮೀಸಲು ವಿಧಾನಸಭಾ ಕ್ಷೇತ್ರದ ಟಿಕೆಟ್ ಕೊಡಿಸುವುದಾಗಿ ಶಿವಮೂರ್ತಿ ಎಂಬುವವರಿಗೆ ನಾಲ್ವರ ತಂಡವು ವಂಚನೆ ಮಾಡಿರುವುದು ಬೆಳಕಿಗೆ ಬಂದಿದೆ.

2.55 ಕೋಟಿ ರೂ. ಪಂಗನಾಮ: ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಶಿವಮೂರ್ತಿ, ಪಕ್ಷದ ಚಟುವಟಿಕೆಗಾಗಿ 65 ಲಕ್ಷ ರೂ. ಖರ್ಚು ಮಾಡಿಸಲಾಗಿದೆ. ಅಲ್ಲದೆ, ಟಿಕೆಟ್ ಕೊಡಿಸುವುದಾಗಿ ವಂಚಕರು ತಮ್ಮ ಬಳಿ ಒಟ್ಟು 1.90 ಕೋಟಿ ರೂ. ಪಡೆದುಕೊಂಡಿದ್ದಾರೆ. ಹೀಗಾಗಿ ಒಟ್ಟು 2.55 ಕೋಟಿ ರೂ. ವಂಚನೆ ಮಾಡಲಾಗಿದೆ ಎಂದು ಆರೋಪ ಮಾಡಿದ್ದಾರೆ. ಈ ಪ್ರಕರಣ ಸಂಬಂಧ ಅ.19ರಂದು ಶಿವಮೂರ್ತಿ ಅವರು ಕೊಟ್ಟೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಅವರು ನೀಡಿದ ದೂರಿನನ್ವಯ ಪೊಲೀಸರು ಎಫ್‌ಐಆರ್ ದಾಖಲು ಮಾಡಿಕೊಂಡಿದ್ದಾರೆ.

90 ಲಕ್ಷ ರೂ. ಚೆಕ್ ಬೌನ್ಸ್: ಟಿಕೆಟ್ ಸಿಗದಿದ್ದಾಗ ಹಣ ವಾಪಸ್ ಕೇಳಿದೆ. ಅದಕ್ಕೆ 90 ಲಕ್ಷ ರೂಪಾಯಿ ಚೆಕ್ ನೀಡಿದ್ದರು. ಅಕ್ಟೋಬರ್ 10ರ ದಿನಾಂಕವನ್ನು ಹಾಕಲಾಗಿತ್ತು. ಆದರೆ, ಚೆಕ್ ಬೌನ್ಸ್ ಆಗಿದೆ ಎಂದು ಸಹ ಶಿವಮೂರ್ತಿ ಆರೋಪಿಸಿದ್ದಾರೆ.

ನಾಲ್ವರ ವಿರುದ್ಧ FIR

ಕೊಟ್ಟೂರಿನ ಕಟಾರಿ ಆಪ್ಟಿಕಲ್ ಮಾಲೀಕ ಮೋಹನ್ ಕಟಾರಿಯಾ, ಬಿಜೆಪಿ ಮಾಜಿ ಮುಖಂಡ, ಹಾಲಿ ಜನಾರ್ದನ ರೆಡ್ಡಿ ಪಕ್ಷದ ವಿಜಯನಗರ ಜಿಲ್ಲಾಧ್ಯಕ್ಷ ರೇವಣ ಸಿದ್ದಪ್ಪ ಹಾಗೂ ಪುತ್ತೂರು ಮೂಲದ ಶೇಖರ್ ಪುರುಷೋತ್ತಮ್ ನಿರ್ಲಕಟ್ಟೆ (ರಾಜಶೇಖರ್) ಎಂಬುವವರಿಂದ ವಂಚನೆ ನಡೆದಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಒಟ್ಟು 1.90 ಕೋಟಿ ರೂಪಾಯಿಯನ್ನು ಇದುವರೆಗೆ ಪಡೆಯಲಾಗಿದೆ. ಅದರಲ್ಲಿ 65 ಲಕ್ಷ ರೂಪಾಯಿಯನ್ನು ಪಕ್ಷದ ಬೇರೆ ಬೇರೆ ವಿಚಾರಕ್ಕೆ ಖರ್ಚು ಮಾಡಿಸಲಾಗಿದೆ ಎಂದು ಆರೋಪ ಮಾಡಿರುವ ಶಿವಮೂರ್ತಿ, ತಾವು ಕೊಟ್ಟಿರುವ ಎಲ್ಲ ಹಣದ ದಾಖಲೆ ಸಮೇತ ದೂರು ನೀಡಿದ್ದಾರೆ. ಅಲ್ಲದೆ, ಈಗ ಹಣವನ್ನು ವಾಪಸ್ ಕೇಳಿದ್ದಕ್ಕೆ ಧಮ್ಕಿ ಹಾಕುತ್ತಿದ್ದಾರೆ ಎಂದು ಸಹ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಿಎಂ, ಗೃಹ ಸಚಿವರಿಗೆ ಪತ್ರ: ಹಣ ಕಳೆದುಕೊಂಡ ಶಿವಮೂರ್ತಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದರು. ತಮಗೆ ವಂಚನೆ ಮಾಡಿದವರ ಬಗ್ಗೆ ಸಂಪೂರ್ಣ ವಿವರವನ್ನು ನಮೂದಿಸಿ, ಮೋಸ ಮಾಡಿದವರ ಮೇಲೆ ಕ್ರಮ ಕೈಗೊಂಡು ತಮ್ಮ ಹಣವನ್ನು ವಾಪಸ್ ಕೊಡಿಸುವಂತೆ ಕೋರಿದ್ದಾರೆ.

ತಮಗೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಭೇಟಿ ಮಾಡಿಸಲಾಗಿತ್ತು. ನಳಿನ್‌ಕುಮಾರ್ ಕಟೀಲ್ ಕೂಡಾ ಟಿಕೆಟ್ ವಿಚಾರ ಪುತ್ತೂರು ಬಿಜೆಪಿ ಮುಖಂಡ ಶೇಖರ್ ಎನ್.ಪಿ ಬಳಿಯೇ ಮಾತನಾಡಿ ಎಂದು ಹೇಳಿದ್ದರು ಎಂದು ಶಿವಮೂರ್ತಿ ಅವರು ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಆಯಿಷ್-ಸಿಎಫ್‌ಟಿಆರ್‌ಐ ಸಂಸ್ಥೆ ಬೆಳವಣಿಗೆಗೆ ರಾಜಮನೆತನದ ಕೊಡುಗೆ ಅಪಾರ



ಮೈಸೂರು, ಅ.22(ಎಸ್‌ಪಿಎನ್)- ಮೈಸೂರು ರಾಜ ಮನೆತನದವರ ಸಹಕಾರದಿಂದ ಮೈಸೂರು ಅಖಿಲ ಭಾರತ ಶ್ರವಣ ಸಂಸ್ಥೆ(ಆಯಿಷ್) ಹಾಗೂ ಸಿಎಫ್‌ಟಿಆರ್‌ಐ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು ಎಂದು ಆಯಿಷ್ ನಿರ್ದೇಶಕಿ ಪ್ರೊ.ಎಂ.ಪುಷ್ಪವತಿ ಅಭಿಪ್ರಾಯಪಟ್ಟರು.

ಮೈಸೂರು ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಆವರಣದ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಸಿಎಸ್‌ಐಆರ್-ಸಿಎಫ್‌ಟಿಆರ್‌ಐ 74ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ ಮೊದಲಿಗೆ ಮೈಸೂರು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಆರಂಭವಾಗಿ ಅನಂತರ ಮಹಾರಾಜ ಕಾಲೇಜು ಶತಮಾನೋತ್ಸವ ಭವನಕ್ಕೆ ಶಿಫ್ಟ್ ಆಗಿತ್ತು. ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂದಿನ ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು 1970ರಲ್ಲಿ ಈ ಸಂಸ್ಥೆಗೆ ನೀಡಿದ್ದ 32 ಎಕರೆ ಜಮೀನಿಗೆ ಬದಲಾಗಿ ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯಲ್ಲಿ 32 ಎಕರೆ ಜಮೀನು ನೀಡಿದ್ದರ ಫಲವಾಗಿ ಈ ಸಂಸ್ಥೆ ಇಲ್ಲಿ ರೂಪುಗೊಂಡಿತು ಎಂದು ಮಾಹಿತಿ ನೀಡಿದರು.

ಮೈಸೂರಿನ ರಾಜಮನೆತನ ಸಿಎಫ್‌ಟಿಆರ್‌ಐ ಸಂಸ್ಥೆ ಸ್ಥಾಪನೆಗೆ ವಿಶಾಲ ಜಾಗ ನೀಡದಿದ್ದರೆ, ಈ ಸಂಸ್ಥೆ ಸ್ಥಾಪನೆ ಸಾಧ್ಯವಾಗುತ್ತಿರಲಿಲ್ಲ. ಅದೇ ರೀತಿ ಆಯಿಷ್, ರೈಲ್ವೆ ಸೇರಿದಂತೆ ಇತರೆ ಸಂಸ್ಥೆಗಳನ್ನು ಸ್ಥಾಪಿಸಿ, ಅನೇಕ ಬಡವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಭಾರತದಲ್ಲಿ ಅಂಗವೈಕಲ್ಯ ಸಮಸ್ಯೆ ನಿವಾಹರಣೆ ಕೇಂದ್ರ ಸ್ಥಾಪಿಸಲು ಕೇಂದ್ರ ಸರ್ಕಾರದ ಕೋರಿಕೆಯ ಮೇರೆಗೆ ಅಮೆರಿಕದ ಪ್ರಖ್ಯಾತ ವಾಕ್ ಶ್ರವಣ ತಜ್ಞ ಡಾ.ಮಾರ್ಟಿನ್ ಎಫ್.ಪಾಮರ್ ಅವರು ಭಾರತಾದ್ಯಂತ ಪ್ರವಾಸ ಮಾಡಿ ವಾಕ್-ಶ್ರವಣ ಸಂಸ್ಥೆ ಸ್ಥಾಪನೆಗೆ ಮೈಸೂರು ನಗರ ಸೂಕ್ತ ಸ್ಥಳವೆಂದು ಕೇಂದ್ರ ಸರ್ಕಾರಕ್ಕೆ ವರದಿ ನೀಡಿದ ಹಿನ್ನೆಲೆಯಲ್ಲಿ ಆಯಿಷ್ ಸಂಸ್ಥೆ ಮೈಸೂರು ನಗರದಲ್ಲಿ ನೆಲೆಯೂರಲು ಕಾರಣವಾದ ಹಿನ್ನೆಲೆ ವಿವರಿಸಿದರು. ಜಯಚಾಮರಾಜೇಂದ್ರ ಒಡೆಯರ್ ಅವರು, ಸಿಎಫ್‌ಟಿಆರ್‌ಐ, ಆಯಿಷ್ ಸೇರಿದಂತೆ ಅನೇಕ ಶಿಕ್ಷಣ ಸಂಸ್ಥೆಗಳು ಮೈಸೂರಲ್ಲಿ ನೆಲೆಯೂರಲು ಕಾರಣಕರ್ತರಾದರಲ್ಲದೆ, ಶಿಕ್ಷಣಕ್ಕೆ ಅವರ ಕೊಡುಗೆ ಅಪಾರ. ಹಾಗಾಗಿ ಅವರು ಬರೀ ರಾಜರಲ್ಲ ದೇವರು ಎಂದರೆ ತಪ್ಪಾಗಲಾರದು ಎಂದರು.

ಸಿಎಫ್‌ಟಿಆರ್‌ಐ-ಆಯಿಷ್ ಸಂಸ್ಥೆ ಮೈಸೂರಿನಲ್ಲಿ ಕೇವಲ 3 ಕಿ.ಮೀ ಅಂತರದಲ್ಲಿ ಕೆಲಸ ನಿರ್ವಹಿಸುತ್ತಿವೆ. ಹಾಗಾಗಿ ಸಿಎಫ್‌ಟಿಆರ್‌ಐ ಸಂಸ್ಥೆ ಆಹಾರ ವಿಷಯದಲ್ಲಿ ಮಕ್ಕಳಿಗೆ ಪೌಷ್ಟಿಕಾಯುಕ್ತ ಆಹಾರಕ್ಕಾಗಿ ಸಲಹೆ-ಸೂಚನೆ ನೀಡಬೇಕು. ಈಗಾಗಲೇ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಪೋಷಣ್ ಯೋಜನೆಯಡಿ ಶಾಲಾ-ಕಾಲೇಜುಗಳಲ್ಲಿ ಅಭಿಯಾನ ಹಮ್ಮಿಕೊಂಡಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ಬಾಲ್ಯದಿಂದಲೇ ದೊರೆತರೆ ದೈಹಿಕ ನ್ಯೂನತೆಗಳಿಗೆ ಕಡಿವಾಣ ಹಾಕಬಹುದು. ಒಂದು ಮಗು ಅಂಗವೈಕಲ್ಯ, ಬುದ್ಧಿಮಾಂದ್ಯ ವೈಕಲ್ಯತೆಯಿಂದ ಬಳಲಿದರೆ, ಅಂತಹ ಪೋಷಕರು ಸಾಮಾಜಿಕವಾಗಿ ಸಾಕಷ್ಟು ನೋವುಗಳನ್ನು ಅನುಭವಿಸುತ್ತಾರೆ. ಸಿಎಫ್‌ಟಿಆರ್‌ಐ ಸಂಸ್ಥೆ ವಿಜ್ಞಾನಿಗಳು ಮಕ್ಕಳಿಗೆ ನೀಡುವ ಆಹಾರ ಕ್ರಮದ ಬಗ್ಗೆ ವಿಶೇಷ ಆಸಕ್ತಿವಹಿಸಿ, ಮುಂದಿನ ಆರೋಗ್ಯವಂತ ಸಮಾಜ ಸೃಷ್ಟಿಸಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದರಲ್ಲದೆ, ಸಿಎಫ್‌ಟಿಆರ್‌ಐನಲ್ಲಿ ಇತ್ತೀಚೆಗೆ 'ಸಿರಿಧಾನ್ಯ ಮೇಳ'ದ ಮೂಲಕ ಆಹಾರದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿರುವುದು ಮೌಲ್ಯಯುತ ಎಂದರು.

ಈ ವೇಳೆ ನೈರುತ್ಯ ರೈಲ್ವೆ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರ್ವಾಲ್ ಅವರನ್ನು ಸನ್ಮಾನಿಸಲಾಯಿತು. ನಂತರ ಸಿಎಫ್‌ಐಆರ್‌ಐ ಸಿರಿಧಾನ್ಯ-2023ರ ಮೇಳದ ಯಶಸ್ವಿಗೆ ಕಾರಣರಾದ ಬಿ.ವಿ.ಸತ್ಯೇಂದ್ರ ರಾವ್, ಡಾ.ಉಷಾಧರ್ಮರಾಜ್, ಡಾ.ಆರ್.ವಿ.ಶ್ರೀಧರ್, ಡಾ.ಕೆ.ವಿ.ಹರೀಶ್ ಪ್ರಶಾಂತ್, ಡಾ.ಟಿ.ಆರ್.ರಾಮಪ್ರಸಾದ್, ಡಾ.ಸಚಿನ್ ಎಂ.ಎಲಿಗಾರ್, ಡಾ.ಹೆಚ್.ಉಮೇಶ್ ಹೆಬ್ಬಾರ್, ಹೆಚ್.ಸತೀಶ್, ಡಾ.ವಿವೇಕ್‌ಬಾಬು, ಡಾ.ಸತೀಶ್ ಕುಮಾರ್, ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಡಾ.ಪೂರ್ಣಿಮಾ ಪ್ರಿಯಾದರ್ಶಿನಿ ಅವರಿಗೆ ಫಲಕ ನೀಡಿ ಗೌರವಿಸಲಾಯಿತು.

ಮಾಲ್ದೀವ್ಸ್‌ನಲ್ಲಿ ಸ್ಫೋಟ: ಇಬ್ಬರು ಭಾರತೀಯ ಕಾರ್ಮಿಕರ ಸಾವು

ಮಾಲೆ: ಮಾಲ್ಡೀವ್ಸ್‌ನ ಹಾ ಧಾಲ್ ಮಕುನುಧೂ ದ್ವೀಪದ ಮೀನು ಮಾರುಕಟ್ಟೆ ಬಳಿ ಸಂಭವಿಸಿದ ಪ್ರಬಲ ಸ್ಫೋಟದಲ್ಲಿ ಇಬ್ಬರು ಭಾರತೀಯ ಕಾರ್ಮಿಕರು ಸಾವನ್ನಪ್ಪಿದ್ದಾರೆ ಎಂದು ಮಾಲೆಯಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಭಾನುವಾರ ತಿಳಿಸಿದೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಭಾರತೀಯ ಹೈಕಮೀಷನ್, ಇಬ್ಬರು ಭಾರತೀಯರು ಸಾವನ್ನಪ್ಪಿದ ದುರಂತ ಘಟನೆಯಿಂದ ತೀವ್ರ ದುಃಖಿತರಾಗಿದ್ದೇವೆ. ಮೃತರ ಕುಟುಂಬಗಳೊಂದಿಗೆ ಮಾಲ್ಡೀವ್ಸ್‌ನಲ್ಲಿರುವ ರಾಯಭಾರಿ ಅಧಿಕಾರಿಗಳು ನಿಕಟ ಸಂಪರ್ಕದಲ್ಲಿದ್ದಾರೆ ಎಂದು ತಿಳಿಸಿದೆ.

ಶನಿವಾರ ಸಂಜೆ 04:15ರ ಸುಮಾರಿಗೆ ದ್ವೀಪದ ಬಂದರಿನ ದಕ್ಷಿಣ ತುದಿಯಲ್ಲಿರುವ ಮೀನು ಮಾರುಕಟ್ಟೆಯ ಬಳಿ ಸ್ಫೋಟ ಸಂಭವಿಸಿದೆ ಎಂದು ಸನ್ ಆನ್‌ಲೈನ್ ವೆಬ್‌ಸೈಟ್ ಸುದ್ದಿ ವರದಿ ಮಾಡಿದೆ. ಗ್ಯಾಸ್ ಸಿಲಿಂಡರ್ ನಿಂದ ಈ ಸ್ಫೋಟ ಸಂಭವಿಸಿರಬಹುದೆಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ. ಮೃತರು ದ್ವೀಪದಲ್ಲಿ ವಿಮಾನ ನಿಲ್ದಾಣವನ್ನು ನಿರ್ಮಿಸಲು ಭೂ ಸುಧಾರಣಾ ಯೋಜನೆಗಾಗಿ ಗುತ್ತಿಗೆದಾರರಿಂದ ನೇಮಿಸಲ್ಪಟ್ಟ ಕಾರ್ಮಿಕರಾಗಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಮಾಜಿ ಸಿಎಂ ಬೊಮ್ಮಾಯಿ ಆರೋಗ್ಯ ವಿಚಾರಿಸಿದ ಪ್ರಧಾನಿ ಮೋದಿ

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದೂರವಾಣಿ ಕರೆ ಮಾಡಿ ಆರೋಗ್ಯ ವಿಚಾರಿಸಿದ್ದಾರೆ. ಬಸವರಾಜ ಬೊಮ್ಮಾಯಿ ಬನ್ನೇರುಘಟ್ಟ ಫೋರ್ಟಿಸ್ ಆಸ್ಪತ್ರೆಯಲ್ಲಿ ಯಶಸ್ವಿ ಬೈಪಾಸ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ.

ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು, ಸ್ವತಃ ದೂರವಾಣಿ ಮೂಲಕ ಕರೆ ಮಾಡಿ, ಬೊಮ್ಮಾಯಿ ಆರೋಗ್ಯ ವಿಚಾರಿಸಿದ್ದಾರೆ. ಈ ವೇಳೆ ಶೀಘ್ರ ಗುಣಮುಖರಾಗುವಂತೆ ಶುಭ ಕೋರಿದ್ದು, ಆರೋಗ್ಯದ ಕಡೆ ಗಮನ ಕೊಡುವಂತೆ ಸಲಹೆ ನೀಡಿದ್ದಾರೆಂದು ತಿಳಿದುಬಂದಿದೆ.

ಮೋದಿಯವರು ತಮ್ಮ ಆರೋಗ್ಯ ವಿಚಾರಿಸಿರುವ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬೊಮ್ಮಾಯಿಯವರು ಟ್ವೀಟ್ ಮಾಡಿದ್ದಾರೆ.

ಶಸ್ತ್ರಚಿಕಿತ್ಸೆಗೆ ಒಳಗಾಗಿ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸಂದರ್ಭದಲ್ಲಿ ನನಗೆ ದೂರವಾಣಿ ಕರೆ ಮಾಡಿ ನನ್ನ ಆರೋಗ್ಯ ಕುಶಲೋಪರಿಯನ್ನು ವಿಚಾರಿಸಿದ ದೇಶದ ಹೆಮ್ಮೆಯ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರಿಗೆ ತುಂಬು ಹೃದಯದ ಧನ್ಯವಾದಗಳು. ನಿಮ್ಮ ಕಾಳಜಿ ಮತ್ತು ಶುಭ ಹಾರೈಕೆ ನನ್ನ ಆತ್ಮಸ್ಥೈರ್ಯವನ್ನು ಹೆಚ್ಚಿಸಿದ್ದು, ಆದಷ್ಟು ಬೇಗ ಸಂಪೂರ್ಣ ಗುಣಮುಖನಾಗಿ ಜನಸೇವೆಗೆ ಮರಳುತ್ತೇನೆಂದು ಹೇಳಿದ್ದಾರೆ.



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷರೂ ಆದ ದಸರಾ ಕ್ರೀಡಾಕೂಟದ ಉಪಾಧ್ಯಕ್ಷ ಕೆ. ಎಸ್. ಶಿವರಾಮು ಅವರನ್ನು ಯುವಜನ ಸೇವಾ ಕ್ರೀಡಾ ಇಲಾಖೆಯ ಸಚಿವ ನಾಗೇಂದ್ರ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಶಿವಣ್ಣ ಅಭಿನಂದಿಸಿದರು.

ಅರಮನೆ ಆವರಣದಲ್ಲಿ ಜಂಬೂಸವಾರಿ ಪೂರ್ಣ ಪ್ರಮಾಣದ ತಾಲೀಮು





ಮೈಸೂರು, ಅ.22(ಎಸ್‌ಬಿಡಿ)- ವಿಜಯದಶಮಿಯಂದು ಜರುಗುವ ಜಂಬೂಸವಾರಿ ಮೆರವಣಿಗೆಯ ಅಂತಿಮ ಹಂತದ ತಾಲೀಮು ಅರಮನೆ ಅಂಗಳದಲ್ಲಿ ಭಾನುವಾರ ಸಂಜೆ ನಡೆಯಿತು.

ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಗುವ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ, ಕುಶಾಲತೋಪು ಸಿಡಿಸುವುದು ಸೇರಿದಂತೆ ಜಂಬೂಸವಾರಿ ಮೆರವಣಿಗೆಯ ಶಿಷ್ಟಾಚಾರದಂತೆ ಎಲ್ಲಾ ಅನುಕ್ರಮಗಳನ್ನು ಅನುಸರಿಸಲಾಯಿತು.

ತಾಲೀಮು ಆರಂಭಿಸಲು ಕಮಾಂಡ್ ನೀಡುತ್ತಿದ್ದಂತೆ ರಾಜವಂಶಸ್ಥರ ನಿವಾಸದ ಸಮೀಪ ಅಂಬಾರಿ ಕಟ್ಟುವ ಕ್ರೇನ್ ಬಳಿ ಕುಮ್ಕಿ ಆನೆಗಳೊಂದಿಗಿದ್ದ ಅಂಬಾರಿ ಆನೆ ಅಭಿಮನ್ಯುವನ್ನು ಅರಮನೆ ಮುಂಭಾಗದ ಪ್ರಾಂಗಣಕ್ಕೆ ಕರೆತರಲಾಯಿತು. ಆನೆಗಳ ಮುಂದೆ ಪೊಲೀಸ್ ಬ್ಯಾಂಡ್ ವಾದನ ಸಂಗೀತಕ್ಕೆ ಅನುಗುಣವಾಗಿ 8 ಪೊಲೀಸ್ ತುಕಡಿ ಹಾಗೂ ಅಶ್ವಪಡೆಯ 27 ಕುದುರೆಗಳು ಹೆಜ್ಜೆ ಹಾಕಿದವು.

ಬಳಿಕ ನಿಗದಿತ ಸ್ಥಳದಲ್ಲಿ ಅಂಬಾರಿ ಆನೆ ಅಭಿಮನ್ಯು ಮೇಲೆ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಹಾಗೂ ಡಿಸಿಪಿ ಮುತ್ತುರಾಜ್ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಪೊಲೀಸ್ ಬ್ಯಾಂಡ್‌ನಲ್ಲಿ ರಾಷ್ಟ್ರಗೀತೆ ಮೊಳಗಿತು. ಅತ್ತ ಕೋಟೆ ಮಾರಮ್ಮನ ದೇವಾಲಯದ ಬಳಿ ನಗರ ಸಶಸ್ತ್ರ ಮೀಸಲು ಪಡೆ ಸಿಬ್ಬಂದಿ 21 ಕುಶಾಲುತೋಪುಗಳನ್ನು ಸಿಡಿಸಿದರು.

ಬಳಿಕ ಆನೆಗಳ ಮೆರವಣಿಗೆ ಆರಂಭವಾಯಿತು. ನಿಶಾನೆ ಆನೆ ಅರ್ಜುನ ಮುಂಚೂಣಿಯಲ್ಲಿ ಸಾಗಿದ. ಪೊಲೀಸ್ ತುಕಡಿಗಳು ಪಥಸಂಚಲನದ ಜೊತೆ ಉಳಿದ ಆನೆಗಳು ಹಿಂಬಾಲಿಸಿದವು. ಕೊನೆಗೆ ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ವಿಜಯ(ಎಡಗಡೆ) ಹಾಗೂ ವರಲಕ್ಷ್ಮೀ(ಬಲಗಡೆ) ಗಣ್ಯರಿಗೆ ಸೆಲ್ಯೂಟ್ ಮಾಡುವಂತೆ ಸೊಂಡಿಲೆತ್ತಿ ಗೌರವಿಸಿದ ನಂತರ ಅವು ಮುಂದೆ ಸಾಗಿದವು. ಅಂಬಾರಿ ಆನೆಯೊಂದಿಗೆ ಸಾಂಪ್ರದಾಯಿಕ ಉಡುಪು ಧರಿಸಿದ್ದವರು ಭಾಗಿಯಾಗಿದ್ದರು. ಆ ಮೂಲಕ ಅ.24ರಂದು ನಡೆಯಲಿರುವ ಜಂಬೂಸವಾರಿ ಮೆರವಣಿಗೆಗೆ ಗಜಪಡೆ ಹಾಗೂ ಅಶ್ವಪಡೆಯನ್ನು ಮಾನಸಿಕವಾಗಿ ಸಜ್ಜುಗೊಳಿಸಲಾಯಿತು. ಅರಮನೆ ಆವರಣದಲ್ಲಿ ಕಿಕ್ಕಿರಿದಿದ್ದ ಸಾವಿರಾರು ಮಂದಿ ಮೆರವಣಿಗೆ ತಾಲೀಮು ವೀಕ್ಷಿಸಿ, ಸಂತಸಪಟ್ಟರು. ಈ ಮಾದರಿಯಲ್ಲಿ ವಿಜಯ ದಶಮಿಯಂದು ಜಂಬೂಸವಾರಿ ನಡೆಯಲಿದೆ.

ತಾಲೀಮಿನ ವೇಳೆ 14 ಆನೆಗಳಲ್ಲಿ ಪಟ್ಟದ ಆನೆ ಬಿಟ್ಟು ಉಳಿದ 12 ಆನೆಗಳನ್ನು ಕರೆದೊಯ್ಯಲಾಯಿತು. ಅರಮನೆ ಆವರಣದಲ್ಲಿ ಗಜಪಡೆಯನ್ನು ಕರೆದುಕೊಂಡು ಬರುವ ಮಾರ್ಗ ಹಾಗೂ ಚಿನ್ನದ ಅಂಬಾರಿ ಕಟ್ಟುವ ಸ್ಥಳವನ್ನು ಅಂಬಾರಿ ಆನೆ ಅಭಿಮನ್ಯು ಹಾಗೂ ಕುಮ್ಕಿ ಆನೆಗಳಿಗೆ ಪರಿಚಯಿಸಲಾಯಿತು. ಉಳಿದ ಆನೆಗಳು ಮೆರವಣಿಗೆ ಹೊರಡುವ ಸ್ಥಳವಾದ ವರಹ ಸ್ವಾಮಿ ದೇವಾಲಯದ ಮುಂಭಾಗದ ರಸ್ತೆಯಲ್ಲಿ ನಿಲ್ಲಿಸಲಾಗಿತ್ತು. ತಾಲೀಮಿನ ವೇಳೆ ಡಿಸಿಎಫ್ ಸೌರಭ ಕುಮಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್, ಸಹಾಯಕರಾದ ರಂಗರಾಜು, ಅಕ್ರಮ್ ಮತ್ತಿತರರು ಹಾಜರಿದ್ದರು.

"ಜಂಬೂಸವಾರಿ ಮೆರವಣಿಗೆ ಸುಸೂತ್ರವಾಗಿ ನೆರವೇರಲು ಸಕಲ ಸಿದ್ಧತೆಗಳನ್ನು ಮಾಡಲಾಗಿದೆ. ಮೆರವಣಿಗೆ ವೀಕ್ಷಿಸಲು 5 ಲಕ್ಷ ಮಂದಿ ಆಗಮಿಸುವ ನಿರೀಕ್ಷೆಯಿದೆ. ಅರಮನೆ ಆವರಣದಲ್ಲೇ 30 ಸಾವಿರಕ್ಕೂ ಹೆಚ್ಚು ಜನ ವೀಕ್ಷಣೆ ಮಾಡಲಿದ್ದಾರೆ. ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಆನೆಯೊಂದಿಗೆ 200 ಮಂದಿ ರಾಜವೈಭವ ನೆನಪಿಸುವ ಧಿರಿಸಿನೊಂದಿಗೆ ಸಾಗಲಿರುವುದು ಈ ಬಾರಿಯ ವಿಶೇಷ. ವಿವಿಧ ಜಿಲ್ಲೆಗಳ ಸ್ತಬ್ಧ ಚಿತ್ರಗಳು, ಜಾನಪದ ಕಲಾತಂಡಗಳು ಮೆರವಣಿಗೆಯ ವೈಭವ ಹೆಚ್ಚಿಸಲಿವೆ.
-ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

"ಪ್ರತಿ ವರ್ಷದಂತೆ ಭದ್ರತೆ ಕೈಗೊಂಡಿದ್ದು, ಈ ಬಾರಿ 6 ಸಾವಿರಕ್ಕೂ ಹೆಚ್ಚು ಮಂದಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ. ಯಾವುದೇ ವದಂತಿಗಳಿಗೆ ಕಿವಿಗೊಡದೆ ಜನ ನಿರ್ಭೀತಿಯಿಂದ ಬಂದು ಜಂಬೂಸವಾರಿ ಮೆರವಣಿಗೆ ವೀಕ್ಷಣೆ ಮಾಡಬೇಕು. ದಸರಾ ಮಹೋತ್ಸವದ ಮೇಲೆ ಯಾವ ಉಗ್ರರ ಕರಿನೆರಳು ಬಿದ್ದಿಲ್ಲ. ಯಾವುದೇ ಬೆದರಿಕೆಗಳು ಬಂದಿಲ್ಲ.
- ಬಿ.ರಮೇಶ್, ನಗರ ಪೊಲೀಸ್ ಆಯುಕ್ತ

ಆನೆ ಮೇಲೆ ಸುರಕ್ಷಿತವಾಗಿ ಮರದ ಅಂಬಾರಿ, ಮರಳು ಮೂಟೆ ಮೇಲೆತ್ತಿಡಲು ರೀಚ್ ಅಪ್ ಯಂತ್ರ ಖರೀದಿಸಿದ ಅರಣ್ಯ ಇಲಾಖೆ

4.50 ಲಕ್ಷ ರೂ. ಮೌಲ್ಯದ, 300 ಕೆಜಿ ತೂಕವನ್ನು 18 ಅಡಿ ಎತ್ತರಕ್ಕೆ ಕೊಂಡೊಯ್ಯಬಲ್ಲ ಯಂತ್ರ



ಭಾರದ ತಾಲೀಮಿಗಾಗಿ ಬಳಸಲು ರೀಚ್ ಅಪ್ ಯಂತ್ರ ಖರೀದಿ

ಆನೆ ಮೇಲೆ ತೊಟ್ಟಿಲು ಇಡಲು, ಮರಳಿನ ಮೂಟೆ ಹಾಗೂ ಮರದ ಅಂಬಾರಿ ಸುರಕ್ಷಿತವಾಗಿ ಮೇಲಿಡಲು ರೀಚ್ ಅಪ್ ಯಂತ್ರ ಖರೀದಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ತಾಲೀಮು ನಡೆಸುವ ವೇಳೆ ಭಾರದ ಮೂಟೆ ಆನೆ ಮೇಲಿಡಲು ಸಹಕಾರಿಯಾಗಲಿದೆ. - ಸೌರಭ್ ಕುಮಾರ್, ಡಿಸಿಎಫ್

ಅರಣ್ಯ ಇಲಾಖೆ ಕೋರಿಕೆ ಮೇರೆಗೆ 300 ಕೆಜಿ ತೂಕವನ್ನು 18 ಅಡಿ ಮೇಲೆತ್ತುವ ರೀಚ್ ಅಪ್ ಯಂತ್ರ ನೀಡಲಾಗಿದೆ. ಹೈಡ್ರೋಲಿಕ್ ಯಂತ್ರ ಇದಾಗಿದ್ದು, ಅದಕ್ಕೆ ಬ್ಯಾಟರಿ ಅಳವಡಿಸಲಾಗಿದೆ. ಈ ಹಿಂದೆ ಹಲವು ಕೈಗಾರಿಕೆಗಳಿಗೆ 25 ರಿಂದ 60 ಟನ್ ಭಾರವನ್ನು 40 ಅಡಿ ಎತ್ತರಕ್ಕೆ ಕೊಂಡೊಯ್ಯುವ ರೀಚ್ ಅಪ್ ಯಂತ್ರಗಳನ್ನು ಕೈಗಾರಿಕೆಗಳಿಗೆ ಸರಬರಾಜು ಮಾಡಿದ್ದೇವೆ.
- ರಮೇಶ್, ಫೆರೋ ಫೌಂಡರೀಸ್ ಪ್ರೈ.ಲಿ

ಮೈಸೂರು, ಅ.22(ಎಂಟಿವೈ)- ನಾಡಹಬ್ಬ ದಸರಾ ಮಹೋತ್ಸವ ವೇಳೆ ಗಜಪಡೆಗೆ ಭಾರ ಹೊರುವ ತಾಲೀಮು ನಡೆಸಲು ಆನೆಯ ಮೇಲೆ ಮರದ ಅಂಬಾರಿ ಸೇರಿದಂತೆ ಮರಳು ಮೂಟೆ ಸುರಕ್ಷಿತವಾಗಿಡಲು ಅರಣ್ಯ ಇಲಾಖೆ ಯಂತ್ರವೊಂದನ್ನು ಖರೀಸಿದೆ.

ಜಂಬೂಸವಾರಿಗಾಗಿ ಸುಮಾರು ಒಂದು ತಿಂಗಳಿಂದ ಅಂಬಾರಿ ಆನೆ ಹಾಗೂ ಪರ್ಯಾಯ ಆನೆಗಳಿಗೆ ಮರಳಿನ ಮೂಟೆ ಹಾಗೂ ಮರದ ಅಂಬಾರಿ ಹೊರಿಸಿ ತಾಲೀಮು ನಡೆಸುವ ಪದ್ಧತಿಯಿದ್ದು, ಈ ಹಿನ್ನೆಲೆಯಲ್ಲಿ ಮಾವುತ, ಕಾವಾಡಿ ಹಾಗೂ ಅರಣ್ಯ ಸಿಬ್ಬಂದಿಗಳು ಆನೆ ಮೇಲೆ ಬಾರ ಹೊರಿಸಲು ಕಷ್ಟಪಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಇದೀಗ ತಾಲೀಮಿನ ಬಳಕೆಗಾಗಿ ಅರಣ್ಯ ಇಲಾಖೆ 'ರೀಚ್ ಅಪ್' ಯಂತ್ರವೊಂದನ್ನು ಖರೀದಿಸಿದ್ದು, ಮುಂಬರುವ ವರ್ಷಗಳಲ್ಲಿ ತಾಲೀಮು ಪ್ರಕ್ರಿಯೆ ಸುಲಭವಾಗಿ ಸಾಗಲು ಸಹಕಾರಿಯಾಗಲಿದೆ.

ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಬಳಿ ಆನೆಯನ್ನು ಕೂರಿಸಿ, ಅದರ ಮೇಲೆ ಗಾದಿ ಮತ್ತು ನಮ್ದಾ ಕಟ್ಟಿದ ನಂತರ ಮಾವುತ ಹಾಗೂ ಕಾವಾಡಿಗಳು ಆನೆ ಮೇಲೆ ಮರಳಿನ ಮೂಟೆ ಇಡಲು ಹರಸಾಹಸ ಪಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಆನೆ ಮೇಲೆ ಮರಳಿನ ಮೂಟೆ ಸರಾಗವಾಗಿ ಕೊಂಡೊಯ್ಯಲು ಹೊಸ ಮಾರ್ಗವನ್ನು ಕಂಡುಕೊಂಡಿರುವ ಅರಣ್ಯ ಇಲಾಖೆ ಮೈಸೂರಿನ ಬೆಳವಾಡಿ ಕೈಗಾರಿಕಾ ಪ್ರದೇಶದಲ್ಲಿರುವ ಫೆರೋ ಫೌಂಡರೀಸ್ ಪ್ರೈ.ಲಿ ಸಂಸ್ಥೆಯು ತಯಾರಿಸಿರುವ ಫೆರೋ ಟೈಗರ್ ಬ್ರಾಂಡ್‌ನ ರೀಚ್ ಅಪ್ ಯಂತ್ರವನ್ನು ಖರೀದಿಸಿದೆ.

ರೀಚ್ ಅಪ್ ಯಂತ್ರವು ಹೈಡ್ರೋಲಿಕ್ ಯಂತ್ರವಾಗಿದ್ದು, ನಾಲ್ಕು ಬ್ಯಾಟರಿಯನ್ನು ಒಳಗೊಂಡಿದೆ. ಈ ನಾಲ್ಕು ಬ್ಯಾಟರಿಗಳಿಂದ 24 ವೋಲ್ಟೇಜ್ ಹಾಗೂ 200 ಎಹೆಚ್ ಸಾಮರ್ಥ್ಯ ಹೊಂದಿದೆ. ಇದರಿಂದ 300 ಕೆಜಿ ಭಾರವನ್ನು 18 ಅಡಿ ಎತ್ತರಕ್ಕೆ ಸರಾಗವಾಗಿ ಕೊಂಡೊಯ್ಯಲಿದೆ. ಒಮ್ಮೆ ಪೂರ್ಣ ಪ್ರಮಾಣದಲ್ಲಿ ಬ್ಯಾಟರಿ ಚಾರ್ಜ್ ಮಾಡಿದರೆ 30ರಿಂದ 40 ಬಾರಿ 300 ಕೆಜಿಯಲ್ಲಿ ಮೇಲೆತ್ತಿ ಕೆಳಗಿಳಿಸಬಹುದು. ಈ ಯಂತ್ರದ ಮೇಲೆ 4X6 ಅಡಿ ಅಳತೆಯ ಟ್ರೇ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗಿದ್ದು, ಅದರ ಮೇಲೆ ಮರದ ಅಂಬಾರಿ ಅಥವಾ ಮರಳಿನ ಮೂಟೆ ಇಟ್ಟು ಸ್ವಿಚ್ ಆನ್ ಮಾಡಿದರೆ ಕ್ರೇನ್ ಮಾದರಿಯಲ್ಲಿ ಮೇಲೆ ಕೊಂಡೊಯ್ಯಬಹುದಾಗಿದೆ. ಹೆಚ್ಚು ಭಾರ ಹಾಕಿದರೆ, ಯಂತ್ರ ಮೇಲೇಳುವುದಿಲ್ಲ. ಈ ಹಿನ್ನೆಲೆಯಲ್ಲಿ ರೀಚ್ ಅಪ್ ಯಂತ್ರ ಕೇವಲ ತಾಲೀಮಿಗೆ ಮಾತ್ರ ಬಳಸಿಕೊಳ್ಳಬಹುದಾಗಿದೆ.



ಮೋಹನ್ ಹೆಬ್ಬಾಳ್ ಹಾಗೂ ಸ್ನೇಹಿತರು ಪೂರ್ವಜ್ ವಿಶ್ವನಾಥ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಹಮಾಸ್-ಇಸ್ರೇಲ್ ಯುದ್ಧದ ದಾಳಿ ಭೀತಿ: ದಕ್ಷಿಣ ಇಸ್ರೇಲ್‌ನಿಂದ ಜೆರುಸಲೆಮ್‌ಗೆ ಪ್ಯಾಲೆಸ್ಟೀನಿಯನ್ನರ ಸ್ಥಳಾಂತರ

ಟೆಲ್ ಅವೀವ್, ಅ.22- ಇಸ್ರೇಲ್ ಮತ್ತು ಹಮಾಸ್ ನಡುವೆ ನಡೆಯುತ್ತಿರುವ ಯುದ್ಧದ ನಡುವೆಯೇ ಇತ್ತ ದಕ್ಷಿಣ ಇಸ್ರೇಲ್‌ನಲ್ಲಿರುವ ಪ್ಯಾಲೆಸ್ಟೀನಿ ಜನರು ತಮ್ಮ ಮನೆಗಳನ್ನು ತೊರೆದು ಜೆರುಸಲೇಂಗೆ ಸ್ಥಳಾಂತರಗೊಳ್ಳುತ್ತಿದ್ದಾರೆ.

ದಕ್ಷಿಣ ಇಸ್ರೇಲ್‌ನಲ್ಲಿ ಈಗ ನಿರ್ಜನ ಬೀದಿಗಳು ಮತ್ತು ಐತಿಹಾಸಿಕ ವೆಸ್ಟ್ ಬ್ಯಾಂಕ್ ಗೋಡೆಯ ಪ್ರದೇಶವು ಭಯದ ಚಿತ್ರವನ್ನು ಪ್ರದರ್ಶಿಸುತ್ತಿದ್ದು, ಹಲವಾರು ಪ್ಯಾಲೇಸ್ಟಿನಿಯನ್ (ಅರಬ್) ಪ್ರಜೆಗಳು ವ್ಯಾಪಾರ ಉದ್ದೇಶಗಳಿಗಾಗಿ ಜೆರುಸಲೆಮ್‌ಗೆ ಸ್ಥಳಾಂತರಗೊಳ್ಳುತ್ತಿದ್ದಾರೆ. ಹಮಾಸ್‌ನ ಕ್ರಮಗಳು ಮತ್ತು ಇಸ್ರೇಲಿ ಸೈನಿಕರ ಪ್ರತೀಕಾರದ ಕ್ರಮಗಳಿಂದ ಪ್ರದೇಶದ ಟ್ಯಾಕ್ಸಿ ಚಾಲಕರು ಮತ್ತು ಅಂಗಡಿಯ ಮಾಲೀಕರು ತೀವ್ರ ನಷ್ಟ ಮತ್ತು ಅಸಮಾಧಾನಗೊಂಡಿದ್ದಾರೆ.

ಹಮಾಸ್ ಅಕ್ಟೋಬರ್ 7 ರಂದು ಇಸ್ರೇಲ್ ಮೇಲೆ ಹಠಾತ್ ದಾಳಿ ನಡೆಸಿತು. ಇದರ ನಂತರ, ಇಸ್ರೇಲ್ ಹಮಾಸ್ ವಿರುದ್ಧ ಪ್ರತಿದಾಳಿ ನಡೆಸಿತು ಮತ್ತು ಭಯೋತ್ಪಾದಕ ಗುಂಪನ್ನು ನಾಶಮಾಡುವ ಪ್ರತಿಜ್ಞೆ ಮಾಡಿತು. ಜೆರುಸಲೇಂನಲ್ಲಿರುವ ಅರಬ್ ಟ್ಯಾಕ್ಸಿ ಡ್ರೈವರ್ ಶಾಹಿದ್ ಈ ಪರಿಸ್ಥಿತಿಯಿಂದ ಕಂಗಾಲಾಗಿದ್ದಾರೆ. ಇಸ್ರೇಲ್ ಮತ್ತು ಹಮಾಸ್ ನಡುವೆ ನಡೆಯುತ್ತಿರುವ ಸಂಘರ್ಷವು ನಗರದಲ್ಲಿ ವಾಸಿಸುವ ಇಸ್ರೇಲಿಗಳು ಮತ್ತು ಅರಬ್ಬರ ನಡುವೆ ದ್ವೇಷವನ್ನು ಸೃಷ್ಟಿಸಿದೆ ಎಂದು ಅವರು ಬಹಿರಂಗಪಡಿಸಿದರು. ಅನೇಕ ಇಸ್ರೇಲಿಗಳು ಅರಬ್ ಒಡೆತನದ ಟ್ಯಾಕ್ಸಿಗಳಲ್ಲಿ ಸವಾರಿ ಮಾಡಲು ನಿರಾಕರಿಸುತ್ತಾರೆ. ಇದು ಸ್ಥಳೀಯ ಜನರ ನಡುವಿನ ಉದ್ವಿಗ್ನತೆಯನ್ನು ಉಲ್ಬಣಗೊಳಿಸುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಎಎನ್‌ಐ ಸುದ್ದಿಸಂಸ್ಥೆ ಜೊತೆ ಮಾತನಾಡಿದ ಅವರು, ಅಲ್ ಅಕ್ಸಾ ಮಸೀದಿಯಲ್ಲಿ 45 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಮಾತ್ರ ಪ್ರಾರ್ಥನೆಗೆ ಹೋಗಲು ಅವಕಾಶವಿದೆ. ಇಸ್ರೇಲ್ ಮೇಲೆ ಹಮಾಸ್ ದಾಳಿ ನಡೆಸಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಾಹಿದ್, ಯುದ್ಧದಿಂದಾಗಿ ನಮಗೆ ಯಾವುದೇ ವ್ಯವಹಾರವಿಲ್ಲ, ನಾವು ಶಾಂತಿಯನ್ನು ಬಯಸುತ್ತೇವೆ ಎಂದು ಹೇಳಿದರು. ಮತ್ತೊಬ್ಬ ಅಂಗಡಿಯವ ನಿಹಾದ್ ಕೂಡ ಇದೇ ಕಥೆಯನ್ನು ಹಂಚಿಕೊಂಡಿದ್ದು, ವ್ಯಾಪಾರವಿಲ್ಲ, ಏನೂ ಇಲ್ಲ, ಯುದ್ಧದಿಂದಾಗಿ ಎಲ್ಲವೂ ನಿಂತು ಹೋಯಿತು. ನಾವು ಯುದ್ಧದಲ್ಲಿದ್ದೇವೆ. ಎಂದು ಹೇಳಿದರು.

ನಾಲ್ವಡಿ ಸ್ಮರಣೆಯೊಂದಿಗೆ ಅರಮನೆ ವೇದಿಕೆ ಕಾರ್ಯಕ್ರಮಕ್ಕೆ ವೈಭವದ ತೆರೆ

ವರ್ಣರಂಜಿತ ನೃತ್ಯ-ಇಂಪಾದ ಸಂಗೀತಕ್ಕೆ ಪುಳಕಿತರಾದ ಪ್ರೇಕ್ಷಕರು





ಮೈಸೂರು, ಅ.22(ಎಸ್‌ಬಿಡಿ)- 'ಜಯಹೇ ನಾಲ್ವಡಿ' ಹಾಡುಹಬ್ಬದೊಂದಿಗೆ ಅರಮನೆ ಪ್ರಧಾನ ವೇದಿಕೆಯ ದಸರಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಭಾನುವಾರ ವೈಭವದ ತೆರೆಬಿದ್ದಿತು.

ಈ ಬಾರಿ ದಸರಾ ಉದ್ಘಾಟನೆ ನೆರವೇರಿಸಿದ ನಾದಬ್ರಹ್ಮ ಹಂಸಲೇಖ ಅವರ ನೇತೃತ್ವದಲ್ಲಿ ಮೂಡಿಬಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತಾದ ಸಂಗೀತ-ನೃತ್ಯ-ದೃಶ್ಯ ಪ್ರದರ್ಶನ 'ಜಯಹೇ ನಾಲ್ವಡಿ' ವಿಶೇಷ ಕಾರ್ಯಕ್ರಮಕ್ಕೆ ಸಹಸ್ರಾರು ಮಂದಿ ಸಾಕ್ಷಿಯಾದರು.

'ಸಂಗೀತವೇ ನನ್ನ ದೇವರು...' ಹಾಡಿನೊಂದಿಗೆ ಭವ್ಯ ವೇದಿಕೆ ಏರಿದ ಹಂಸಲೇಖ, ನೆರೆದಿದ್ದವರಿಗೆ ನಮಿಸಿದರು. ಈ ವೇಳೆ ಒಂದೊಂದು ಅಕ್ಷರಗಳನ್ನಿಡಿದಿದ್ದ ನೃತ್ಯ ಕಲಾವಿದರು 'ಹಂಸಲೇಖ, ಐದನಿ, ಐಕಾನ್, ಐದಶ' ಪದಗಳಾಗಿ ಜೋಡಿಸುವ ಮೂಲಕ ಚಿತ್ರರಂಗದಲ್ಲಿ ಹಂಸಲೇಖ ಅವರ 5 ದಶಕಗಳ ಸಾರ್ಥಕ ಪಯಣವನ್ನು ಕಣ್ಮುಂದೆ ಕಟ್ಟಿದರು.

'ನಾಲ್ವಡಿ ಭೂಪ ಮನೆ ಮನೆ ದೀಪ, ಜಯ ಹೇ ನಾಲ್ವಡಿ ಬಹುಪರಾಕ್, ಹೈದ ಕನ್ನಡ ಹೈದ...' ಉದ್ಘೋಷ ಮೊಳಗಿತು. 300 ಮಂದಿ ಕಲಾವಿದರು ಗಾಯನ, ನೃತ್ಯ, ವಾದ್ಯ ಸಂಗೀತ, ದೃಶ್ಯದ ಮೂಲಕ ನಾಲ್ವಡಿ ಅವರ ಜೀವನ ಮತ್ತು ಸಾಧನೆಯನ್ನು ಮನೋಜ್ಞವಾಗಿ ಜೋಡಿಸಿದ್ದು ಎಲ್ಲರ ಮನಮುಟ್ಟುವಲ್ಲಿ ಯಶಸ್ವಿಯಾಯಿತು. ಈ ವಿಶೇಷ ಪರಿಕಲ್ಪನೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಮಹತ್ವವನ್ನು ಸಾರಲಾಯಿತು.

ನಾಲ್ವಡಿ ಅವರ ಬಾಲ್ಯ, ಅವರು ಮಹಾರಾಜರಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭ, ನಂತರದಲ್ಲಿ ಎದುರಾದ ಸವಾಲುಗಳು, ಪ್ರಜೆಗಳಿಗಾಗಿ ಕಾವೇರಿ ನದಿಗೆ ಕನ್ನಂಬಾಡಿ ಅಣೆಕಟ್ಟು ಕಟ್ಟಿದ್ದು, ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ ಮೂಲಕ ಶಿಕ್ಷಣ ಕ್ರಾಂತಿ, ಶಿವನ ಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ ಹೀಗೆ ನಾಲ್ವಡಿ ಅವರು ಹಲವು ಪ್ರಥಮಗಳಿಗೆ ಸಾಕ್ಷಿಯಾಗಿದ್ದನ್ನು ಹಂಸಲೇಖ ಅವರ ಹಾಡುಗಳ ಮೂಲಕವೇ ಪ್ರಸ್ತುತಪಡಿಸಿದ್ದು ನೆರೆದಿದ್ದವರ ಮೈನವಿರೇಳಿಸಿತು. ಪ್ರಸಿದ್ಧ ಚಿತ್ರಗೀತೆಗಳ ಮೂಲ ರಾಗಸಂಯೋಜನೆ ಹಾಗೂ ಸಂಗೀತಕ್ಕೆ ನಾಲ್ವಡಿ ಅವರ ವರ್ಣಿಸುವ ಪದ ಪೋಣಿಸಿ ಪುಳಕಗೊಳಿಸಿದರು.

ತಾರಾ ಮೆರಗು: ಜಯಹೇ ನಾಲ್ವಡಿ ಪ್ರಸ್ತುತಿಯಲ್ಲಿ ನಾಲ್ವಡಿಯವರ ತಾಯಿಯಾಗಿ ವಿನಯ ಪ್ರಸಾದ್, ದಿವಾನರಾಗಿ ಶ್ರೀನಿವಾಸ್ ಮೂರ್ತಿ, ಯೌವ್ವನಾವಸ್ಥೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಆಗಿ ವಿಜಯ ರಾಘವೇಂದ್ರ ನಟಿ ಹರ್ಷಿತಾ ಪೂಣಚ್ಚ ಅವರೊಂದಿಗೆ ಲತಾ ಹಂಸಲೇಖ ಹಾಗೂ ಹೇಮಂತ್ ಕಂಠದಲ್ಲಿ ಮೂಡಿ ಬಂದ 'ಎಲೆ ಹೊಂಬಿಸಿಲೆ..' ಗೀತೆಗೆ ಹೆಜ್ಜೆ ಹಾಕಿದರು. ಕಂಬದ ರಂಗಯ್ಯ 'ಬೊಂಬೆ ಬೊಂಬೆ ನಾನು ಮೈಸೂರು ದಸರಾ ಬೊಂಬೆ...', ಹೇಮಂತ್ 'ಕನ್ನಡ ರೋಮಾಂಚನವೀ ಕನ್ನಡ...' ಎಂದು ಹಾಡಿ ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿದರು.

ಎವರ್‌ಗ್ರೀನ್ ಸಿನಿಮಾ 'ಪ್ರೇಮಲೋಕ'ದ 'ನೋಡಮ್ಮ ಹುಡುಗಿ..' ಗೀತೆಯ ಸಾಹಿತ್ಯವನ್ನು 'ನೋಡಮ್ಮ ಕಾವೇರಮ್ಮ...' ಎಂದು ಬದಲಿಸಿ ಹೇಮಂತ್ ಪ್ರಸ್ತುತಪಡಿಸಿದರು. ಇದೇ ವೇಳೆ ಗಾಯಕರ ಸಮೂಹ 'ಬಂಗಾರವನ್ನು ಮನೆಯಿಂದ ತಂದ, ಅಡಮಾನ ವಿಟ್ಟು ಹಣವನ್ನು ತಂದ, ಮೈಸೂರಿಗೊಂದು ಮೈನವಿರು ತಂದ..' ಸಾಲುಗಳನ್ನು ಹಾಡುವ ಮೂಲಕ ತಲಕಾವೇರಿಗೆ ಅಣೆಕಟ್ಟು ಕಟ್ಟಿದ ನಾಲ್ವಡಿಯವರಿಗೆ ಸಾಹಸ ಗಾಥೆಯನ್ನು ಮನಮುಟ್ಟಿಸಿದರು.

'ಲಾಕಪ್‌ಡೆತ್' ಸಿನಿಮಾದ ಗೀತೆಯ ಸಾಹಿತ್ಯ ಬದಲಿಸಿ 'ಬಂತು ಬಂತು ಕರೆಂಟ್ ಬಂತು, ಕನ್ನಡ ನಾಡಿನಲಿ ಸುಂದರ ರಾತ್ರಿಯಿಲಿ..' ಎಂದು ಹಾಡುವ ಮೂಲಕ ನಾಲ್ವಡಿ ಅವರು ಶಿವನ ಸಮುದ್ರದಲ್ಲಿ ವಿದ್ಯುತ್ ಉತ್ಪಾದನೆಗೆ ಕಾರಣವಾಗಿದ್ದನ್ನು ಸ್ಮರಿಸಿಕೊಳ್ಳಲಾಯಿತು. ಹೀಗೆ ಒಂದೊಂದು ಗೀತೆ ನಡುವೆ ವೇದಿಕೆಯಲ್ಲಿ ಅದಕ್ಕೆ ಹೊಂದುವಂತಹ ದೃಶ್ಯ ಹಾಗೂ ನೃತ್ಯ ವೈಭವ ಪ್ರಸ್ತುತಗೊಂಡಿತು.

ಮನತಣಿಸಿದ ರಂಗಗೀತೆ: ಇದಕ್ಕೂ ಮುನ್ನ ನಿಸರ್ಗ ಮತ್ತು ವಿಸ್ಮಯ ಅವಳಿ ಸೋದರಿಯರು ರಂಗಗೀತೆಗಳ ಮೂಲಕ ನೆರೆದಿದ್ದವರ ಮನ ಸೆಳೆದರು. 'ರಜತಗಿರಿ ನಿಲಯೇ ಅಮ್ಮಾ ಶಿವಶಂಕರೀ ಶ್ರೀ ರಾಜರಾಜೇಶ್ವರಿ...' ಭಕ್ತಿ ರಂಗಗೀತೆಯೊಂದಿಗೆ ಗಾಯನ ಯಾನ ಆರಂಭಿಸಿದ ಸೋದರಿಯರು, 'ವನ ಸಾರಂಗ ಮೃಗವಿದು...', 'ಗೋಪಾಲ ಮನಮೋಹನಾ...', 'ಮೋಹದಾ ಮೋಹದಾ ಸಂಗೀತಾ ಮಂಜುಳಾ...', ರಾಮಕಥಾಮೃತ ಸಾರ ಇಹಪರ ಸುಖಗಳಿಗಾದಾರ...', 'ಘೋರ ಶೋಕದೊಳು ಬರುತೆ ಶ್ರೀರಾಮಾ...', ಸೇರಿದಂತೆ ಹಲವು ರಂಗ ಗೀತೆಗಳನ್ನು ಹಾಡಿ ರಂಜಿಸಿದರು.

10 ವೇದಿಕೆಗಳಲ್ಲಿ ಇಂದೂ ಕಾರ್ಯಕ್ರಮ

ಆಯುಧಪೂಜೆ ಹಿನ್ನೆಲೆಯಲ್ಲಿ ಅರಮನೆ ಪ್ರಧಾನ ವೇದಿಕೆಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಭಾನುವಾರ ತೆರೆಬಿದ್ದಿತು. ಆದರೆ ಜಗನ್ಮೋಹನ ಅರಮನೆ, ಕಲಾಮಂದಿರ, ಕಿರು ರಂಗಮಂದಿರ, ಗಾನಭಾರತಿ, ನಾದಬ್ರಹ್ಮ, ಚಿಕ್ಕಗಡಿಯಾರ, ಪುರಭವನ, ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನ ಆವರಣ, ರಮಾಗೋವಿಂದ ನಟನ ರಂಗಮಂದಿರದಲ್ಲಿ ಸೋಮವಾರ ಸಂಜೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ನಾಳೆ ರೈತರಿಂದ ರಸ್ತೆ ತಡೆ ಚಳವಳಿ

● ಸರ್ಕಾರದ ವಿರುದ್ಧ ಕರಾಳ ದಿನ ಆಚರಣೆ ● ಕುರುಬೂರು ಶಾಂತಕುಮಾರ್ ಎಚ್ಚರಿಕೆ



ತಿ.ನರಸೀಪುರ, ಅ.22–ಕಾವೇರಿ ನದಿ ನೀರು ಹಾಗೂ ಕಬ್ಬು ದರ ನಿಗದಿ ವಿಚಾರದಲ್ಲಿ ರೈತರಿಗೆ ದ್ರೋಹ ಬಗೆಯುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಅ.24ರ ವಿಜಯ ದಶಮಿ ದಿನ ರಸ್ತೆ ಸಂಚಾರ ತಡೆ ಚಳವಳಿ ಮೂಲಕ ಕರಾಳ ದಿನ ಆಚರಿಸಲಾಗುವುದು ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಆಹಾರ ಉತ್ಪಾದಿಸುವ ಅನ್ನದಾತರಿಗೆ 10 ಗಂಟೆ ವಿದ್ಯುತ್ ನೀಡುವ ಭರವಸೆ ನೀಡಿದ ಸರ್ಕಾರ, ಈಗ 5 ಗಂಟೆ ವಿದ್ಯುತ್ ನೀಡುತ್ತಿದೆ. ಕೈಗಾರಿಕೆಗಳಿಗೆ ಯಾವುದೇ ನಿರ್ಬಂಧವಿಲ್ಲದೆ ವಿದ್ಯುತ್ ನೀಡುವ ಮೂಲಕ ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ. ರೈತರ ಮೂಗಿಗೆ ತುಪ್ಪ ಸವರುವ ಹೇಳಿಕೆ ನೀಡುತ್ತಾ ಬರಗಾಲದಿಂದ ನರಳುತ್ತಿರುವ ರೈತನ ಕೃಷಿ ಪಂಪ್‌ಸೆಟ್‌ಗಳಿಗೆ ಕೇವಲ 5 ಗಂಟೆ ವಿದ್ಯುತ್ ನೀಡಿ ದ್ರೋಹವೆಸಗುತ್ತಿದೆ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಸರಿಯಾಗಿ ಮಳೆ ಇಲ್ಲದೆ ಬರಗಾಲವಿದ್ದರೂ ಕಾವೇರಿ ಅಚ್ಚುಕಟ್ಟು ಭಾಗದ ರೈತರ ಬೆಳೆಗಳಿಗೆ ನೀರು ನೀಡದೆ, ತಮಿಳುನಾಡಿಗೆ ನೀರು ಹರಿಸಿ ರಾಜ್ಯದ ಜನರಿಗೆ ದ್ರೋಹ ಬಗೆಯುತ್ತಿದೆ. ಇನ್ನು ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವುದನ್ನು ನಿಲ್ಲಿಸುವಂತೆ ಹೋರಾಟ ನಡೆಸುತ್ತಿದ್ದರು, ಸರ್ಕಾರ ನಿರ್ಲಕ್ಷಿಸುತ್ತದೆ ಆರೋಪಿಸಿದರು.

ಸರ್ಕಾರ ಸರಳ ದಸರಾ ಆಚರಿಸುವುದಾಗಿ ಹೇಳಿ, ಸಂಕಷ್ಟ ಕಾಲದಲ್ಲೂ ಮೋಜಿಗಾಗಿ ಮೈಸೂರಿನ ಎಲ್ಲೆಡೆ ವಿದ್ಯುತ್ ದೀಪಗಳನ್ನು ಪ್ರಜ್ವಲಗೊಳಿಸಿ ರೈತರಿಗೆ [illegible] ವಿದ್ಯುತ್ ನೀಡದಲು ಮುಂದಾಗುತ್ತಿದೆ. ಕಬ್ಬು ಬೆಳೆಗಾರರು ಕಳೆದ ವರ್ಷ 39 ದಿನ ಹೋರಾಟ ಮಾಡಿದ ಪರಿಣಾಮ ಕಬ್ಬಿಗೆ ಹೆಚ್ಚುವರಿ ನಿಗದಿ ಮಾಡಿದ 150 ರೂ. ಅನ್ನು ಸಕ್ಕರೆ ಕಾರ್ಖಾನೆಗಳಿಂದ ಕೊಡಿಸದೆ ರೈತರನ್ನು ದಿಕ್ಕು ತಪ್ಪಿಸಲಾಗುತ್ತಿದೆ ಎಂದರು.

ಕಬ್ಬಿನ ಎಫ್‌ಆರ್‌ಪಿ ದರ ನಿಗದಿ, ಉತ್ಪಾದನೆ ವೆಚ್ಚಕ್ಕಿಂತ ಕಡಿಮೆಯಾಗುತ್ತಿದೆ. ಸಕ್ಕರೆ ಇಳುವರಿ 8.5 ರಿಂದ 10.25ರವರೆಗೆ ಏರಿಕೆ ಮಾಡಿರುವುದು. ಎಫ್‌ಆರ್‌ಪಿ ದರ ಏರಿಕೆ ಮಾಡಿದರೂ ರೈತರಿಗೆ ಲಾಭ ಸಿಗುತ್ತಿಲ್ಲ.

ಒಂದು ಟನ್ ಕಬ್ಬು ಬೆಳೆಯಲು 3580 ರೂ. ವೆಚ್ಚವಾಗುತ್ತದೆ. ಆದರೆ, ಸರ್ಕಾರ 3150 ರೂ. ನಿಗದಿ ಮಾಡುತ್ತಿದೆ. ಎಫ್‌ಆರ್‌ಪಿ ಏರಿಕೆ ಮಾಡಿದರೂ ಹೆಚ್ಚುವರಿ ಹಣ ರೈತರಿಗೆ ಸಿಗುತ್ತಿಲ್ಲ. ಇದರಿಂದ ನಷ್ಟ ಅನುಭವಿಸುವಂತಾಗಿದೆ. ಈ ಬಗ್ಗೆ ಯಾವ ಸಂಸದರು ಹಾಗೂ ಶಾಸಕರು ಮಾತನಾಡುತ್ತಿಲ್ಲ. 225 ತಾಲೂಕುಗಳನ್ನು ಬರ ಘೋಷಣೆ ಮಾಡಿದರೂ ಬೆಳೆ ನಷ್ಟ ಅಂದಾಜು ಮಾಡಿ ಪರಿಹಾರ ನೀಡಿಲ್ಲ. ಎನ್‌ಡಿಆರ್‌ಎಫ್ ಮಾನದಂಡ ತಿದ್ದುಪಡಿ ಮಾಡಬೇಕು ಎಂದು ಒತ್ತಾಯಿಸಿದರು.

ರೈತರು ಸ್ಮಶಾನದಲ್ಲಿದ್ದರೆ ಸರ್ಕಾರ ಮೋಜಿನಲ್ಲಿ ಮರೆಯಾಗುತ್ತಿದೆ. ಆದ್ದರಿಂದ ರೈತರ ಎಲ್ಲಾ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಹೋರಾಟ ಹಮ್ಮಿಕೊಳ್ಳಲಾಗಿದೆ. ಅ.24ರಂದು ಹಳ್ಳಿಹಳ್ಳಿಗಳಲ್ಲಿ ರೈತರು ರಸ್ತೆ ಸಂಚಾರ ಬಂದ್ ಚಳವಳಿ ನಡೆಸಲಿದ್ದಾರೆ. ರೈತರ ಮರಣಶಾಸನ ಬರೆಯಲು ಹೊರಟ ಸರ್ಕಾರಕ್ಕೆ ಚಾಟಿ ಬೀಸಬೇಕಾಗಿದೆ. ಆದ್ದರಿಂದ ರೈತರು ಜಾಗೃತರಾಗಿ ಯಾವುದೇ ಪಕ್ಷ, ಜಾತಿ ಮರೆತು ಆಯಾ ಗ್ರಾಮಗಳಲ್ಲಿ ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಹತ್ತಳ್ಳಿ ದೇವರಾಜ್, ಕಿರಗಸೂರು ಶಂಕರ, ಕುರುಬೂರು ಸಿದ್ದೇಶ್, ಪ್ರಸಾದ್ ನಾಯಕ್, ನಂಜುಂಡಸ್ವಾಮಿ ಅದಿಬೆಟ್ಟಹಳ್ಳಿ, ಹೆಗ್ಗೂರ್ ರಂಗರಾಜ್, ಅಪ್ಪಣ್ಣ, ಕುರುಬೂರು ಪ್ರದೀಪ್, ರಾಜೇಶ್ ಯಾಕನೂರ್, ವಾಚ್ ಕುಮಾರ್, ಶಿವಸ್ವಾಮಿ ಹೆಗ್ಗೊಟರ, ಉಮೇಶ್ ಕರುವಟ್ಟಿ, ಮಲ್ಲೇಶ್, ಯೋಗೀಶ್ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಣಪತ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಿಯೋ (ತ)	2 ಪ್ರದರ್ಶನಗಳು
ಲಿಯೋ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಲಿಯೋ (ಕ)	3 ಪ್ರದರ್ಶನಗಳು
ಲಿಯೋ (ತ)	1 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಣಪತ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಟೈಗರ್ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಿಯೋ (ತ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ಘೋಸ್ಟ್ (ಕ): ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ದಸರಾ ಚಿತ್ರಗಳು: ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಗಣಪತ್ (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ಯಾರಿಯನ್ 2 (ಹಿಂ): ಬೆ.10.05ಕ್ಕೆ, ಗಣಪತ್ (ಹಿಂ): ಮ.1ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಮ.3.35ಕ್ಕೆ, ರಾ.7ಕ್ಕೆ, ಭಗವಂತ್ ಕೇಸರಿ (ತೆ): ರಾ.10.25ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಲಿಯೋ (ತ): ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಲಿಯೋ (ತ): ಬೆ.9.35ಕ್ಕೆ, ಮ.3.55ಕ್ಕೆ, ಘೋಸ್ಟ್ (ಕ): ಮ.1ಕ್ಕೆ, ರಾ.7.20ಕ್ಕೆ, ಗಣಪತ್ (ಹಿಂ): ರಾ.10.15ಕ್ಕೆ.
ಸ್ಕ್ರೀನ್ 2	ಲಿಯೋ (ತ): ರಾ.10.20ಕ್ಕೆ.
ಸ್ಕ್ರೀನ್ 3	ಭಗವಂತ್ ಕೇಸರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ಟೈಗರ್ ನಾಗೇಶ್ವರ್ ರಾವ್ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, **ಗಣಪತ್ (ಹಿಂ):** ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, **ಘೋಸ್ಟ್ (ಕ):** ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, **ಲಿಯೋ (ಕ):** ಮ.12.15ಕ್ಕೆ, **ಲಿಯೋ (ತ):** ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, **ಲಿಯೋ (ತ):** ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, **ಟೈಗರ್ ನಾಗೇಶ್ವರ್ ರಾವ್ (ತೆ):** ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, **ಯಾರಿಯನ್ 2 (ಹಿಂ):** ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಬನ್ನೂರು ಸಮೀಪದ ಶ್ರೀ ಒಡ್ಡಗಲ್ಲು ರಂಗನಾಥಸ್ವಾಮಿಯ ಮಜ್ಜನಕ್ಕೆ ಪಟ್ಟಣದ ಕಾವೇರಿ ನದಿ ತೀರದಿಂದ ಅರ್ಚಕರು ನೀರನ್ನು ಹೊತ್ತು ಭಕ್ತರೊಂದಿಗೆ ಬೆಟ್ಟಕ್ಕೆ ಸಾಗಿದರು.



ಮೂಗೂರು ಗ್ರಾಮದ ಶ್ರೀರಾಮ ಕಾಲೋನಿಯ ಎ.ನಾರಾಯಣಸ್ವಾಮಿ ಟ್ರಸ್ಟ್ ವತಿಯಿಂದ ಟ್ರಸ್ಟ್‌ನ ಸದಸ್ಯೆಯರಿಗೆ ಉಚಿತ ಅಡುಗೆ ಎಣ್ಣೆಯನ್ನು ಅಧ್ಯಕ್ಷ ಸುನೀಲ್ ಕುಮಾರ್ ವಿತರಿಸಿದರು. ತೇಜಸ್ವಿನಿ, ಶೋಭಾ, ಮಾಲಿನಿ, ಸೃಜನಾ, ಧನಲಕ್ಷ್ಮೀ, ಕಿರಣ, ಸೋನಾಕ್ಷಿ ಇದ್ದರು.

ಮೆದುಳುವಾತ ಸಮಸ್ಯೆಗೆ ಪ್ರಥಮ ಹಂತದಲ್ಲೇ ಚಿಕಿತ್ಸೆ



ಸರಗೂರು, ಅ.22– ಗರ್ಭಿಣಿಯರು ಅನಾಮಲಿ ಸ್ಕ್ಯಾನಿಂಗ್ ಮಾಡಿಸುವುದರಿಂದ ಹುಟ್ಟುವ ಮಕ್ಕಳ ಮೆದುಳುವಾತ ಸಮಸ್ಯೆ ತಡೆಗಟ್ಟಬಹುದು ಎಂದು ಸಂತಾನೋತ್ಪತ್ತಿ ಮತ್ತು ಮಕ್ಕಳ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಂ.ಎಸ್.ಜಯಂತ್ ತಿಳಿಸಿದರು.

ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿಶೇಷಚೇತನರಿಗಾಗಿ ಸಮಗ್ರ ಆರೈಕೆ, ಬೆಂಬಲ ಮತ್ತು ಚಿಕಿತ್ಸೆ ಯೋಜನೆಯ ವತಿಯಿಂದ ಆಯೋಜಿಸಿದ್ದ ವಿಶ್ವ ಸೆರೆಬ್ರಲ್ ಪಾಲ್ಸಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಅನಾಮಲಿ ಸ್ಕ್ಯಾನಿಂಗ್‌ನಿಂದ ಪತ್ತೆಯಾದರೆ ಮೆದುಳುವಾತ ಸಮಸ್ಯೆಗೆ ಪ್ರಥಮ ಹಂತದಲ್ಲಿ ಚಿಕಿತ್ಸೆ ಪಡೆಯಬಹುದು. ಮೆದುಳುವಾತ ಮಕ್ಕಳಿಗೆ ಮನೆಯ ಆಧಾರಿತ ತೆರಪಿ ತರಬೇತಿ ಪಡೆದು ಆರೈಕೆ ಮಾಡುವುದರಿಂದ ಆರೋಗ್ಯವಂತರಾಗಬಹುದು ಎಂದು ಸಲಹೆ ನೀಡಿದರು.

ಬೆಂಗಳೂರಿನ ಎಪಾಮ್ ಸಿಸ್ಟಮ್‌ನ ಲೀಡ್ ಎಂಜಿನಿಯರ್ ವಿಶೇಷ ಸಾಧಕ ಮಂಜುನಾಥ್ ರೆಡ್ಡಿ ಮಾತನಾಡಿ, ಸೆರೆಬ್ರಲ್ ಪಾಲ್ಸಿ ಇರುವವರು ಸಾಧನೆ ಮಾಡಲು ನ್ಯೂನತೆ ಅಡ್ಡಿ ಬರುವುದಿಲ್ಲ. ಅವರಿಗೆ ಬೇಕಾಗಿರುವುದು ಕೌಶಲ್ಯಗಳು. ಇದಕ್ಕೆ ಸಂಬಂಧಿಸಿದಂತೆ ಪೋಷಕರು ತರಬೇತಿ ಕೊಡಿಸಲು ಪ್ರೋತ್ಸಾಹಿಸಬೇಕು. ವಿಶೇಷಚೇತನರನ್ನು ತಾರತಮ್ಯ ಮಾಡದೆ ಸಮಾನವಾಗಿ ಕಾಣಬೇಕು ಎಂದು ತಿಳಿಸಿದರು.

ಇದೇ ವೇಳೆ ಸಂಸ್ಥೆ ವತಿಯಿಂದ ವಿಶೇಷ ಚೇತನರಿಗೆ 16 ವ್ಹೀಲ್‌ಚೇರ್ ಮತ್ತು ಕಲಿಕಾ ಕಿಟ್‌ಗಳನ್ನು ವಿತರಿಸಲಾಯಿತು. ನಂತರ ಮೈಸೂರಿನ ವಿಸ್ಡಮ್ ವಿಶೇಷ ಶಾಲೆಯ ಮಕ್ಕಳು ದೇಶಭಕ್ತಿ ಗೀತೆಗೆ ನೃತ್ಯ ಪ್ರದರ್ಶಿಸಿದರು. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಮುಖ್ಯ ಕಾರ್ಯನಿರ್ವಾಹಕಿ ಎಸ್.ಸವಿತಾ, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ವಿವೇಕಾನಂದ ಸ್ಮಾರಕ ಆಸ್ಪತ್ರೆಯ ನಿರ್ದೇಶಕ ಡಾ.ಜಿ.ಎಸ್.ಕುಮಾರ್, ವ್ಯವಸ್ಥಾಪಕರಾದ ಸುಷ್ಮಶ್ರೀ, ಡಾ.ಅಭಿಷೇಕ್, ಸಂತೋಷ, ದೀಪಶ್ರೀ, ಬಂಗಾರಶೆಟ್ಟಿ, ವೆಂಕಟಸ್ವಾಮಿ, ನಾಗೇಶ, ನಿಂಗರಾಜು, ಗೋಪಾಲಕೃಷ್ಣ, ಮಮತಾ, ಪೂರ್ಣಿಮಾ, ವಿಶೇಷ ಮಕ್ಕಳ ಪೋಷಕರಾದ ಸೌಮ್ಯಾ, ವಿದ್ಯಾ, ಕುಸುಮ, ಸಿಬ್ಬಂದಿ ಉಪಸ್ಥಿತರಿದ್ದರು.

ನ.5, ಪರೀಕ್ಷಾ ಕಾರ್ಯಕ್ರಮ

ಹಿರಿಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಬಿಳಿಗೆರೆ ಗ್ರಾಮದ ಅನ್ವೇಷಣಾ ಶಿಕ್ಷಣ ಸಂಸ್ಥೆ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಉದ್ದೇಶದಿಂದ 8ನೇ ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಎಸ್ಯಾಟ್ ಪರೀಕ್ಷೆ ಆಯೋಜಿಸಿದೆ. ಈ ಸಂಸ್ಥೆ ಪ್ರತಿವರ್ಷದಂತೆ ಈ ಬಾರಿ ನ.24 ರಂದು ನಡೆಸುವ ಸಂಸ್ಥಾಪಕರ ದಿನದ ಅಂಗವಾಗಿ ನವೆಂಬರ್ ಅನ್ನು ಪ್ರತಿಭಾನ್ವೇಷಣಾ ಮಾಸ ಎಂದು ಆಚರಿಸಲಾಗುವುದು.

ನ.5ರಂದು ಹುಣಸೂರು, ಕೆ.ಆರ್. ನಗರ, ಪಿ.ಪಟ್ಟಣ ತಾಲೂಕಿನ ಗ್ರಾಮೀಣ ವಿದ್ಯಾರ್ಥಿಗಳಿಗೆ ಪರೀಕ್ಷಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನ.19ರಂದು ಇಂಗ್ಲಿಷ್ ತರಬೇತಿ ಹಾಗೂ ಸರಳ ಗಣಿತ ಕಲಿಕೆ ಆಯೋಜಿಸಿದ್ದು, ಆಸಕ್ತ ವಿದ್ಯಾರ್ಥಿಗಳು ಮೊ.ಸಂ: 9901136782, 8495098544 ಅನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಮುಖ್ಯಸ್ಥ ಚಂದ್ರಮೋಹನ್ ತಿಳಿಸಿದ್ದಾರೆ.

2ನೇ, 4ನೇ ಭಾನುವಾರ ಮಾನಸಿಕ ಆರೋಗ್ಯ ತಪಾಸಣೆ



ಹೆಚ್.ಡಿ.ಕೋಟೆ, ಅ.22– ತಾಲೂಕಿನ ಶಾಂತಿಪುರ ಗ್ರಾಮದ ಚಿತ್ತಧಾಮದಲ್ಲಿ ಪ್ರತಿ 2ನೇ ಮತ್ತು 4ನೇ ಭಾನುವಾರ ಮಾನಸಿಕ ಆರೋಗ್ಯ ತಪಾಸಣೆ ನಡೆಸಲಾಗುವುದು ಎಂದು ಚಿತ್ತಧಾಮ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಮನೋವೈದ್ಯ ಡಾ.ಜಿ.ಆರ್.ರವಿಶಂಕರ್ ರಾವ್ ತಿಳಿಸಿದರು.

ಶಾಂತಿಪುರ ಚಿತ್ತಧಾಮದಲ್ಲಿ ಬೆಂಗಳೂರಿನ ಚಿತ್ತಪ್ರಕಾಶ್ ಚಾರಿಟಬಲ್ ಟ್ರಸ್ಟ್, ನಿರಾಶ್ರಿತ ಮಾನಸಿಕ ಅಸ್ವಸ್ಥರ ಪುನರ್ವಸತಿ ತಾಣದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಪುನರ್ವಸತಿ ಕೇಂದ್ರಕ್ಕೆ ಹರಿಯಾಣ, ಮಧ್ಯಪ್ರದೇಶ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಿಂದ ಬಂದು ತಪಾಸಣೆಗೆ ಒಳಗಾಗಿ ಗುಣಮುಖರಾಗುತ್ತಿದ್ದಾರೆ. ಬೇರೆ ರಾಜ್ಯದಿಂದ ಬರಲು ಆರ್ಥಿಕ ಸಮಸ್ಯೆ ಎದುರಾಗುವ ಬಡವರಿಗೆ ಟ್ರಸ್ಟ್ ಮೂಲಕವೇ ಹಣದ ವ್ಯವಸ್ಥೆ ಮಾಡಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾಗುವುದು ಎಂದರು.

ಯೋಗ ಶಿಕ್ಷಕ ಲೋಕೇಶ್ ಮಾತನಾಡಿ, ಮಾನಸಿಕ ಆರೋಗ್ಯ ಸ್ಥಿಮಿತದಲ್ಲಿರದ ಕಾರಣ ಇಂದು ಇಸ್ರೇಲ್‌ನಲ್ಲಿ ನಡೆಯುತ್ತಿರುವ ಯುದ್ಧವೇ ಉದಾಹರಣೆ. ಇಂದು ವಿಶ್ವವೇ ಭಾರತದತ್ತ ತಿರುಗಿ ನೋಡುತ್ತಿದೆ ಎಂದರೆ ಅದಕ್ಕೆ ಯೋಗ ಕಾರಣ. 2500 ವರ್ಷದ ಹಿಂದೆ ಪತಂಜಲಿಯಿಂದ ಅನುಷ್ಠಾನಗೊಂಡ ಯೋಗ ವಿಶ್ವದಲ್ಲೇ ಹರಡಿದೆ ಎಂದರು.

ಇದೇ ಸಂದರ್ಭದಲ್ಲಿ ಮಾನಸಿಕ ಅಸ್ವಸ್ಥರಿಗೆ ಯೋಗ ತರಗತಿ ಆರಂಭಿಸಲಾಯಿತು. ರೈತ ಸಂಘ ಜಿಲ್ಲಾ ಉಪಾಧ್ಯಕ್ಷ ಪಳನಿಸ್ವಾಮಿ, ಬೆಂಗಳೂರಿನ ಎಂ.ಎಸ್.ರಾಮಯ್ಯ ಆಸ್ಪತ್ರೆಯ ಮಾನಸಿಕ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ.ಮುರಳಿ, ಚಿತ್ತಧಾಮ ವ್ಯವಸ್ಥಾಪಕ ಮಾದೇವಸ್ವಾಮಿ, ಆರಕ್ಷಕ ನಿರೀಕ್ಷಕ ಶಬ್ಬೀರ್ ಹುಸೇನ್, ಆರಕ್ಷಕ ಉಪ ನಿರೀಕ್ಷಕ ಸುಭಾನ್, ಐಟಿಐ ಕಾಲೇಜಿನ ಉಪನ್ಯಾಸಕ ಲೋಕೇಶ್, ಪುರಸಭಾ ಸದಸ್ಯ ಲೋಕೇಶ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ಗ್ರಾಮದ ಮುಖಂಡ ಶಿವಣ್ಣನಾಯಕ, ಸ್ವಾಮಿ, ಗಣಿ ಸಾಹೇಬ್, ಕಮಲಮ್ಮ, ಮಂಜುಳಾ ಸುಧಾ, ರತ್ನಮ್ಮ, ಶಿವಮ್ಮ, ಸಣ್ಣಮ್ಮ, ನಾಗಮ್ಮ, ಭಾಗ್ಯಮ್ಮ ಇದ್ದರು.

ಹಸುವಿಗೆ ನೀರು ಕುಡಿಸಲು ಹೋದ ಯುವಕ ನೀರು ಪಾಲು



ಸರಗೂರು, ಅ.22– ನಾಲೆಯಲ್ಲಿ ಹಸುವಿಗೆ ನೀರು ಕುಡಿಸಲು ಹೋದ ಯುವಕ ಮುಳುಗಿ ಮೃತಪಟ್ಟಿರುವ ಘಟನೆ ತಾಲೂಕಿನ ತುಂಬಸೋಗೆ ಗ್ರಾಮದಲ್ಲಿ ಶನಿವಾರ ನಡೆದಿದೆ.

ಯರಹಳ್ಳಿ ಗ್ರಾಮದ ಹಣ್ಣಿನ ವ್ಯಾಪಾರಿ ಶಿವಣ್ಣ ಅವರ ಪುತ್ರ ಶ್ರೀಹರಿಪ್ರಸಾದ್ (17) ಮೃತ ಯುವಕ. ಈತ ಹೆಚ್.ಡಿ.ಕೋಟೆಯ ಖಾಸಗಿ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದು, ದಸರಾ ರಜೆಗಾಗಿ ಸಮೀಪದ ನಿಲವಾಗಿಲು ಗ್ರಾಮದ ಸಂಬಂಧಿಕರ ಮನೆಗೆ ಬಂದಿದ್ದನು.

ಶನಿವಾರ ಸಂಜೆ ತುಂಬಸೋಗೆ ಎಡದಂಡೆ ನಾಲೆಗೆ ಹಸುವಿಗೆ ನೀರು ಕುಡಿಸಲು ತೆರಳಿದ್ದಾನೆ. ಈ ವೇಳೆ ಹಸು ಕಾಲುವೆಗೆ ಇಳಿದು ನೀರು ಕುಡಿಯುವಾಗ ಹಗ್ಗ ಎಳೆದಿದ್ದರಿಂದ ದಡದಲ್ಲಿ ನಿಂತಿದ್ದ ಶ್ರೀಹರಿಪ್ರಸಾದ್ ನೀರಿಗೆ ಬಿದ್ದು ಮೃತಪಟ್ಟಿದ್ದಾನೆ. ಈತ ಎಷ್ಟು ಸಮಯವಾದರೂ ಮನೆಗೆ ಬಾರದಿದ್ದರಿಂದ ಸಂಬಂಧಿಕರು ಕಾಲುವೆ ಬಳಿ ಬಂದು ನೋಡಿದಾಗ ಮೃತಪಟ್ಟಿರುವುದು ಪತ್ತೆಯಾಗಿದೆ.

ನಂತರ ನೀರಿನಲ್ಲಿ ಹುಡುಕಾಟ ನಡೆಸಿದರೂ ರಾತ್ರಿಯಾಗಿದ್ದರಿಂದ ಶವ ಪತ್ತೆಯಾಗಲಿಲ್ಲ. ಭಾನುವಾರ ಬೆಳಗ್ಗೆ ಮೃತದೇಹ ಸಿಕ್ಕಿದೆ. ಈ ವೇಳೆ ಕುಟುಂಬಸ್ಥರ ರೋದನ ಮುಗಿಲು ಮುಟ್ಟುತ್ತಿತ್ತು. ಸರಗೂರು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವೈಯಕ್ತಿಕ ಕಾಮಗಾರಿ ಮೊತ್ತ 5 ಲಕ್ಷ ರೂ.ಗೆ ಹೆಚ್ಚಳ



ಹುಣಸೂರು, ಅ.22–ನರೇಗಾ ಯೋಜನೆಯಡಿ ವೈಯಕ್ತಿಕ ಕಾಮಗಾರಿಯ ಗರಿಷ್ಠ ಮೊತ್ತವನ್ನು 2.50 ಲಕ್ಷ ರೂ.ನಿಂದ 5 ಲಕ್ಷ ರೂ.ಗೆ ಹೆಚ್ಚಿಸಲಾಗಿದ್ದು, ಗ್ರಾಮಸ್ಥರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಾಲೂಕಿನ ಉದ್ದೂರ್ ಕಾವಲ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನವೀನ್ ಕುಮಾರ್ ತಿಳಿಸಿದರು.

ಗ್ರಾಪಂ ವ್ಯಾಪ್ತಿ ಏರ್ಪಡಿಸಿದ್ದ ಉದ್ಯೋಗ ಖಾತ್ರಿ ನಡಿಗೆ ಸುಸ್ಥಿರತೆಯಡೆಗೆ ಅಭಿಯಾನದಡಿ ಜಾಥಾ ಹಾಗೂ ಮನೆ ಮನೆಗೆ ಕ್ಯೂ ಆರ್ ಕೋಡ್ ಅಂಟಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನರೇಗಾ ಯೋಜನೆಯಡಿ ಕೂಲಿಕಾರರಿಗೆ ಕೆಲಸ ಒದಗಿಸುವ ಜತೆಗೆ ಅರ್ಹ ಫಲಾನುಭವಿಗಳ ಜೀವನಾಧಾರಕ್ಕೆ ನೆರವಾಗುವ ವೈಯಕ್ತಿಕ ಜೀವಿತಾವಧಿ ಹಣ ಹೆಚ್ಚಿಸಲಾಗಿದೆ ಎಂದರು.

ಮುಂದಿನ ಆರ್ಥಿಕ ವರ್ಷದ ಕ್ರಿಯಾ ಯೋಜನೆ ತಯಾರಿಕೆಗಾಗಿ ನರೇಗಾ ಯೋಜನೆಯಡಿ ವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳ ಬೇಡಿಕೆಯನ್ನು ಪಡೆಯಲಾಗುತ್ತಿದ್ದು, ಗ್ರಾಮಸ್ಥರು ಇದರ ಸದುಪಯೋಗ ಪಡೆದುಕೊಳ್ಳುವ ಮೂಲಕ ಆರ್ಥಿಕವಾಗಿ ಸದೃಢರಾಗಿ ಗ್ರಾಮದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಹೇಳಿದರು.

ಇದಕ್ಕೂ ಮುನ್ನ ಜಾಥಾ ಹಾಗೂ ಮನೆ ಮನೆಗೆ ಕ್ಯೂ ಆರ್ ಕೋಡ್ ಅಂಟಿಸುವ ಪ್ರಚಾರ ವಾಹನಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಮುಬಾರಕ್ ಭಾನು, ಎಂ.ಬಿ.ರಫೀಕ್ ಚಾಲನೆ ನೀಡಿದರು. ಬಳಿಕ ಪ್ರಚಾರ ವಾಹನ ಪಂಚಾಯಿತಿ ವ್ಯಾಪ್ತಿಯ ಗೌರಿಪುರ, ನಂಜಾಪುರ, ಹೊಸಕೋಟೆ ಕಾಲೋನಿ, ಹೊನ್ನಿಕುಪ್ಪೆ ಕಾಲೋನಿ, ರತ್ನಪುರಿ, ಬ್ಯಾಡರ ಹಳ್ಳಿ ಕಾಲೋನಿ ಗ್ರಾಮಗಳಿಗೆ ತೆರಳಿ ನರೇಗಾ ಯೋಜನೆ ಕುರಿತು ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ಐಇಸಿ ಸಂಯೋಜಕಿ ಪುಷ್ಪಾ, ಸದಸ್ಯರಾದ ಗೌರಮ್ಮ ಶಂಕರ್, ರಾಮಭೋವಿ, ಗೋವಿಂದ ಶೆಟ್ಟಿ, ಮಾಜಿ ಸದಸ್ಯ ಮಹಮ್ಮದ್ ರಫೀಕ್, ಗ್ರಾಮದ ಮುಖಂಡರಾದ ಶಂಕರ ನಾಯಕ, ಮರಿಗೌಡ, ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.

ಹಂಪಾಪುರದಲ್ಲಿ ವಾಕ್–ಶ್ರವಣ ತಪಾಸಣೆ



ಹಂಪಾಪುರ, ಅ.22– ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೈಸೂರಿನ ಹರ್ಟ್ ಸಂಸ್ಥೆ, ಲಯನ್ಸ್ ಸಂಸ್ಥೆ, ಲಯನ್ಸ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್, ನವಾಯು ಫೌಂಡೇಷನ್ ಮತ್ತು ನ್ಯೂ ಡಯಾಕರ್ ಸೆಂಟರ್, ಹೆಚ್.ಡಿ.ಕೋಟೆ ತಾಲೂಕು ಆರೋಗ್ಯಾಧಿಕಾರಿ ಕಚೇರಿ ವತಿಯಿಂದ ವಾಕ್ ಮತ್ತು ಶ್ರವಣ ತಪಾಸಣೆ ಮತ್ತು ಚಿಕಿತ್ಸೆ ಉಚಿತ ಶಿಬಿರ ಆಯೋಜಿಸಲಾಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಶಿಬಿರಕ್ಕೆ ಚಾಲನೆ ನೀಡಿದರು. ಹರ್ಟ್ ಸಂಸ್ಥೆ ಅಧ್ಯಕ್ಷ ಶಿವಕುಮಾರ್ ಮಾತನಾಡಿದರು. ಹಂಪಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ತಿರುಮಹದೇವಸ್ವಾಮಿ, ಗ್ರಾಪಂ ಅಧ್ಯಕ್ಷೆ ದೇವಮ್ಮ, ಹಂಪಾಪುರ ಗ್ರಾಮಂ ಪಿಡಿಓ ಸೌಮ್ಯ, ಹೊಮ್ಮರಗಳ್ಳಿ ಗ್ರಾಪಂ ಪಿಡಿಓ ಗಣೇಶ್, ಆರೋಗ್ಯ ಕೇಂದ್ರದ ಸಿಬ್ಬಂದಿ ಪುಷ್ಪಾ, ರಾಮಚಂದ್ರ, ರವಿರಾಜ್, ಸುಮದೇವಿ, ಸವಿತಾ, ಹರ್ಟ್ ಸಂಸ್ಥೆಯ ವೈದ್ಯರು, ಸಿಬ್ಬಂದಿ ಇನ್ನಿತರರು ಹಾಜರಿದ್ದರು.

ನೈತಿಕ ಮೌಲ್ಯ ಕಲಿಸುವ ಶಿಕ್ಷಣ ಪ್ರಸ್ತುತ ಅಗತ್ಯ



ನಂಜನಗೂಡು, ಅ.22–ಶೈಕ್ಷಣಿಕ ಹಂತದಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಸಮುದಾಯದಲ್ಲಿ ಸಹಬಾಳ್ವೆ, ಭ್ರಾತೃತ್ವದಿಂದ ಜೀವನ ನಡೆಸಲು ನೆರವಾಗುತ್ತದೆ ಎಂದು ಶ್ರೀ ಕ್ಷೇತ್ರ ಸಂಗಮದ ಕಾರ್ಯಸ್ವಾಮಿ ಗದ್ದುಗೆ ಮಠದ ಮಹೇಶ್ವರಸ್ವಾಮೀಜಿ ಹೇಳಿದರು.

ತಾಲೂಕಿನ ಸುಕ್ಷೇತ್ರ ಸಂಗಮ ಮಹದೇವ ತಾತಾ ಗದ್ದುಗೆಯಲ್ಲಿ ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ವತಿಯಿಂದ ಆಯೋಜಿಸಿದ್ದ ಸಮುದಾಯ ಜೀವನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯ ಹಾಗೂ ಸಂಸ್ಕಾರವನ್ನು ಕಲಿಸುವ ಶಿಕ್ಷಣ ಪ್ರಸ್ತುತ ಕಾಲಘಟ್ಟಕ್ಕೆ ಅಗತ್ಯವಿದೆ. ಎಷ್ಟೇ ಶಿಕ್ಷಿತರಾದರೂ ನೈತಿಕ ಮೌಲ್ಯ ಹೊಂದಿಲ್ಲದಿದ್ದರೆ, ಅದು ಅನಕ್ಷರಸ್ಥನಿಗಿಂತಲೂ ಕಡೆಯಾಗಿರುತ್ತಾರೆ. ಈ ಕಾರಣಕ್ಕಾಗಿಯೇ ಇಂತಹ ಶಿಬಿರಗಳ ಆಯೋಜನೆ ಅಗತ್ಯ. ನಮ್ಮ ಪರಂಪರೆಯ ಅರಿವು ನಮ್ಮಲ್ಲಿ ಜಾಗೃತವಾಗಬೇಕಾದರೆ ಪ್ರತಿಯೊಬ್ಬರೂ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಸಂಸ್ಕಾರವಂತರಾದರೆ ಮಾತ್ರ ನಮ್ಮ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಲು ಸಾಧ್ಯ ಎಂದರು.

ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಚ್.ಎಂ.ಮಹೇಶ್ ಮಾತನಾಡಿ, ವ್ಯಕ್ತಿ ಸಮಾಜದಲ್ಲಿ ಬದುಕುವಾಗ ಅನೇಕ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಅಂತಹ ಸಂದರ್ಭ ದಲ್ಲಿ ಹೊಂದಾಣಿಕೆ ಮನಸ್ಥಿತಿ ಬೆಳೆಸಿ ಕೊಂಡು ಸೂಕ್ಷ್ಮಗ್ರಾಹಿಯಾಗಿ ಆಲೋಚನೆಯ ಮೂಲಕ ಪರಿಸ್ಥಿತಿಗಳನ್ನು ನಿರ್ವಹಿಸಬೇಕು. ಸಂಯಮ, ಸಹನೆಯನ್ನು ಮೈಗೂಡಿಸಿಕೊಂಡಾಗ ಎಂತಹ ಕ್ಲಿಷ್ಟ ಸನ್ನಿವೇಶಗಳನ್ನು ಸಮರ್ಥವಾಗಿ ಎದುರಿಸಲು ನೆರವಾಗುತ್ತದೆ. ಈ ದೃಷ್ಟಿಯಿಂದ ಸಮುದಾಯ ಜೀವನ ಶಿಬಿರ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ ಎಂದು ಹೇಳಿದರು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೆ.ವಿ.ಯೋಗೇಶ್, ಸಂಗಮ ಕ್ಷೇತ್ರ ಮಹದೇವ ತಾತಾ ಟ್ರಸ್ಟ್‌ನ ಕಾರ್ಯದರ್ಶಿ ಕೆಂಡಗಣ್ಣಪ್ಪ, ಕಾಲೇಜಿನ ಜಯಲಕ್ಷ್ಮೀ, ಸ್ವಾತಿ, ಗುಣಶ್ರೀ, ಸುರೇಶ್ ಹಾಗೂ ಮತ್ತಿತರರು ಹಾಜರಿದ್ದರು.

ಚನ್ನಕೇಶವ ನಿಧನ



ಬೆಟ್ಟದಪುರ: ಬೆಟ್ಟದಪುರ ಗ್ರಾಪಂ ಮಾಜಿ ಅಧ್ಯಕ್ಷ ಚನ್ನಕೇಶವ (52) ಭಾನುವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು. ಮೃತರಿಗೆ ಪತ್ನಿ ಗ್ರಾಪಂ ಸದಸ್ಯೆ ಸುಮಲತಾ, ಇಬ್ಬರು ಪುತ್ರಿಯರು, ಮೂವರು ಸಹೋದರರು, ಬಂಧು–ಬಳಗ ಇದ್ದಾರೆ. ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಸಚಿವ ಕೆ.ವೆಂಕಟೇಶ್, ಕಾಂಗ್ರೆಸ್ ಮುಖಂಡ ನಿತಿನ್ ವೆಂಕಟೇಶ್, ಗ್ರಾಪಂ ಅಧ್ಯಕ್ಷ ಬಿ.ಸಿ.ಗಿರೀಶ್, ಉಪಾಧ್ಯಕ್ಷ ವೀಣಾ ಮಲ್ಲೇಶ್ ಸಂತಾಪ ಸೂಚಿಸಿದ್ದಾರೆ.

ದಶರಥ ಶೆಟ್ಟಿ



ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಮದ ನಿವೃತ್ತ ಅಂಚೆ ನೌಕರ ದಶರಥ ಶೆಟ್ಟಿ (64) ಭಾನುವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರಿ, ಇಬ್ಬರು ಸಹೋದರರು, ಬಂಧು–ಬಳಗ ಇದ್ದಾರೆ. ಗ್ರಾಮದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಪತ್ರಕರ್ತ ಶ್ರೀನಿವಾಸ್‌ಶೆಟ್ಟಿ, ಗ್ರಾಪಂ ಅಧ್ಯಕ್ಷ ಪಿ.ದೇವರಾಜ್, ಮಾಜಿ ಉಪಾಧ್ಯಕ್ಷ ಕುಮಾರ್‌ಶೆಟ್ಟಿ ಸಂತಾಪ ಸೂಚಿಸಿದ್ದಾರೆ.



WANTED

▸ PHARMACIST

with or without experience but with certificate and 2 Wheeler Driving License

▸ PHARMA AID

with experience and 2 Wheeler Driving License

Send your resume to: The Manager
RAGHULAL & CO.,
207, Sayyaji Rao Road, Mysore - 570 001
Ph: 0821-2520733 / 4260733



ಜನಸಾಗರ ಹರಿದು ಬರುತ್ತಿದೆ.
ಸಾಹಸಗಳ ಸುರಿಮಳೆ, ಉತ್ತಮ ಮನರಂಜನೆ

ಜಂಬೊ ಸರ್ಕಸ್

ಬನ್ನಿ ನೋಡಿ ಆನಂದಿಸಿ

ಮುಂಗಡ ಬುಕ್ಕಿಂಗ್ ರೂ. 300/-

ದಿನ 3 ಪ್ರದರ್ಶನಗಳು
1ಕ್ಕೆ, 4ಕ್ಕೆ ಮತ್ತು 7ಕ್ಕೆ

ಇಥಿಯೋಪಿಯನ್, ಟ್ಯಾನ್‌ಜೇನಿಯನ್, ಆಫ್ರಿಕನ್ ಕಲಾವಿದರು ಹಾಗೂ ಇತರೆ ದೇಶಗಳ ಕಲಾವಿದರ ಸಾಹಸಮಯ ಪ್ರದರ್ಶನ

ಪ್ರವೇಶ ದರ: ರೂ. 100/–, ರೂ. 150/–, ರೂ. 200/–, ರೂ. 300/–

ಕಾರಂಜಿ ಕೆರೆ ಬಳಿ, ಮೃಗಾಲಯದ ಹಿಂಭಾಗ, ನಜರ್‌ಬಾದ್, ಮೈಸೂರು

ಕರೆ ಮಾಡಿ: 7991172237 / 9796790336 for advance booking: bookmyseats.in

(ಕರ್ನಾಟಕ ಸರ್ಕಾರ)
ಪ್ರಾಂಶುಪಾಲರ ಕಾರ್ಯಾಲಯ,
ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ,
ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು–570016
Ph: 0821-2413896 Email: hfwtcmysore@gmail.com
ಸಂಖ್ಯೆ: ಪ್ರಾಆಕುಕತಕೇ/ಮೈ/ಸರಬ/07/2023–24 ದಿ: 19.10.2023

ಇ–ಟೆಂಡರ್ ಪ್ರಕಟಣೆ

2023–24 ನೇ ಸಾಲಿನಲ್ಲಿ ಈ ಕಛೇರಿಯ ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಅಗತ್ಯವಿರುವ ಉಪಹಾರ, ಲಘುಉಪಹಾರ, ಕಾಫಿ, ಟೀ ಮತ್ತು ಇತ್ಯಾದಿಗಳನ್ನು ಪೂರೈಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರಂತೆ ಅಧಿಕೃತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ಅನ್ನು ಕರೆಯಲಾಗಿದೆ. ಸಂಬಂಧಿಸಿದ ವಿವರಗಳನ್ನು https://kppp.karnataka.gov.in/ ಮೂಲಕ ಪಡೆಯಬಹುದಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.12,00,000/–ಗಳು ಆಗಿದ್ದು, ಟೆಂಡರ್ ಅಪ್‌ಲೋಡ್ ಮಾಡಲು ದಿ: 19.10.2023 ರಂದು ಅಪರಾಹ್ನ 03.00 ಗಂಟೆಯಿಂದ, ದಿ: 02.11.2023 ರಂದು ಅಪರಾಹ್ನ 05.30 ಗಂಟೆಯ ವರೆಗೆ ಸಮಯ ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಅಥವಾ ದೂರವಾಣಿ ಮೂಲಕ ಪಡೆಯಬಹುದಾಗಿದೆ.

ಸಹಿ/– ಪ್ರಾಂಶುಪಾಲರು

DIPR/DDMYS/KSMCA/548/2023-24

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ರೂಪರೇಖಾ ಮತ್ತು ತನಿಖಾ ವಿಭಾಗ, ಬನ್ನೂರು, ಮೈಸೂರು ಜಿಲ್ಲೆ – 571101
ದೂ.ಸಂ. 08227–275653 Email: eedidbannur@gmail.com

ಹರಾಜು ಟೆಂಡರ್ ಪ್ರಕಟಣೆ ಸಂಖ್ಯೆ: 03/2023–24 ದಿ: 20.10.2023

(ಟೆಂಡರ್ ಕಂ ಮೊಹರ್‌ಬಂದ್ ಲಕೋಟೆ ಕಂ ಬಹಿರಂಗ ಹರಾಜು ಮುಖಾಂತರ ಮಾತ್ರ)

ಈ ಕಛೇರಿಯ ಹರಾಜು ಟೆಂಡರ್ ಪ್ರಕಟಣೆ ಸಂಖ್ಯೆ: 03/2023–24, ದಿ: 20.10.2023ರಲ್ಲಿ ಒಟ್ಟು 04 ಸಂಖ್ಯೆ ಅನುಪಯುಕ್ತ ವಾಹನಗಳನ್ನು "ಎಲ್ಲಿದೆಯೋ ಮತ್ತು ಹೇಗಿದೆಯೋ ಹಾಗೆ" ಟೆಂಡರ್ ಕಂ ಮೊಹರ್‌ಬಂದ್ ಲಕೋಟೆ ಕಂ ಬಹಿರಂಗ ಹರಾಜು ಮುಖಾಂತರ ವಿಲೇ ಮಾಡಲು ಹರಾಜು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ. ಮೊತ್ತ ರೂ.5000.00ಗಳು ಮತ್ತು ಅರ್ಜಿ ಶುಲ್ಕ ರೂ.500.00 (ಪ್ರತಿ ವಾಹನಕ್ಕೆ ಪ್ರತ್ಯೇಕವಾಗಿ ಪಾವತಿಸತಕ್ಕದ್ದು) ವಾಹನಗಳನ್ನು ವೀಕ್ಷಿಸಲು ಮತ್ತು ಖಾಲಿ ಟೆಂಡರ್ ನಮೂನೆಗಳನ್ನು ಪಡೆಯಲು ಕೊನೆಯ ದಿ: 04.11.2023ರ ಸಂಜೆ 5 ಗಂಟೆಯ ವರೆಗೆ. ಭರ್ತಿ ಮಾಡಿದ ಟೆಂಡರ್ ನಮೂನೆಗಳನ್ನು ಸಲ್ಲಿಸಲು ಕೊನೆಯ ದಿ: 06.11.2023 ಸಂಜೆ 5 ಗಂಟೆಯ ವರೆಗೆ ಬಹಿರಂಗ ಹರಾಜು ದಿ: 08.11.2023 ರಂದು ಬೆಳಿಗ್ಗೆ 11.30 ಗಂಟೆಗೆ ವಿಭಾಗ ಕಛೇರಿಯ ಆವರಣ, ಬನ್ನೂರು ಇಲ್ಲಿ ಟೆಂಡರ್ ಕಂ ಮೊಹರ್‌ಬಂದ್ ಲಕೋಟೆ ತೆರೆಯುವ ದಿ: 08.11.2023 ರಂದು ಬಹಿರಂಗ ಹರಾಜು ಪ್ರಕ್ರಿಯೆ ಪೂರ್ಣಗೊಂಡ ನಂತರ. ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

DIPR/DDMYS/KSMCA/560/2023-24 ಸಹಿ/– ಕಾರ್ಯಪಾಲಕ ಅಭಿಯಂತರರು




ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

4ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 4 ವರ್ಷ ಕಳೆದರೂ ನಿಮ್ಮ ನೆನಪಿನಲ್ಲೇ ಇರುವೆವು. ನೀವು ಹಾಕಿಕೊಟ್ಟ ಮಾರ್ಗದರ್ಶನವೇ ನಮಗೆ ಶ್ರೀರಕ್ಷೆ

ಗಂಗೆ ಮರಿಯಪ್ಪ ಬೋರೇಗೌಡರ ಮಗ
ನಾಗಯ್ಯ ಉ॥ ನಾಗಣ್ಣ

ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

14ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳು ಕಳೆದರು ನಿಮ್ಮ ನೆನಪು ಮಾತ್ರ ಶಾಶ್ವತವಾಗಿದೆ.

ದುಃಖತಪ್ತರು:
ಪತ್ನಿ-ವರಲಕ್ಷ್ಮಿ, ಮಕ್ಕಳಾದ ಶೈಲಜ, ರಾಕೇಶ್, ಕಿಶೋರ್, ಸೊಸೆಯಂದಿರು ಮತ್ತು ಮೊಮ್ಮಕ್ಕಳು

ದಿ॥ ಶ್ರೀ ಎಂ.ಆರ್.ಕೃಷ್ಣೇಗೌಡರು

ಗ್ರಾಮ ಲೆಕ್ಕಾಧಿಕಾರಿಗಳು, ಮಾದಾಪುರ, ಹೆಚ್.ಡಿ.ಕೋಟೆ ತಾ.

